

ಐಕ್ಯರಂಗ

"ನಾವಿತ್ತ ತೀರ್ಪನ್ನು ನೀವಿತ್ತ ವಚನವನ್ನು ಪಾಲಿಸಿ"

- ಎಂಬ ಜನರ ಒತ್ತಾಯ ಮನ್ನಿಸಿ-ಒಳಜಗಳ ನಿಲ್ಲಿಸಿ.

ಸಂಪುಟ 12 ಸಂಚಿಕೆ 30
ಜುಲೈ 29-1990 ಬೆಲೆ ರೂ 1.50

ಒಳಪುಟಗಳಲ್ಲಿ

(ಪಿ.ಡಿ.ಸಂಪಾದಕೀಯ)

ಬೀಸಿಬಂದ ಬಿರುಗಾಳಿ ಹೊರಟು ಹೋದಂತಿದೆ. ನಿಜವಾಗಿಯೂ ಹೊರಟು ಹೋಯಿತೇ? ಚೌತಲಾ ರಾಜೀನಾಮೆ ನೀಡಿದ್ದಾರೆ. ಆದರೆ ವಿಷಣ್ಣರಾದ ದೇವಿ ಲಾಲರು ಗಾಯ ಸವರುತ್ತಿದ್ದಾರೆ ಸಧ್ಯಕ್ಕಂತೂ ಬಿಕ್ಕಟ್ಟು ಕಳೆದಿದೆ. ಈ ಸರ್ಕಾರದ ಪಾಲಿಗೆ ನಾಳೆ ಏನಿದೆಯೋ, ಯಾರಿಗೂ ಗೊತ್ತಿಲ್ಲ.

ರಾಜೀವ ಗಾಂಧಿ ಸರ್ಕಾರವನ್ನು ಕಿತ್ತೆಸೆದು ಅದರ ಸ್ಥಾನದಲ್ಲಿ ವಿ.ಪಿ. ಸಿಂಗ್ ಸರ್ಕಾರವನ್ನು ಸ್ಥಾಪಿಸಿದರು ಜನ ಆಸೆಗಳನ್ನು ಹೊತ್ತು. ಬಹಳಷ್ಟು ನಿರೀಕ್ಷೆಯಿಟ್ಟುಕೊಂಡು. ಸತತವಾಗಿ ಮುಂದೇನೋ ಎಂಬ ಸ್ಥಿತಿಯಲ್ಲಿರುವ ಯಾವುದೇ ಸರಕಾರ ಆಸೆಗಳನ್ನು, ನಿರೀಕ್ಷೆಗಳನ್ನು ಈಡೇರಿಸಲಾರದು. ಇಲ್ಲಿಯೇ ಸ್ಥಿರತೆಯ ಪ್ರಶ್ನೆ ಬರುವುದು. ಸರಕಾರಕ್ಕೆ ಬಿಕ್ಕಟ್ಟು ಬಲಪಂಥೀಯರಿಂದಲೂ ಭುಗಿಲೆನ್ನಲಿಲ್ಲ; ಎಡಪಂಥೀಯರಿಂದಲೂ ಅಲ್ಲ. ಅವರ ಬೆಂಬಲ ವಿಮರ್ಶಾತ್ಮಕವಾಗಿದ್ದರೂ ಪೂರ್ಣ ಭರವಸೆಯಿತ್ತು. ಬಿಕ್ಕಟ್ಟು ಎದ್ದು ಬಂದದ್ದು ಜನತಾ ದಳದ ಒಳಗಿನಿಂದಲೇ. ಅದರಲ್ಲಿ ಅಡಕವಾಗಿದ್ದದ್ದು ಒಂದು ಮೂಲಭೂತ ನೈತಿಕ ಪ್ರಶ್ನೆ. ಯಾವುದೇ ಒಬ್ಬ ತಿಮ್ಮ, ಬೊಮ್ಮನ ಪ್ರಶ್ನೆಯಲ್ಲ. ಒಂದು ರಾಜ್ಯದ ಒಬ್ಬ ಮುಖ್ಯಮಂತ್ರಿಯ, ಹಿಂಸಾಚಾರ, ಚುನಾವಣಾ ಮೋಸ, ದೈಹಿಕ ಹಲ್ಲೆಯ ಆಪಾದನೆ ಹೊತ್ತ ಮುಖ್ಯಮಂತ್ರಿಯದೇ ಪ್ರಶ್ನೆ. ಈ ದೇಶದ ಒಬ್ಬ ಅತ್ಯುನ್ನತ ನ್ಯಾಯಾಧೀಶರಿಂದ ನ್ಯಾಯಾಂಗ ತನಿಖೆ ನಡೆಸಲಾಗುತ್ತದೆ. ನಂತರವೇ ಚೌತಾಲಾರ ಅದೃಷ್ಟದ ನಿರ್ಣಯ ಎಂದು ಸಾರ್ವಭೌಮ ಸಂಸತ್ತಿಗೆ ಆಶ್ವಾಸನೆ ನೀಡಿದ ಸ್ವತಃ ಪ್ರಧಾನ ಮಂತ್ರಿಗಳ ಪ್ರಶ್ನೆ.

ಎದೆಗುಂದದ ಚೌತಾಲಾ ನಾಟಕೀಯ ವಾಪಸಾತಿಯ ಸಂಚು ರಚಿಸಿದರು. ಜನ ಹೌಹಾರಿದರು. ಸಂಸದೀಯ ಪ್ರಜಾಪ್ರಭುತ್ವದ ರೀತಿ-ನೀತಿಗಳೆಲ್ಲಾ ಗಾಳಿಯಲ್ಲಿ ತೂರಿ ಹೋದವು. ಆಗ ಸೃಷ್ಟಿಸಿದ ಸುಳ್ಳು, ಉಸಿರು ಬಿಗಿ ಹಿಡಿದು ಕೇಳಬೇಕಾದ ಮಹಾ ಸುಳ್ಳು. ಪ್ರಧಾನಮಂತ್ರಿ ನಿಮ್ಮ ರಾಜೀನಾಮೆ ಬಯಸುತ್ತಾರೆ ಎಂದು ಅಧೀನ ಮುಖ್ಯಮಂತ್ರಿ ಬನಾರಸಿದಾಸ್ ಗುಪ್ತಾರಿಗೆ ಹೇಳಲಾಯಿತು. ನಂತರ ಪ್ರಜಾಪ್ರಭುತ್ವದ ಹೆಸರಿನಲ್ಲೇ ಮುಖ್ಯಮಂತ್ರಿಯಾಗಿ ತಮ್ಮನ್ನು ಪ್ರತಿಷ್ಠಾಪಿಸಿಕೊಂಡರು. ಹೀಗೆ ಮಾಡುವಾಗ ಚೌತಾಲಾ ಮತ್ತು ಅವರನ್ನು ಮುಂದೆ ಮಾಡಿದವರು, ಒಂದು ಪ್ರಾಥಮಿಕ ಸಂಗತಿಯನ್ನೇ ಮರೆತರು. ಉದಾ : ಉತ್ತರ ಪ್ರದೇಶ, ಬಿಹಾರ ವಿಧಾನಸಭೆಗಳಿಗೆ ಕ್ರಿಮಿನಲ್‌ಗಳು 'ಪ್ರಜಾಸತ್ತಾತ್ಮಕ'ವಾಗಿಯೇ ಚುನಾಯಿತರಾದರೂ ಅವರು ಕ್ರಿಮಿನಲ್‌ಗಳೆಂದು ಗುರುತಿಸುವುದನ್ನು ಜನ ನಿಲ್ಲಿಸಲಿಲ್ಲ. ವಿಮಾನ ಅಪಹರಣ ಮಾಡಿದ ವ್ಯಕ್ತಿ, ಕಾಂಗ್ರೆಸ ಟಿಕೆಟ್ಟಿನ ಮೇಲೆ ಶಾಸಕನಾದಾಗ ಜನ ಕಾಂಗ್ರೆಸ್(ಐ) ಅನ್ನು ಖಂಡಿಸಿದರು. ಇವುಗಳಲ್ಲೆಲ್ಲಾ ಇದ್ದದ್ದು ಕೇವಲ ಪ್ರಜಾಪ್ರಭುತ್ವದ ಪ್ರಾಥಮಿಕ ಪ್ರಶ್ನೆಯಷ್ಟೇ ಅಲ್ಲ, ನೀತಿಯ ಮತ್ತು

ಪುಟ 8 ಕ್ಕೆ

ಖಾಸಗೀ ವಲಯ ಉತ್ಪಾದನೆ ಮಿತಿ ಏರಿಕೆ

ಗುತ್ತೇದಾರಿ-ಪರ ನಿರ್ಣಯ ಎಂದು ಪಿ.ಬಿ.ಟೀಕೆ

ವಾರ್ಷಿಕ 10 ಲಕ್ಷ ಟನ್‌ವರೆಗೆ ಉಕ್ಕು ಉತ್ಪಾದನೆಯ ಘಟಕಗಳನ್ನು ಸ್ಥಾಪಿಸಲು ಖಾಸಗೀ ವಲಯಕ್ಕೆ ಅವಕಾಶ ನೀಡುವ ರಾಷ್ಟ್ರೀಯ ರಂಗ ಸರ್ಕಾರದ ನಿರ್ಧಾರದ ಬಗ್ಗೆ ಸಿ.ಪಿ.ಐ. (ಎಂ) ಪೊಲಿಟ್ ಬ್ಯೂರೋ ತೀವ್ರ ಆತಂಕ ವ್ಯಕ್ತಪಡಿಸಿದೆ. ಮೇ ತಿಂಗಳಲ್ಲಷ್ಟೇ 2.5 ಲಕ್ಷಕ್ಕೇರಿಸಿದ್ದ ಈ ಮಿತಿಯನ್ನು ಎರಡು ತಿಂಗಳೊಳಗೇ ಮತ್ತೊಮ್ಮೆ ಏರಿಸಿ 10 ಲಕ್ಷ ಮಾಡಲಾಗಿದೆ. ಇದು ಪೂರ್ಣವಾಗಿ ಗುತ್ತೇದಾರಿ ಮನೆತನಗಳಿಗೆ ಪರವಾದ ಒಂದು ನಿರ್ಣಯ ಎಂದು ಹೇಳಿರುವ ಪಿ.ಬಿ. ಈ ನಿರ್ಣಯ ಸಾರ್ವಜನಿಕ ವಲಯದ ಬಲಕ್ಕೆ ಕೇಡು ತರಲಿದೆ. ನಮ್ಮ ಆರ್ಥಿಕದ ಈ ಪ್ರಮುಖ ವಲಯದೊಳಗೆ ವಿದೇಶೀ ಗುತ್ತೇದಾರಿ ಬಂಡವಾಳ ನುಸುಳಲು ಬಾಗಿಲು ತೆರೆದಂತಾಗಿದೆ ಎಂದು ಟೀಕಿಸಿದೆ.

ಭಾರತದ ಆರ್ಥಿಕ ಸ್ವಾವಲಂಬನೆಗೆ ಇಂತಹ ಒಂದು ನಾಚಿಕೆಯಿಲ್ಲದ ಉದಾರೀಕರಣದ ಧೋರಣೆ ಹಾನಿಕಾರಕ ಎಂದು ರಾಷ್ಟ್ರೀಯ ರಂಗ ಸರ್ಕಾರಕ್ಕೆ ಸಿ.ಪಿ.ಐ. (ಎಂ) ಈ ಮೊದಲೇ ಎಚ್ಚರಿಸಿತ್ತು. ಇದರಿಂದಾಗಿಯೇ ಸರಕಾರದ ಕೈಗಾರಿಕಾ ಧೋರಣೆಯನ್ನೂ ಟೀಕಿಸಿತ್ತು. ಆದರೆ ಸರಕಾರ ಇದರತ್ತ ಲಕ್ಷ್ಯ ನೀಡಿಲ್ಲ ಎಂಬುದು ವ್ಯಸನವುಂಟುಮಾಡುವ ಸಂಗತಿ ಎಂದಿರುವ ಪಿ.ಬಿ. ಸರಕಾರ ತದ್ವಿರುದ್ಧವಾಗಿ ಕೈಗಾರಿಕಾ ಧೋರಣೆಯನ್ನು ಉದಾರೀಕರಣಗೊಳಿಸಲು ಉಸಿರು ಗಟ್ಟಿಸುವ ವೇಗದಿಂದ ಧಾವಿಸುತ್ತಿದೆ ಮತ್ತು ಖೇದ ವ್ಯಕ್ತ ಪಡಿಸಿದೆ. ಸರಕಾರ ವಿಶ್ವ ಬ್ಯಾಂಕಿಗ್ ಮತ್ತು ಐ.ಎಂ.ಎಫ್. ಒತ್ತಡಗಳಿಗೆ ಸರಕಾರ ಸುಮಾರಾಗಿ ಬಲಿಯಾಗಿದೆಯೆಂದೇ ಹೇಳಬೇಕಾಗುತ್ತದೆ.

ಈ ನೀತಿಯನ್ನು ಜಾರಿಗೆ ತರುವ ಮೊದಲು ಸಂಸತ್ತಿನಲ್ಲಿ ಈ ಬಗ್ಗೆ ಸಮಗ್ರ ಚರ್ಚೆ ನಡೆಸಬೇಕೆಂದು ರಾಷ್ಟ್ರೀಯ ರಂಗ ಸರಕಾರವನ್ನು ಸಿ.ಪಿ.ಐ.(ಎಂ) ಒತ್ತಾಯಿಸಿದೆ. ಸಾರ್ವಜನಿಕ ವಲಯವನ್ನು ಇನ್ನಷ್ಟು ದುರ್ಬಲಗೊಳಿಸುವ ಯಾವುದೇ ಪ್ರಯತ್ನಕ್ಕೆ ನಮ್ಮ ದೃಢ ವಿರೋಧವಿದೆ. ಉದಾರೀಕರಣದ ಇಂತಹ ನೀತಿಯು ಜನಸಾಮಾನ್ಯರ ಮೇಲೆ ಇನ್ನಷ್ಟು ಹೊರೆ ಹೇರಲಿದೆಯಷ್ಟೇ ಅಲ್ಲ, ಭಾರತದ ಆರ್ಥಿಕವನ್ನು ಅಡವಿಟ್ಟಂತಾಗುತ್ತದೆ. ಫಲವಾಗಿ ನಮ್ಮ ರಾಜಕೀಯ ಸ್ವಾತಂತ್ರ್ಯಕ್ಕೂ ಅಪಾಯ ತಪ್ಪಲಿದೆ ಎಂದು ಸಿ.ಪಿ.ಐ.(ಎಂ) ಪೊಲಿಟ್‌ಬ್ಯೂರೋ ಎಚ್ಚರಿಸಿದೆ.

"ಮೌಲ್ಯಾಧಾರಿತ" ಪತ್ರಿಕಾ ರಂಗ!

ನಿಮ್ಮ ಗಂಭೀರ ಮೌನ ತ್ರಿಪುರಾದಲ್ಲಿ ಕಮ್ಯುನಿಸ್ಟರ ಕಥೆ ಮುಗಿಸಲಾರದು!

ಕಲ್ಕತ್ತಾ ಮುನಿಸಿಪಲ್ ಚುನಾವಣೆಗಳ ಬಗ್ಗೆ ಸುಳ್ಳುಗಳನ್ನು ಹರಡಲು ದೊಡ್ಡ ಪತ್ರಿಕೆಗಳು ಎಷ್ಟು ಕಾಲಂಗಳನ್ನು ಕಾದಿರಿಸಿದವು. ಈಗ ತ್ರಿಪುರಾದಲ್ಲಿ ಸ್ವಾಯತ್ತ ಜಿಲ್ಲಾ ಮಂಡಳಿಯ ಚುನಾವಣೆಗಳ ನಂತರ ಏನು ನಡೆಯುತ್ತಿದೆ ಎಂಬುದರ ಒಂದು ಇಣುಕು ನೋಟ ನೀಡಲು ಅವು ಎಷ್ಟು ಸ್ಥಳ ಇಟ್ಟವೆ?

ತ್ರಿಪುರಾದಲ್ಲಿ ಚುನಾವಣೆಯ ಸಮಯದಲ್ಲಿ ವ್ಯಾಪಕ ಹಿಂಸಾಚಾರ ನಡೆಯಿತು. ನಂತರವೂ ನಡೆಯುತ್ತಲೇ ಇದೆ. ಈಗಾಗಲೇ ಹತ್ತು ಪ್ರಾಣ ಹೋಗಿವೆ. ನೂರಾರು ಜನ ಆಸ್ಪತ್ರೆ ಸೇರಿದ್ದಾರೆ. ಸಾವಿರಾರು ಜನ ಮನೆ - ಮಠ ಕಳೆದುಕೊಂಡಿದ್ದಾರೆ-ತಮ್ಮದೇ ನೆಲದಲ್ಲಿ ನಿರ್ಗತಿಕರಾದವರು ಸಾವಿರಾರು ಜನ. ಸಿ.ಪಿ.ಐ(ಎಂ)ನ್ನು ತ್ರಿಪುರದಲ್ಲಿ ನಿರ್ನಾಮ ಮಾಡುವ ಪಣ ತೊಟ್ಟಂತಿದೆ ಕಾಂಗ್ರೆಸ್(ಐ). ಆದರೆ ನಮ್ಮ ದೊಡ್ಡ ಪತ್ರಿಕೆಗಳಲ್ಲಿ, ಈ ಭಯಾನಕತೆಯ ಅರಿವು ನಿಮಗೆದೊರೆತಿದೆಯೇ?

ಎಂತಹ ಮೌಲ್ಯಗಳನ್ನು ನಮ್ಮ ದೇಶದ ಪತ್ರಿಕಾ ರಂಗ ಎತ್ತಿ ಹಿಡಿಯುತ್ತಿದೆ? ಚೌತಾಲಾರ ಬಗ್ಗೆ ಈ ಪತ್ರಿಕೆಗಳು ಬಹಳ ಬರೆದಿವೆ. ಆದರೆ ಚೌತಾಲಾರು ಕೂಡಾ ಊಹಿಸಲಾರದಷ್ಟು ವ್ಯಾಪಕವಾದದ್ದು, ಭಯಾನಕವಾದದ್ದು ಮಾಜಿ ಕಾಂಗ್ರೆಸ್ ಕೇಂದ್ರ ಮಂತ್ರಿ ಸಂತೋಷ್ ಮೋಹನ್ ದೇಬ್‌ರ ಅನುಯಾಯಿಗಳ ಕರಾಳ ಕೃತ್ಯಗಳು. 1988ರಿಂದ ಸತತ ನಾಲ್ಕನೇ ಬಾರಿ ಚುನಾವಣೆಗಳಲ್ಲಿ, ವ್ಯಾಪಕ ಮೋಸ ನಡೆಸಿದ ಕೀರ್ತಿ ಕಾಂಗ್ರೆಸಿಗರದ್ದು. ದೊಡ್ಡ ಪತ್ರಿಕೆಗಳಿಗೆ ಏಕೆ ಇದು ಕಾಣುತ್ತಿಲ್ಲ?

ಇತರರ ಮುಖ್ಯವಾಗಿ, ರಾಜಕಾರಣಿಗಳ 'ಮೌಲ್ಯಾಧಾರಿತ ರಾಜಕಾರಣ'ದ ಪತನದ ಬಗ್ಗೆ ಉಪದೇಶ ಬಿಗಿಯುವ ಈ ಪತ್ರಿಕೆಗಳು ತಮ್ಮ ಮೌಲ್ಯಗಳೇನು ಎಂದು ಆತ್ಮ ವಿಮರ್ಶೆ ಮಾಡಿಕೊಳ್ಳುವ ಅವಶ್ಯಕತೆಯಿಲ್ಲವೇ?

ಹೌದು, ನಮಗೆ ಆಶ್ಚರ್ಯವಾಗಬೇಕಿಲ್ಲ. ಏಕೆಂದರೆ ಎಲ್ಲಾ ಮೌಲ್ಯಗಳು ಸಾಪೇಕ್ಷ. ಅಂದರೆ ಒಬ್ಬನಿಗೆ, ಒಂದು ವರ್ಗಕ್ಕೆ ಉನ್ನತವಾದ ಮೌಲ್ಯ ಇನ್ನೊಂದು ವರ್ಗಕ್ಕೆ ನಗಣ್ಯವಾಗಿರಬಹುದು. ತದ್ವಿರುದ್ಧವೂ ಆಗಿರಬಹುದು. ಈ ದೊಡ್ಡ ಪತ್ರಿಕೆಗಳ ಅಳತೆಗೋಲಿನಲ್ಲಿ, ಒಬ್ಬ ಕಾಂಗ್ರೆಸ್ಸಿಗನ, ಒಬ್ಬ ಜನತಾ ದಳೀಯನ ಅಥವಾ ಒಬ್ಬ ಕಮ್ಯುನಿಸ್ಟನ ಜೀವಕ್ಕೆ ಬೇರೆ ಬೇರೆ ಬೆಲೆ. ಅತೀ ಕಮ್ಮಿ ಬೆಲೆಯಿರುವುದು ಒಬ್ಬ ಕಮ್ಯುನಿಸ್ಟನ ಜೀವನಕ್ಕೆ, ಜೀವಕ್ಕೆ. ನಿಜ ಪತ್ರಿಕಾ ರಂಗ ಕಮ್ಯುನಿಸ್ಟರ ನಿರ್ನಾಮ ಸಮಾಚಾರಕ್ಕೆ ಒಂದು ಒಳ್ಳೆಯ

ಪುಟ 8 ಕ್ಕೆ

ನಾವು ನಿಷ್ಪಕ್ಷಪಾತಿಗಳು, ಮತ್ತು ನಿಷ್ಠುರರು ಎಂದೆಲ್ಲಾ ಹೆಮ್ಮೆ ಈ ಪತ್ರಿಕಾ ರಂಗಕ್ಕೆ. ಇದೆಲ್ಲಾ ಕೇವಲ ನಿಮ್ಮ ಭ್ರಮೆ, ಶುದ್ಧ ಸುಳ್ಳು ಎಂದು ಜನರೇ ನೋಡಿ ತಿಳಿದಾಗಿದೆ.

ಕೆಲಸದ ಹಕ್ಕು ಸಾಧಿಸಲು

ಮೂರು ಘಟ್ಟಗಳ ಕ್ರಮಗಳ ಸಲಹೆ

"ಕೆಲಸದ ಹಕ್ಕು" ಸಂವಿಧಾನದಲ್ಲಿ ಮೂಲಭೂತ ಹಕ್ಕೆಂದು ಪ್ರತಿಷ್ಠಾಪನೆಗೊಳ್ಳುವುದರಿಂದಷ್ಟೇ ಎಲ್ಲರಿಗೂ ಈ ಹಕ್ಕು ದೊರೆಯಲು ಸಾಧ್ಯವಿಲ್ಲ. ಇಡೀ ಆರ್ಥಿಕ ಧೋರಣೆಯನ್ನು ಪುನರ್‍ರೂಪಿಸಿ, ಹೆಚ್ಚು ಉತ್ಪಾದಕ ಉದ್ಯೋಗಾವಕಾಶಗಳು ನಿರ್ಮಾಣವಾಗುವಂತಹ ಪರಿಸ್ಥಿತಿಯನ್ನು ದೇಶದ ಆರ್ಥಿಕದಲ್ಲಿ ನಿರ್ಮಿಸದಿದ್ದರೆ ಈ ಹಕ್ಕು ಎಲ್ಲರಿಗೂ ಸಿಗುವ ಸಾಧ್ಯತೆಯೂ ಇಲ್ಲ ಎಂದು ಕೆಲಸದ ಹಕ್ಕು ಕುರಿತು ಅಖಿಲ ಭಾರತ ಸ್ಟಿಯರಿಂಗ್ ಸಮಿತಿ ಜುಲೈ 18 ರಂದು ಹೊರಡಿಸಿದ ಪ್ರಾಸ್ತಾವಿಕ ದಸ್ತಾವೇಜಿನಲ್ಲಿ ಸ್ಪಷ್ಟ ಅಭಿಪ್ರಾಯ ಪಟ್ಟಿದೆ. ಈ ವರ್ಷ ಏಪ್ರಿಲ್ 2-4 ರವರೆಗೆ ದುರ್ಗಾಪುರದಲ್ಲಿ ನಡೆದ ಅಖಿಲ ಭಾರತ ಕಾರ್ಮಿಕ ಸಂಘಗಳ ಸಮಾವೇಶ ಈ ಚುಕ್ಕಾಣಿ ಸಮಿತಿಯನ್ನು ರಚಿಸಿತ್ತು. ಕೆಲಸದ ಹಕ್ಕಿಗೆ ಬೆಂಬಲವಾಗಿ ಒಂದು ಆಂದೋಲನ ರೂಪಿಸಲು ಈ ಸಮಿತಿ ರಚಿಸಲಾಗಿತ್ತು.

ಚುಕ್ಕಾಣಿ ಸಮಿತಿ ಈ ದಿಸೆಯಲ್ಲಿ ಮೂರು ಘಟ್ಟಗಳ ಕ್ರಮಗಳನ್ನು ಸೂಚಿಸಿದೆ - 1. ತಕ್ಷಣದ ಕ್ರಮಗಳು 2. ಅಲ್ಪಕಾಲಾವಧಿ ಕ್ರಮಗಳು 3. ದೀರ್ಘ ಕಾಲಾವಧಿಯ ಕ್ರಮಗಳು.

ತಕ್ಷಣದ ಕ್ರಮಗಳೆಂದರೆ ತೀವ್ರಗಾಮಿ ಭೂಸುಧಾರಣೆ, ನೇಮಕಾತಿಯ ಮೇಲಿನ ನಿರ್ಬಂಧ ರದ್ಧತಿ, ಜೀವನಾವಶ್ಯಕ ಸಾಮಗ್ರಿಗಳ ಸಗಟು ವ್ಯಾಪಾರ ವಹಿಸಿಕೊಳ್ಳುವುದು, ಕೃಷಿ ಕಾರ್ಮಿಕರಿಗೆ ಒಂದು ಕೇಂದ್ರೀಯ ಶಾಸನ, ಅವರ ಉದ್ಯೋಗ, ಕೂಲಿಯ ರಕ್ಷಣೆ, ಸಣ್ಣ ಪ್ರಮಾಣದ ಉದ್ದಿಮೆಗಳಿಗೆ ರಕ್ಷಣೆ, ಲಂಗುಲಗಾಮಿಲ್ಲದ ಯಂತ್ರೀಕರಣ, ಕಂಪ್ಯೂಟರೀಕರಣದಿಂದ ಉದ್ಯೋಗಾವಕಾಶವನ್ನು ಕಡಿತಗೊಳಿಸುವ ನೀತಿ ಕೈ ಬಿಡುವುದು ಇತ್ಯಾದಿ.

ಇದರಲ್ಲಿ ತೀವ್ರಗಾಮಿ ಭೂಸುಧಾರಣೆ ಅತೀ ಮುಖ್ಯ. ಏಕೆಂದರೆ ಇದರಿಂದ ಕೃಷಿ ಭೂಮಿ ಕೆಲವೇ ಕೈಗಳಲ್ಲಿ ಕೇಂದ್ರೀಕರಿಸಿರುವ, ಅದರಿಂದಾಗಿ ಗ್ರಾಮೀಣ ಭಾರತದಲ್ಲಿ ಜನಸಮೂಹಗಳ ದರಿದ್ರೀಕರಣ ಸ್ಥಿತಿ, ಫಲವಾಗಿ ಅವರ ನಿರ್ಬಲ ಕೊಳ್ಳುವ ಶಕ್ತಿಯಿಂದಾಗಿ ದೇಶದ ಕೈಗಾರಿಕಾ ಉತ್ಪಾದನೆಗೆ ಆಂತರಿಕ ಮಾರು ಕಟ್ಟೆಯಿಲ್ಲದೆ ಆರ್ಥಿಕದಲ್ಲಿ ಸ್ಥಗಿತತೆಯ ಪರಿಸ್ಥಿತಿ ಬದಲಾಗಿ ಮುಚ್ಚಿದ, ರೋಗಗ್ರಸ್ತ ಘಟಕಗಳನ್ನು ತೆರೆಯ ಬಹುದಾದ, ಗ್ರಾಮೀಣ ಜನಗಳ ಸ್ಥಿತಿ ಸುಧಾರಿಸಿ ಆಂತರಿಕ ಮಾರುಕಟ್ಟೆ ವಿಸ್ತಾರಗೊಳ್ಳಬಹುದಾದ, ಅದರಿಂದಾಗಿ ಇಡೀ ದೇಶದ ಆರ್ಥಿಕ ಸುಧಾರಿಸ ಬಹುದಾದ ಸ್ಥಿತಿ ನಿರ್ಮಾಣ ಗೊಳ್ಳಲು ಸಾಧ್ಯ.

ಈ ಕ್ರಮಗಳನ್ನೆಲ್ಲಾ ಹಂತ ಹಂತವಾಗಿ ಜ್ಯಾರಿಗೆ ತರಬೇಕು. ಇದರಲ್ಲಿ ಸ್ಥಳೀಯ ಸ್ವಯಮಾಡಳಿತ ಸಂಸ್ಥೆಗಳು, ಪಂಚಾಯತುಗಳು, ಉದ್ದಿಮೆಗಳ ನಿರ್ವಹಣೆಯಲ್ಲಿ ಕಾರ್ಮಿಕರ ಅರ್ಥ ಪೂರ್ಣ ಪಾತ್ರ ಮುಂತಾದ ಅಧಿಕಾರದ ವಿಕೇಂದ್ರೀಕರಣದ ಕ್ರಮಗಳ ಮೂಲಕ ತೀವ್ರಗಾಮಿ ಕ್ರಮಗಳು ವಿರೂಪಗೊಳ್ಳದೇ ಜ್ಯಾರಿಗೆ ಬರುವಂತಾಗಬೇಕೆಂದು ಹೇಳಿರುವ ಸ್ಟಿಯರಿಂಗ್ ಸಮಿತಿ ಬಡತನದ ರೇಖೆಯ ಮೇಲೆ ಜೀವನ ಸ್ಥಿತಿಯಿರುವಂತೆ ನಿರುದ್ಯೋಗ ಭತ್ತೆ ನೀಡುವ ಅಗತ್ಯವನ್ನೂ ಒತ್ತಿ ಹೇಳಿದೆ.

ಸ್ಟಿಯರಿಂಗ್ ಸಮಿತಿ ಸೂಚಿಸಿರುವ ಅಲ್ಪ ಕಾಲಾವಧಿಯ ಕ್ರಮಗಳೆಂದರೆ ನೀರಾವರಿ, ಅರಣ್ಯೀಕರಣ, ಕೃಷಿ ಆಧಾರಿತ ಉದ್ದಿಮೆಗಳ ಬೆಳವಣಿಗೆ, ಭಾರತಕ್ಕೆ ಸೂಕ್ತವಾದ ತಂತ್ರಜ್ಞಾನದ, ಶ್ರಮಶಕ್ತಿಗೆ ಹೆಚ್ಚು ಒತ್ತು ನೀಡುವ ತಂತ್ರಜ್ಞಾನದ ಆಯ್ಕೆ, ಬಳಕೆ ಸಾಮಗ್ರಿಗಳ ಉತ್ಪಾದನೆಯ ವಿಸ್ತರಣೆ, ಸಾರ್ವಜನಿಕ ವಲಯವನ್ನು ಬಲಪಡಿಸುವುದು, ಸ್ವದೇಶಿ ಪ್ರಯತ್ನಗಳ ಮೂಲಕ ಆಮದು ಕಡಿತ ಇತ್ಯಾದಿ.

ದೀರ್ಘಕಾಲೀನ ಕ್ರಮಗಳೆಂದರೆ ಉದ್ದಿಮೆಗಳ ರಾಷ್ಟ್ರೀಕರಣ ಮತ್ತು ಎಲ್ಲಾ ರೀತಿಯ ಪಾಳೆಯಗಾರೀ ಶೋಷಣೆಯ ಅಂತ್ಯ.

ಈ ಕ್ರಮಗಳನ್ನೆಲ್ಲಾ ಹಂತ ಹಂತವಾಗಿ ಜ್ಯಾರಿಗೆ ತರಬೇಕು. ಇದರಲ್ಲಿ ಸ್ಥಳೀಯ ಸ್ವಯಮಾಡಳಿತ ಸಂಸ್ಥೆಗಳು, ಪಂಚಾಯತುಗಳು, ಉದ್ದಿಮೆಗಳ ನಿರ್ವಹಣೆಯಲ್ಲಿ ಕಾರ್ಮಿಕರ ಅರ್ಥ ಪೂರ್ಣ ಪಾತ್ರ ಮುಂತಾದ ಅಧಿಕಾರದ ವಿಕೇಂದ್ರೀಕರಣದ ಕ್ರಮಗಳ ಮೂಲಕ ತೀವ್ರಗಾಮಿ ಕ್ರಮಗಳು ವಿರೂಪಗೊಳ್ಳದೇ ಜ್ಯಾರಿಗೆ ಬರುವಂತಾಗಬೇಕೆಂದು ಹೇಳಿರುವ ಸ್ಟಿಯರಿಂಗ್‌ಸಮಿತಿ ಬಡತನದ ರೇಖೆಯ ಮೇಲೆ ಜೀವನ ಸ್ಥಿತಿಯಿರುವಂತೆ ನಿರುದ್ಯೋಗ ಭತ್ತೆ ನೀಡುವ ಅಗತ್ಯವನ್ನೂ ಒತ್ತಿ ಹೇಳಿದೆ.

ಈ ಪ್ರಾಸ್ತಾವಿಕ ದಸ್ತಾವೇಜನ್ನು ಬಿಡುಗಡೆ ಗೊಳಿಸುತ್ತಾ ಸ್ಟಿಯರಿಂಗ್ ಸಮಿತಿ ಈ ನಡುವೆ ರಾಷ್ಟ್ರೀಯ ರಂಗ ಸರ್ಕಾರ ಪ್ರಕಟಪಡಿಸಿರುವ ಕೈಗಾರಿಕಾ ಧೋರಣೆ ಕೆಲವು ಪ್ರಶ್ನೆಗಳ ಮೇಲೆ ತದ್ವಿರುದ್ಧ ದಿಕ್ಕು ಹಿಡಿದಿರುವ ಬಗ್ಗೆ ತೀವ್ರ ಆತಂಕ ವ್ಯಕ್ತಪಡಿಸಿದೆ. ಇದು ದೇಶದ ಆರ್ಥಿಕ ಸ್ವಾವಲಂಬನೆಗೆ ಹಾನಿಕಾರಕ ಮಾತ್ರವಲ್ಲ, ಉದ್ಯೋಗಾವಕಾಶ ಗಳಲ್ಲಿ ಮತ್ತಷ್ಟು ಕಡಿತ ತರಲಿದೆ ಎಂದು ಅದು ಭಯ ವ್ಯಕ್ತಪಡಿಸಿದೆ.

ಕೆಲಸದ ಹಕ್ಕನ್ನು ಸಾಧಿಸಲು ಅನುವಾಗುವಂತೆ ಸರಕಾರದ ಆರ್ಥಿಕ ಧೋರಣೆ ಸರಿಯಾದ ದಿಕ್ಕು ಹಿಡಿಯುವಂತೆ ಮಾಡಲು ಸರಕಾರದ ಮೇಲೆ ಜನ ಸಮೂಹಗಳ ಒತ್ತಡ ತರಬೇಕು. ಇದಕ್ಕೆ ಎಲ್ಲಾ ಜನ ವಿಭಾಗಗಳನ್ನು ಕಾರ್ಮಿಕರನ್ನು, ವಿದ್ಯಾರ್ಥಿಗಳನ್ನು, ಯುವ ಜನರನ್ನು, ಮಹಿಳೆಯರನ್ನು, ಬುದ್ಧಿ ಜೀವಿಗಳನ್ನು ಒಳಗೊಂಡ ಒಂದು ವ್ಯಾಪಕ ಆಂದೋಲನವನ್ನು ರೂಪಿಸಬೇಕೆಂದು ಸ್ಟಿಯರಿಂಗ್ ಸಮಿತಿ ಒತ್ತಿ ಹೇಳಿದೆ.

ನವದೆಹಲಿಯಲ್ಲಿ 17-7-90 ರಂದು ಸಭೆ ಸೇರಿದ ಸ್ಟಿಯರಿಂಗ್ ಸಮಿತಿ ಕೆಲಸದ ಹಕ್ಕಿನ ಬಗ್ಗೆ ಒಂದು ಸರ್ವ ಸಾಮಾನ್ಯ ನಿಲುವು ಮೂಡಿಸಲು ಎಲ್ಲಾ ಜನ ವಿಭಾಗಗಳ ಪ್ರಜಾಸತ್ತಾತ್ಮಕ ಸಂಘಟನೆಗಳು ಭಾಗವಹಿಸುವ ಒಂದು ರಾಷ್ಟ್ರೀಯ ವಿಚಾರ ಸಂಕಿರಣ ನಡೆಸಲು ನಿರ್ಧರಿಸಿತು ಎಂದು ಸಮಿತಿಯ ಪರವಾಗಿ ದಸ್ತಾವೇಜನ್ನು ಬಿಡುಗಡೆ ಮಾಡುತ್ತಾ ಸಮಿತಿಯ ಸಂಯೋಜಕರಾದ ಡಾ. ಎಂ.ಕೆ. ಪಂಧೆ ನೀಡಿದ ಹೇಳಿಕೆಯಲ್ಲಿ ತಿಳಿಸಿದ್ದಾರೆ.

"ಕಮ್ಯುನಿಸ್ಟ್ ಚಳುವಳಿ ನನ್ನನ್ನು ಸೆಳೆದ ಬಗೆ"

ದೇಶವನ್ನು ಕ್ರಾಂತಿಯತ್ತ ನಡೆಸುವ ಮಹತ್ವದ ಕೆಲಸಕ್ಕಾಗಿ ನಮ್ಮ ಸಂಗಾತಿಗಳು ಕಮ್ಯುನಿಸ್ಟ್ ಚಳುವಳಿಯತ್ತ 'ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದತ್ತ ಸೆಳೆಯಲ್ಪಟ್ಟಿದ್ದಾರೆ. ಒಬ್ಬೊಬ್ಬ ಸಂಗಾತಿಯದು ಒಂದೊಂದು ವಿಶಿಷ್ಟ ಅನುಭವ. ಕರ್ನಾಟಕದ ಹಿರಿಯ ಕಮ್ಯುನಿಸ್ಟರಾದ ಕಾಂ ಎನ್ನೆಯವರು ತಾನು ಕಮ್ಯುನಿಸ್ಟನಾದ ಬಗೆಯನ್ನು ನಿಮಗೆ ತಿಳಿಸಿದ್ದಾರೆ. ಇನ್ನೊಬ್ಬ ಹಿರಿಯ ಮುಂದಾಳು ಕಾಂ. ಸೂರಿಯವರು ಹೇಗೆ ಕಮ್ಯುನಿಸ್ಟ್ ಚಳುವಳಿಯತ್ತ ಸೆಳೆಯಲ್ಪಟ್ಟರು ಎಂಬುದನ್ನು ಓದುತ್ತಿರುವಿರಿ. ಮುಂದಿನ ಸಂಚಿಕೆಗಳಲ್ಲಿ ಕೇಂದ್ರ ಸಮಿತಿ ಸದಸ್ಯ ಮತ್ತು ರಾಜ್ಯ ಕಾರ್ಯದರ್ಶಿ ಕಾಂ.ಪಿ.ಆರ್. ಆರ್. ಇನ್ನೊಬ್ಬ ರಾಜ್ಯ ಸೆಕ್ರೆಟರಿಯೆಟ್ ಸದಸ್ಯರಾದ ಕಾರ್ಮಿಕ ಮುಂದಾಳು ಕಾಂ.ವಿ.ಜೆ.ಕೆ. ಮತ್ತಿತರ ಮುಂದಾಳುಗಳು ಈ ಅಂಕಣದಲ್ಲಿ ಬರೆಯಲಿದ್ದಾರೆ.

ನೀವೂ ಕಮ್ಯುನಿಸ್ಟ್ ಚಳುವಳಿಯತ್ತ ಹಾಕಿದ ಹೆಜ್ಜೆಯನ್ನು 2-3 ಫುಲ್‌ಸ್ಕೇಪ್ ಪುಟಗಳಲ್ಲಿ ಬರೆದು ಕಳುಹಿಸಿ.

ಉತ್ತಮವಾದುದನ್ನು ಆರಿಸಿ ಪ್ರಕಟಿಸಲಾಗುವುದು.

ಕೊಡುಗೆ: ಬರೆಯಲು ಸಾಧ್ಯವಿಲ್ಲದ ಹಿರಿಯ ಕಿರಿಯ ಸಂಗಾತಿಗಳ ರೋಚಕ ಅನುಭವವನ್ನು ಬರೆಯಬಲ್ಲ ಸಂಗಾತಿಗಳು ಬರೆದು ಕಳುಹಿಸಬಹುದು. ಅವರ ಈ ವಿಶೇಷ ಪ್ರಯತ್ನಕ್ಕಾಗಿ 3 ತಿಂಗಳ/ಆರು ತಿಂಗಳ 'ಐಕ್ಯರಂಗ'ವನ್ನು ಉಚಿತವಾಗಿ ಕಳುಹಿಸಿಕೊಡಲಾಗುವುದು.

ನಿಮ್ಮ ಪತ್ರಿಕೆ ಐಕ್ಯರಂಗದಲ್ಲಿ ಹೊಸ ವಿಚಾರಗಳು, ಓದುಗರಿಗೆ ವಿಪುಲ ಅವಕಾಶ ನೀಡುವ ಪುಟಗಳು... ಎಲ್ಲಾ ಸಂಗಾತಿಗಳೂ ಉತ್ಸಾಹದಿಂದ ಪಾಲ್ಗೊಳ್ಳುವ ಅವಕಾಶ.

ಯಶಸ್ವೀ ಬಂಡಾಯ ಸಾಹಿತ್ಯ ಸಮಾವೇಶ

'ಬಂಡಾಯ ಚಳವಳಿಯ ಮೂಲ ಉದ್ದೇಶ ಬಂಡಾಯ ಮನೋಭಾವದ ವ್ಯಕ್ತಿಗಳನ್ನು ರೂಪಿಸುವುದು. ಸಾಹಿತ್ಯದಲ್ಲಿ ಈ ಕ್ರಿಯೆಗೆ ಪೂರಕ ಪರಂಪರೆಯ ಪ್ರಜ್ಞೆಯನ್ನು ಒಪ್ಪಿಕೊಂಡಿರುವುದರಲ್ಲೇ ಬಂಡಾಯ ಚಳುವಳಿಯ ವೈಶಿಷ್ಟ ಅಡಗಿದೆ" ಎಂದು ಬರಗೂರು ರಾಮಚಂದ್ರಪ್ಪ ತಿಳಿಸಿದರು.

ಕನ್ನಡ ಸಾಹಿತ್ಯಪರಿಷತ್ತು ಏರ್ಪಡಿಸಿದ್ದ ಎರಡುದಿನಗಳ ಬಂಡಾಯ ಸಾಹಿತ್ಯ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಜಾತಿಪದ್ಧತಿ, ವರ್ಣಾಶ್ರಮ ಇತ್ಯಾದಿ ಕುರಿತು ಏನೂ ಹೇಳದಿರುವ ಜಗದ್ಗುರು ಪರಂಪರೆಯ ಮೌನ ಮುರಿದಾಗ ಹೊಸ ಸಾಹಿತ್ಯ ಪರಂಪರೆ ಮತ್ತು ಸಾಂಸ್ಕೃತಿಕ ಪರಿಸರ ಹುಟ್ಟುತ್ತಿದೆ. ಹಿಂದೆ ವಚನ ಸಾಹಿತ್ಯ ಹುಟ್ಟಿದ್ದೂ ಅದೇ ರೀತಿ ಎಂದು ಬಂಡಾಯ ಸಾಹಿತ್ಯದ ಆರಂಭ ಬೆಳೆದು ಬಂದ ರೀತಿಯನ್ನು ವಿವರಿಸಿದರು.

ಬಂಡಾಯ ಸಾಹಿತ್ಯ ಕೃತಿಗಳು ಆಶಯ ಮತ್ತು ವಾಸ್ತವಗಳ ಇಕ್ಕಟ್ಟಿನಲ್ಲಿ, ಹಿನ್ನೋಟ ಮತ್ತು ಮುನ್ನೋಟಗಳ ಒಳಗಿನ ಉರಿಯಾಗಿ ಹೊರಬರುತ್ತಿದೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪ್ರೊ.ಜಿ.ಎಸ್.ಸಿದ್ಧಲಿಂಗಯ್ಯ ಅವರು ಮಾತನಾಡಿ "ಆಯಾಕಾಲಕ್ಕೆ ಅಗತ್ಯವಾದ ಚಳವಳಿಗಳು, ಸಾಹಿತ್ಯ ಪರಂಪರೆಗಳು ಹುಟ್ಟಿಕೊಂಡಿವೆ. ಯಾವ ಪರಂಪರೆಯಲ್ಲಿಯೇ ಆಗಲಿ ಬದುಕನ್ನು ಹಸನು ಮಾಡಲಾಗದ ಸಾಹಿತ್ಯ ಸೃಷ್ಟಿಯಾದರೆ ಅದು ಅಪ್ರಯೋಜಕ" ಎಂದರು.

ಬಂಡಾಯ ಚಳವಳಿಯಲ್ಲಿ ಬದಲಾವಣೆಯ ಕನಸಿದೆ. ಈ ಹಿನ್ನೆಲೆಯಲ್ಲಿ ಅದು ಸೈದ್ಧಾಂತಿಕ ಹೋರಾಟವಾಗಿದೆ ಎಂದು ಚಂದ್ರಶೇಖರ ಪಾಟೀಲರು ಸಮಾರೋಪ ಸಮಾರಂಭದಲ್ಲಿ ತಿಳಿಸಿದರು.

ಜನಸಮೂಹದ ನೋವಿನಾಳದಿಂದ ಬಂದ ಕನಸುಗಳನ್ನು ಹೊಸ ಬದಲಾವಣೆಯಲ್ಲಿ ಕಾಣುತ್ತೇವೆ. ಜೀತದಾಳುಗಳ ಮಕ್ಕಳೂ ಇಂದು ಬರೆಯುತ್ತಿದ್ದಾರೆ ಎಂದು ಮುಖ್ಯ ಅತಿಥಿ ಕಾಳೇಗೌಡ ನಾಗವಾರ ತಿಳಿಸಿದರು.

ಕನ್ನಡ ಸಾಹಿತ್ಯದಲ್ಲಿ ನಿಜವಾಗಿ ಗಟ್ಟಿಯಾಗಿ ನಿಲ್ಲುವಂತಹದ್ದು ಬಂಡಾಯ ಸಾಹಿತ್ಯ. ಒಳಗಿನ ರೋಷ ಇಲ್ಲಿ ಹರಳುಗಟ್ಟುತ್ತದೆ. ಕಾವ್ಯವಾಗುತ್ತದೆ ಎಂದು ಡಾ.. ಪೋಲಂಕಿ ರಾಮಮೂರ್ತಿ ತಿಳಿಸಿದರು.

ಎರಡೂ ದಿನದ ಸಮಾವೇಶದಲ್ಲಿ ಕನ್ನಡಸಾಹಿತ್ಯ ಪರಿಷತ್ತಿನ ವೇದಿಕೆಯಿಂದ ದೂರ ಸರಿದಿದ್ದ ಬಂಡಾಯ ಸಾಹಿತಿಗಳು ಮತ್ತೆ ಆ ವೇದಿಕೆಯನ್ನು ಹಂಚಿಕೊಂಡಿದ್ದು ಚರ್ಚೆಗೆ ಗುರಿಯಾಗಿತ್ತು. ಬರಗೂರು ರಾಮಚಂದ್ರಪ್ಪನವರು ತಮ್ಮ ಸುದೀರ್ಘ ಉದ್ಘಾಟನಾ ಭಾಷಣದಲ್ಲಿ ಈ ಸಂಶಯಗಳಿಗೆ ಉತ್ತರವಿತ್ತರು.

ಸ್ಥಾಪಿತ ಮೌಲ್ಯಗಳನ್ನು ವಿರೋಧಿಸುವ ಬಂಡಾಯಗಾರರು ತಮ್ಮದೇ ಒಂದು ಸಂಘಟನೆಯನ್ನು ಕಟ್ಟುವವರೆಗೆ ಇಂತಹ ಸಂಸ್ಥೆಗಳಿಂದ ದೂರವಿರಬೇಕಾದ್ದು ಅನಿವಾರ್ಯವಾಗಿತ್ತು.. ಇಂದು ಬಂಡಾಯ ಚಳವಳಿ ಸಬಲವಾಗಿ ಬೆಳೆದಿದೆ. ನಾವು ಎಲ್ಲ ವೇದಿಕೆಗಳಲ್ಲೂ ನಮ್ಮ ನಿಲುವು ಮಂಡಿಸುತ್ತೇವೆ.

ಇಂದೂ ಕೂಡ ನಾವು ನಮ್ಮ ಮಾನಸಿಕ ದೂರವನ್ನು ಕಾಯ್ದುಕೊಂಡು ಪರಿಷತ್ತನ್ನು ಟೀಕಿಸುವ ಅವರ ಕಾರ್ಯ ಕುರಿತು ಚರ್ಚೆ ಮಾಡುವ ಸ್ವಾತಂತ್ರ್ಯವನ್ನು ಉಳಿಸಿಕೊಂಡಿದ್ದೇವೆ ಎಂದರು.

ಎರಡೂ ದಿನದ ಸಮಾವೇಶದಲ್ಲಿ ವಿವಿಧ ಗೋಷ್ಠಿಗಳನ್ನು ಹಮ್ಮಿಕೊಳ್ಳಲಾಗಿತ್ತು. ರಂಜಾನ್ ದರ್ಗಾ, ಹರಿಹರಪ್ರಿಯ, ಎಂ.ಆರ್. ಕಮಲ, ಸರಜೂ ಕಾಟ್ಕರ, ಆರ್.ವಿ.ಎಸ್. ಸುಂದರಂ, ರಹಮತ್ ತರೀಕೆರೆ, ಎಲ್ ಹನುಮಂತಯ್ಯ, ಬಿ.ಟಿ. ಲಲಿತಾನಾಯಕ್, ಮಲ್ಲಿಕಾ ಘಂಟಿ, ಗುಡಿಹಳ್ಳಿ ನಾಗರಾಜ್, ಸಿದ್ಧನಗೌಡ ಪಾಟೀಲ್, ಬಸವರಾಜ ಸಬರದ, ಆರ್ ವಿ. ಭಂಡಾರಿ, ಡಾ.ಕೆ.ಕೇಶವಶರ್ಮ ಕಾ.ಬಿ. ಕೃಷ್ಣಮೂರ್ತಿ, ಡಾ. ಪುರುಷೋತ್ತಮ ಬಿಳಿಮಲೆ, ಡಾ.ಚೆನ್ನಣ್ಣ ವಾಲೀಕಾರ, ಅಲ್ಲಮ ಪ್ರಭು ಬೆಟ್ಟದೂರು ಅವರು ಪ್ರಬಂಧಗಳನ್ನು ಮಂಡಿಸಿದರು. ಕವಿಗೋಷ್ಠಿಯಲ್ಲಿ 25 ಕವಿಗಳು ತಮ್ಮ ಕವನಗಳನ್ನು ಓದಿದರು.

'ತಾಳಿ ಕಟ್ಟುವ ಕೈಗೆ ಕೋಳ ತೊಡಿಸಿದರೆ....?

ಇತಿಹಾಸ ಪುಟಗಳಿಂದ

ಕಾಮ್ರೇಡ್ ಇ.ಎಂ.ಎಸ್-ರವರ ಮದುವೆ ನಿಗದಿಯಾದ ದಿನ ಬಂತು. ಹೆಣ್ಣಿನ ಮನೆಯಲ್ಲಿ ಮದುವೆ ಸಮಾರಂಭ. ಬಂಧು ಬಳಗವೆಲ್ಲಾ ಸೇರಿದರು. ತ್ರಿವಾಂಕೂರಿನ ಆ ಮದುವೆ ಮನೆಗೆ ಹೊರಡಲು ಅಣಿಯಾದರು. ಆದರೆ...! ಮದುವೆ ಗಂಡೇ ನಾಪತ್ತೆ. ಇನ್ನೊತ್ತಾದರೂ ಬಂದಿಲ್ಲ. ಹಲವರು ಚಿಂತಾಕ್ರಾಂತರಾದರು. ಹುಬ್ಬುಗಳು ಗಂಟಿಕ್ಕಿದ್ದವು. ಒಂದು ರೀತಿಯ ಉದ್ವಿಗ್ನತೆ ಅಲ್ಲೆಲ್ಲಾ.

ಸ್ವಾತಂತ್ರ್ಯದ ಚಳುವಳಿ ಬಿರುಸಿನಿಂದ ನಡೆಯುತ್ತಿದ್ದ ದಿನಗಳವು. ಬಹುತಃ ಆತ ಮದುವೆ ಸ್ಥಳಕ್ಕೆ ಬರಬಹುದೆಂದ್ ಒಬ್ಬ ಅನುಭವಿ ಯಜಮಾನ.ಸಾ ಎಲ್ಲರೂ ಆ ಕಡೆಗೆ ಪಾದ ಬೆಳೆಸಿದರು.

ಮಹೂರ್ತದ ಸಮಯ ಸಮೀಪಿಸುತ್ತಿದೆ. ಆದರೂ ಕಾಂ: ಇ.ಎಂ.ಎಸ್. ಪತ್ತೆ ಇಲ್ಲ. ಮತ್ತೇ ಅದೇ ಗಜಿಬಿಜಿ. ಈ ಗಜಿಬಿಜಿ ಹುಡುಕಾಟಗಳು ಅಲ್ಲಿದ್ದ ಬಂಧುಗಳಿಗೇ ಮಾತ್ರವಲ್ಲ! ಇ.ಎಂ.ಎಸ್. - ಯಾಕೆ ಇನ್ನು ಬರುತ್ತಿಲ್ಲ ಎಂದು ಹಳಹಳಿಸುತ್ತಿದ್ದವರು ಅಲ್ಲಿದ್ದವರು. ತಾಳಿ ಕಟ್ಟಲು ಹೇಗಿದ್ದರೂ ಬರಲೇಬೇಕಲ್ಲ. ಆಗಲೇ ಕೈಗೆ ಕೋಳ ತೊಡಿಸಿ ಎಳೆದೊಯ್ಯಾರೆ.? ಈ ಸುಲಭದ ಹಂಚಿಕೆ ಬ್ರಿಟಿಷ್ ಪೋಲೀಸರದೂ ಕೂಡ.

ನಿಗದಿತ ಸಮಯಕ್ಕೆ ಇ.ಎಂ.ಎಸ್. ಬಂದರು. ಅವರವರ ಲೆಕ್ಕಾಚಾರಗಳು ಕ್ರಿಯೆಗಿಳಿಯ ತೊಡಗಿದವು. ಈಗಲೇ ಬಂಧಿಸಲೇ ಸಾರ್' ಎಂದ ಪೇದೆಯೊಬ್ಬ. 'ಬೇಡ ಹೇಗಿದ್ದರೂ ತಾಳಿಯಾದ ತಕ್ಷಣ ಬಂಧಿಸಿದರಾಯಿತು' ಎಂದ ಅಧಿಕಾರಿ.

ತಾಳಿ ಕಟ್ಟಿದ್ದಾಯ್ತು. ಆದರೆ... ಕೇರಳದ ಸಂಪ್ರದಾಯದಂತೆ ತಾಳಿಯಾದ ಬಳಿಕ ಗಂಡು ಹೆಣ್ಣಿನ ಮನೆಯಲ್ಲಿ ಬಂದು ಗ್ಲಾಸ್ ಹಾಲು ಕುಡಿಯಬೇಕು, ನಂತರ ಮತ್ತೇ ಹಸೆ ಮಣೆಯ ಮೇಲೆ ಕೂಡಬೇಕು.

ಸರಿ- ಹಾಲು ಕುಡಿಯಲು ಮದುಮಕ್ಕಳಿಬ್ಬರೂ ಒಳಗೆ ಹೋದರು. ಪೋಲೀಸರು ಹೊರಗೆ ಕಾದರು. ಈಗ ಬರಬಹುದು - ಇನ್ನೂ ಸ್ವಲ್ಪ ಹೊತ್ತಿಗೆ ಅಂದುಕೊಂಡರಂತೆ ಆಗಬಹುದೇ- ಇನ್ನೂ ಒಂದ್ಹತ್ತು ನಿಮಿಷ ಕಾದರಾಗಬಹುದು..ಹೀಗೆ ಅವರ ಎಣಿಕೆ.

ಈಗಾಗಲೇ ತಡವಾಯಿತೆಂದು ಎಲ್ಲರನ್ನೂ ಊಟಕ್ಕೆ ಕೂಡಿಸಿದರು. ಭೋಜನ ಪಂಕ್ತಿಯ ಮುಗಿಯ ತೊಡಗಿತು. ಆದರೂ ಇ.ಎಂ.ಎಸ್. ಬರಲೇ ಇಲ್ಲ. ಪೋಲೀಸರು ಚಡಪಡಿಸಿದರು.

ಅದಿಗೆ ಮನೆ ಸೇರಿದ ಇ.ಎಂ.ಎಸ್. ಕಾಣಿಸಿಕೊಂಡದ್ದು ಮುಂಬೈನಲ್ಲಿ!

-ಇ.ಕೆ.ರಾಜನ್

-ಎಸ್.ವೈ.ಗುರುಶಾಂತ್

ಮೈಕೊ ಕಾರ್ಮಿಕ ಸಂಘ

ಸಿ.ಐ.ಟಿ.ಯು. ಬೆಂಬಲಿತರಿಗೆ ಭಾರಿ ವಿಜಯ

ಕರ್ನಾಟಕದಲ್ಲಿ ನೌಕರರ ಚಳವಳಿಯಲ್ಲಿ ಒಂದು ಪ್ರಮುಖ ಕೇಂದ್ರ ಬಿಂದುವಾದ ಪ. ಜರ್ಮನಿಯ ಬಹುರಾಷ್ಟ್ರೀಯ ಕಂಪನಿ ಮೈಕೊದ ಕಾರ್ಮಿಕ ಸಂಘಕ್ಕೆ 1990 ಜುಲೈ 17 ರಂದು ನಡೆದ ಚುನಾವಣೆಗಳಲ್ಲಿ ಪ್ರಧಾನ ಕಾರ್ಯದರ್ಶಿ ಸ್ಥಾನವೊಂದನ್ನು ಹೊರತು ಪಡಿಸಿ ಉಳಿದೆಲ್ಲ ಸ್ಥಾನಗಳಿಗೆ ಸಿ.ಐ.ಟಿ. ಯು. ಬೆಂಬಲಿತ ಅಭ್ಯರ್ಥಿಗಳು ಆರಿಸಿ ಬಂದಿದ್ದಾರೆ. ಆಡಳಿತ ವರ್ಗದ ಪರವಿದ್ದ ಬಹುತೇಕ ಎಲ್ಲರೂ ಸೋಲಪ್ಪಿದರು.

ಸಿ.ಐ.ಟಿ.ಯು. ರಾಜ್ಯ ಸಮಿತಿ ಅಧ್ಯಕ್ಷ ಎಸ್. ಸೂರ್ಯನಾರಾಯಣರಾವ್ ಅವರು ಸಂಘದ ಅಧ್ಯಕ್ಷರಾಗಿ ಪುನರಾಯ್ಕೆ ಯಾದರು. ಅವರು 2424 ಮತ ಗಳಿಸಿದ್ದು ಪ್ರತಿಸ್ಪರ್ಧಿಗೆ 1996 ಮತಗಳು ಲಭ್ಯವಾದವು. ಅಧ್ಯಕ್ಷ ಸ್ಥಾನಕ್ಕೆ ನಾಲ್ವರು ಅಭ್ಯರ್ಥಿಗಳು ಕಣದಲ್ಲಿದ್ದರು. ಮೊದಲನೆ ಉಪಾಧ್ಯಕ್ಷರಾಗಿ ಮೋಹನ್ ವಿಠಲ್ ಭಟ್ (2537 ಮತ) ಮತ್ತು ಎರಡನೇ ಉಪಾಧ್ಯಕ್ಷರಾಗಿ ರಾಜಣ್ಣ (2267) ಅವರು ಆಯ್ಕೆ ಯಾದರು.

ಶಿವಶಂಕರ್.ಟಿ. (2427) ಸಹಕಾರ್ಯದರ್ಶಿ ಮತ್ತು ಶಂಕರೇಗೌಡ (2466) ಖಜಾಂಚಿಯಾಗಿ ಆರಿಸಲ್ಪಟ್ಟರು.

ಪ್ರಧಾನ ಕಾರ್ಯದರ್ಶಿ ಸ್ಥಾನ ಮಾತ್ರ ಕೇವಲ 36 ಮತಗಳ ಅಂತರದಿಂದ ಕೈ ತಪ್ಪಿತು. ಸಿಟು ಬೆಂಬಲಿತ ಎನ್. ವೀರಾಸ್ವಾಮಿ 2199 ಮತಗಳಿಸಿದರು. ಅವರ ಎದುರು ಸ್ಪರ್ಧಿಸಿದವರು (ಎಲ್.ನರಸಿಂಹ ಮೂರ್ತಿ)2235 ಮತಗಳನ್ನು ಗಳಿಸಿದರು.

ಪದಾಧಿಕಾರಿಗಳು ಮಾತ್ರವಲ್ಲದೆ ಕಾರ್ಯಕಾರಿ ಸಮಿತಿ ಮತ್ತು ಜನರಲ್ ಕೌನ್ಸಿಲ್‌ಗೆ ಕೂಡ ಸಿ.ಐ.ಟಿ.ಯು ಬೆಂಬಲಿತರೇ ಹೆಚ್ಚು ಸಂಖ್ಯೆಯಲ್ಲಿ ಆಯ್ಕೆಯಾಗಿದ್ದಾರೆ. 25 ಸದಸ್ಯರ ಸಮಿತಿಗೆ 20 ಮತ್ತು 122 ಸದಸ್ಯರ ಕೌನ್ಸಿಲ್‌ಗೆ 96 ಸಿಟು ಬೆಂಬಲಿತರು ಪ್ರವೇಶಪಡೆದಿದ್ದಾರೆ.

ಮೈಕೊದಲ್ಲಿ ಒಟ್ಟು 4856 ಜನರಿದ್ದು 4577 ಮತ ಚುನಾವಣೆ ಆಗಿತ್ತು.

ಈ ಮೇಲೆ ಗೆದ್ದ ಎಲ್ಲ ಅಭ್ಯರ್ಥಿಗಳ ಚಿಹ್ನೆ 'ಆನೆ' ಆಗಿದ್ದು ಎದುರಾಳಿಗಳ 'ಸಿಂಹ'ವನ್ನು ಸೋಲಿಸಿದ್ದು ಗಮನಾರ್ಹವಾಗಿದೆ.

'ಇದು ನಿಮಗೆ ಗೊತ್ತೆ?

ಸೋವಿಯತ್ ಒಕ್ಕೂಟದಲ್ಲಿ 1988-89 ರಲ್ಲಿ ಸುಮಾರು 11 ಕೋಟಿ ಜನ ಶಿಕ್ಷಣ ರಂಗದಲ್ಲಿ ವಿವಿಧ ರೀತಿಯಲ್ಲಿ ತೊಡಗಿದ್ದರು. ಅಂದರೆ ದೇಶದ ಪ್ರತಿ ಮೂವರಲ್ಲಿ ಒಬ್ಬ ಶಿಕ್ಷಣ ರಂಗದಲ್ಲಿದ್ದಾನೆ! ಮಾಧ್ಯಮಿಕ ಮತ್ತು ಉಚ್ಚ ಶಿಕ್ಷಣ ಎರಡೂ ಮುಫತ್

ಸುಮಾರು ಎರಡು ಕೋಟಿ ಮಕ್ಕಳು ನರ್ಸರಿ ಶಾಲೆಗಳಲ್ಲಿದ್ದಾರೆ.(ನಮ್ಮಲ್ಲೂ ಇದ್ದಾರೆ ಎನ್ನಬಹುದು ನೀವು) ಸೋವಿಯತ್ ಒಕ್ಕೂಟದಲ್ಲಿ ಇಂತಹ ನರ್ಸರಿಗಳ,-ಬಾಲವಾಡಿ ಕೇಂದ್ರಗಳ ವೆಚ್ಚದ 80% ಸರಕಾರವೇ ಹೊರಡುತ್ತದೆ. ಇನ್ನೂ 15 ಲಕ್ಷ ಮಕ್ಕಳಿಗೆ ಇಷ್ಟೊಂದು ಸೌಲಭ್ಯ ಕೊಡಲಾಗಲಿಲ್ಲವೆಂಬುದೇ ಅವರ ಸಮಸ್ಯೆ. ಬೇಗನೇ ಅದನ್ನು ಮಾಡಬೇಕೆನ್ನುವ ಆತುರ ಅವರದ್ದು.

1920 ರ ದಶಕದಲ್ಲಿ ನಿರಕ್ಷರತೆ ಹೋಗಲಾಡಿಸಬೇಕೆಂದು ಪಣತೊಟ್ಟ ಮೊದಲ ದೇಶ. ಸೋವಿಯತ್ ಒಕ್ಕೂಟ ಮೊತ್ತಮೊದಲ ಬಾರಿಗೆ ಮುಕ್ತ ವೈದ್ಯಕೀಯ ನೆರವು ಆರಂಭಿಸಿದ ದೇಶ ಕೂಡಾ ಅದೇ. ವಿಶ್ವದ ಪ್ರತಿ 3 ರಲ್ಲಿ ಒಬ್ಬ ಡಾಕ್ಟರು ಸೋವಿಯತ್ ಒಕ್ಕೂಟದಲ್ಲಿದ್ದಾನೆ. ಪ್ರತಿ ಹತ್ತು ಸಾವಿರ ಜನರಿಗೆ 43 ಡಾಕ್ಟರುಗಳಿದ್ದಾರೆ!

ಒಂದು ಲಕ್ಷ ಕಾರ್ಮಿಕರ ಸಹಿ ಸಂಗ್ರಹ: ಕಾರ್ಮಿಕ ಸಚಿವರೊಡನೆ ಭೇಟಿ

ದಿನಾಂಕ 16 ರಂದು ಸಿ.ಐ.ಟಿ.ಯು ರಾಜ್ಯ ಸಮಿತಿಯು ರಾಜ್ಯಾದ್ಯಂತ ಕನಿಷ್ಠ ಕೂಲಿಯನ್ನು ಕೊಡಬೇಕೆಂದು ಒತ್ತಾಯಿಸಿ ಒಂದು ಲಕ್ಷ ಕಾರ್ಮಿಕರಿಂದ ಸಹಿ ಸಂಗ್ರಹ ಮಾಡಿದ ಮನವಿ ಪತ್ರವನ್ನು ಕಾರ್ಮಿಕ ಸಚಿವರಾದ ಕೆ.ಎಚ್. ಪಾಟೀಲ್ ರವರಿಗೆ ಸಲ್ಲಿಸಲಾಯಿತು. ಈ ಮನವಿಯನ್ನು ಸ್ವೀಕರಿಸಿದ ಸಚಿವರು, ಕಾಂ/ಎಸ್.ಸೂರಿ, ಕಾಂ. ಎನ್ಕೆ, ಮತ್ತು ಸಿಐಟಿಯುನ ಇತರ ರಾಜ್ಯ ಮುಖಂಡರೊಡನೆ ಬೇಡಿಕೆಗಳ ಕುರಿತು ಚರ್ಚಿಸಿ ಈ ಕೆಳಕಂಡ ನಿರ್ಧಾರಗಳನ್ನು ಕೈಗೊಳ್ಳಲಾಯಿತು.

ಬೀಡಿ ಕೈಗಾರಿಕೆಯಲ್ಲಿ ಕಾರ್ಮಿಕರಿಗೆ ಗುರುತಿನ ಚೀಟಿಯನ್ನು ನೀಡುವುದಕ್ಕೆ ಸಚಿವರು ಆದೇಶ ನೀಡಿದರು. ಬೀಡಿ ಉದ್ಯಮದಲ್ಲಿ ನೆರೆರಾಜ್ಯದಲ್ಲಿ ಕಾರ್ಮಿಕರಿಗೆ ಕೊಡುತ್ತಿರುವ ಸಂಬಳ ಇತ್ಯಾದಿಗಳ ಮಾಹಿತಿ ಸಂಗ್ರಹಿಸಿ. ಬೀಡಿ ಕಾರ್ಮಿಕರ ಮತ್ತು ಸಂಬಂಧ ಪಟ್ಟವರ ಸಭೆ ಕರೆದು, ಈ ವ್ಯತ್ಯಾಸವನ್ನು ಸರಿಪಡಿಸುವುದು, ಈ ಸಭೆಗೆ ಸಿ.ಐ.ಟಿ.ಯು ಅಧ್ಯಕ್ಷರನ್ನು ಆಹ್ವಾನಿಸುವುದು ಹಾಗೂ, ಬೇರೆ ಬೇರೆ ಕೈಗಾರಿಕೆಗಳಿಗೆ ಕನಿಷ್ಠ ಕೂಲಿ ಬೇರೆ ಬೇರೆ ರೀತಿಯಲ್ಲಿ ನಿರ್ಧರಿಸಬೇಕಾದರೆ, ಬೇರೆ ರಾಜ್ಯಗಳಿಂದ ಮಾಹಿತಿ ಸಂಗ್ರಹಿಸಿ, ಕಾರ್ಮಿಕರ ಜೀವನ ಮಟ್ಟವನ್ನು ಉತ್ತಮಪಡಿಸುವ ಬಗ್ಗೆ ಚರ್ಚೆ ನಡೆಸಿ ನ್ಯಾಯವಾದ ಕನಿಷ್ಠ ಕೂಲಿ ನಿಗದಿಪಡಿಸಬೇಕೆಂದು ಅಧಿಕಾರಿಗಳಿಗೆ ಸಚಿವರು ಆದೇಶ ನೀಡಿದ್ದಾರೆ.

ಸಿಐಟಿಯು ಬೆಂಬಲ

ಸುಮಾರು 2000 ಭೂಸೇನಾ ನಿಗಮದ ನೌಕರರು 16-7-90 ರಂದು ಬೆಂಗಳೂರು ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಸತ್ಯಾಗ್ರಹ ಪ್ರಾರಂಭಿಸಿದ್ದು, ಅವರ ಹೋರಾಟಕ್ಕೆ ಸಿಐಟಿಯು ಬೆಂಬಲ ನೀಡುತ್ತದೆ. ದೈನಂದಿನ ಕೆಲಸದಲ್ಲಿ ಅಧಿಕಾರಿಗಳ ಕೈವಾಡ, ನೌಕರರಿಗೆ ಕಿರುಕುಳ. ನಿಗಮದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ಕುರಿತು ತನಿಖೆ ನಡೆಸ ಬೇಕೆಂಬುದೇ ಈ ನೌಕರರ ಮುಖ್ಯ ಬೇಡಿಕೆಯಾಗಿದ್ದು ಅದನ್ನು ಬಗೆಹರಿಸಲು ಸರಕಾರ ಕೂಡಲೆ ತುರ್ತು ಕ್ರಮ ಕೈಗೊಳ್ಳಬೇಕೆಂದು ಸಿಐಟಿಯು ಒತ್ತಾಯಿಸುತ್ತದೆ.

ಕಾಂ. ಇ.ಎಂ.ಎಸ್. ಪ್ರಶ್ನೋತ್ತರ

ರಾಷ್ಟ್ರೀಯ, ಅಂತರರಾಷ್ಟ್ರೀಯ ಸೈದ್ಧಾಂತಿಕ, ರಾಜಕೀಯ ಪ್ರಶ್ನೆಗಳಿಗೆ ಕಾಂ.ಇ.ಎಂ.ಎಸ್. ಉತ್ತರಿಸಲೊಪ್ಪಿದ್ದಾರೆಂದು ಈಗಾಗಲೇ ಪ್ರಕಟಿಸಿದ್ದೇವೆ. ಪಕ್ಷದ ಪ್ರಧಾನ ಕಾರ್ಯದರ್ಶಿಯವರಿಂದಲೇ ಉತ್ತರಗಳನ್ನು ಪಡೆಯಬಹುದಾದ ಈ ಸುವರ್ಣಾವಕಾಶವನ್ನು ಸಂಗಾತಿಗಳು ಸದುಪಯೋಗಪಡಿಸಿಕೊಳ್ಳಬೇಕು. ಕಾಂ. "ಇ.ಎಂ.ಎಸ್. ಪ್ರಶ್ನೋತ್ತರ ವಿಭಾಗ" ಎಂದು ಸ್ಪಷ್ಟವಾಗಿ ನಮೂದಿಸಿ.

ಯಶಸ್ವೀ DYFI ರಾಜ್ಯ ಮಟ್ಟದ ಅಧ್ಯಯನ ಶಿಬಿರ

ಡಿ.ವೈ.ಎಫ್.ಐ. ರಾಜ್ಯ ಮಟ್ಟದ ಅಧ್ಯಯನ ಶಿಬಿರವು ಜೂನ್ 21. ರಿಂದ 25 ರ ವರೆಗೆ ಐತಿಹಾಸಿಕ ಹಂಪಿಯಲ್ಲಿ ಯಶಸ್ವಿಯಾಗಿ ನಡೆಯಿತು. ರಾಜ್ಯದ ಎಲ್ಲಾ ಘಟಕಗಳಿಂದ ನಾಲ್ಕು ಮಹಿಳಾ ಸಂಗಾತಿಗಳೂ ಸೇರಿ 130 ಶಿಬಿರಾರ್ಥಿಗಳು ಶಿಬಿರದಲ್ಲಿ ಭಾಗವಹಿಸಿ ಸಂಘಟನೆಯನ್ನು ಮುನ್ನಡೆಸುವ ಪ್ರಯೋಜನ ಪಡೆದರು.

ರಾಜ್ಯ ಕಾರ್ಯದರ್ಶಿ ಕಾಂ ಎಸ್. ಶಿವರಾಂ ಇವರಿಂದ ಪ್ರಾರಂಭಿಸಿ ಕಾಂ ವಿ.ಜೆ.ಕೆ ನಾಯರ್‌ರವರಿಂದ 25 ರ ಸಂಜೆ ಯಶಸ್ವೀಯಾಗಿ ಕೊನೆಗೊಂಡಿತು. ಕಾಂ ಪಿ. ರಾಮಚಂದ್ರರಾವ್, ಎಸ್. ಸೂರ್ಯ ನಾರಾಯಣ ರಾವ್, ಸಿ. ನಂಜುಂಡಪ್ಪ, ಚಂದ್ರಶೇಖರ್ ಬಾಳೆ, ಜೆ.ಎನ್.ನಾಗರಾಜ್, ಎನ್.ಕೆ.ಉಪಾಧ್ಯಾಯ ಹಾಗೂ ಡಿ.ವೈ. ಎಫ್.ಐ. ಪ್ರಧಾನ ಕಾರ್ಯದರ್ಶಿ ಕಾಂ. ಹಸನ್‌ಮುಲ್ಲಾ ಮತ್ತು ಕೇಂದ್ರ ಸಮಿತಿಯ ಸಹ ಕಾರ್ಯದರ್ಶಿ ವಿ. ಶ್ರೀನಿವಾಸರಾವ್ ಇವರುಗಳು ವಿಷಯ ಪ್ರಸ್ತಾಪಿಸಿ ಶಿಬಿರಾರ್ಥಿಗಳಿಗೆ ಮನನವಾಗುವಂತೆ ಮಾತನಾಡಿದರು.

ರಾಷ್ಟ್ರೀಯ ಹಾಗೂ ರಾಜ್ಯದ ಹಿಂದಿನ ರಾಜಕೀಯ ಪರಿಸ್ಥಿತಿ, ಕರ್ನಾಟಕದಲ್ಲಿ ಪ್ರಜಾಪ್ರಭುತ್ವ ಚಳುವಳಿ, ಯುವಜನ, ಕ್ರೀಡೆ, ಸಂಸ್ಕೃತಿ, ಮೀಸಲಾತಿ, ಭಾಷೆ, ಜಾತಿ-ಕೋಮುವಾದ, ಡಿ.ವೈ.ಎಫ್.ಐ. ಕಾರ್ಯಕ್ರಮ, ಸಂವಿಧಾನ, ಯುವ ಸಮಸ್ಯೆಗಳು, ದುಡಿಯುವ ಹಕ್ಕು, ಆಂಧ್ರದಲ್ಲಿ ಪ್ರಜಾಸತ್ತಾತ್ಮಕ ಯುವ ಚಳುವಳಿ, ರಾಜಕೀಯ ಪಕ್ಷ ಹಾಗೂ ಸಾಮೂಹಿಕ ಸಂಘಟನೆ ಇವೇ ಶಿಬಿರದ ವಿಷಯ ಪಟ್ಟಿಯಾಗಿದ್ದವು. ಪ್ರತಿ ಅದಿವೇಶನದಲ್ಲಿ ಕ್ರಮವಾಗಿ ರಾಜ್ಯ ಸಮಿತಿಯ ಸದಸ್ಯರುಗಳಾದ ಕಾಂ/ ಜಂಬಯ್ಯನಾಯಕ, ವೆಂಕಟೇಶ್ ಕೋಣಿ, ಎಲ್.ಎಸ್.ನಾಯಕ, ಟಿ. ಶಿವಶಂಕರ್ ಹಾಗೂ ವೆಂಕಟೇಶ್ ಹೀರಾ, ಸದಾನಂದ ಮೋದಿ ಇವರುಗಳು ಅಧ್ಯಕ್ಷತೆ ವಹಿಸಿ ನಡೆಸಿಕೊಟ್ಟರು.

24-6-90 ರ ಸಂಜೆ ಹೊಸಪೇಟೆಯಲ್ಲಿ ಬಾರಿ ಬಹಿರಂಗ ಸಭೆಯನ್ನು ದ್ಯೇಶಿಸಿ ಕಾಂ/ಹಸನ್‌ಮುಲ್ಲಾ, ಶಾಸಕರಾದ ಶ್ರೀ ಗುಜ್ಜಾಲ ಹನುಮಂತಪ್ಪ, ಎಸ್. ಶಿವರಾಂ, ಎಂ.ಜಂಬಯ್ಯ ನಾಯಕ ಇವರುಗಳು ಮಾತನಾಡಿದರು.

ಶಿಬಿರದ ಸಂಜೆಗಳಲ್ಲಿ 'ಜಗತ್ತನ್ನು ತಲ್ಲಣಿಸಿದ್ದ ಹತ್ತು ದಿನಗಳು'. '1921 ರೈತ ಬಂಡಾಯ(ಮಾಪಿಳ್ಳೆ ದಂಗೆ)', 'ಕಾಂ/ ಸಫ್ದಾರ್ ಹಾಷ್ಮಿ' ವೀಡಿಯೋ ಕ್ಯಾಸೆಟ್ಸ್ ಪ್ರದರ್ಶನ ಮಾಡಲಾಯಿತು.

ಇದೇ ಸಂದರ್ಭದಲ್ಲಿ ಆಂಧ್ರದ ಚಂಡಮಾರುತದಲ್ಲಿ ನೊಂದವರಿಗೆ ಸಂಗ್ರಹಿಸಲಾದ ದ.ಕ. 750=00 ಬೆಂಗಳೂರು 410=00 ಬಿಜಾಪುರ 125=00 ಒಟ್ಟು 1285=00 ರೂ ನಿಧಿಯನ್ನುರಾಜ್ಯ ಕಾರ್ಯದರ್ಶಿ ಅವರು ಕಾಂ/ ಶ್ರೀನಿವಾಸ್ ರಾವ್‌ರವರಿಗೆ ಅರ್ಪಿಸಿದರು.

ಶಿಬಿರವನ್ನು ಯಶಸ್ವೀ ಮಾಡಿದ ಸ್ವಾಗತ ಸಮಿತಿಗೆ ಗೌರವ ಪೂರಕವಾಗಿ ರಾಜ್ಯ ಕಾರ್ಯದರ್ಶಿ ಇವರು ಸವಿನೆನಪಿಗಾಗಿ ಡಾರ್ಜಲಿಂಗ್ ಜಿಲ್ಲೆಯ ಛಿದ್ರಕಾರಿ ಚಳುವಳಿಯ ವಿರುದ್ಧ ಹೋರಾಟ ನಡೆಸಿದ ಪರವಾಗಿ ರಕ್ತದಾನ ಮಾಡಿದ ಸಂದರ್ಭದ ಲೋಹದ ಡಿ.ವೈ.ಎಫ್.ಐ. ಬ್ಯಾಡ್ಜನ್ನೂ ಅರ್ಪಿಸಿದರು. 240+240 ಕಿ.ಮೀ ದೂರ ಭದ್ರಾವತಿಯಿಂದ ಸೈಕಲ್ ತುಳಿದು ಬಂದ ನಾಲ್ಕು ಸಂಗಾತಿಗಳನ್ನೂ ಪರಿಚಯ ಮಾಡಿಸುವಾಗ ಬಾರಿ ಕರತಾಡನ ಗಳಿಂದ ಅಭಿನಂದಿಸಲಾಯಿತು.

ಕಾಂ/ ನಾಗಮೋಹನ್ ದಾಸ್ ಸಮಾಪ್ತಿ ಮಾಡಿದರು.ಕಾಂ/ ಜಂಬಯ್ಯನಾಯಕ ಇವರು ವಂದಿಸಿದರು.

ವರದಿ - ಎಸ್. ಶಿವರಾಂ

? ನಿಮ್ಮ ಪ್ರಶ್ನೆ-ನಮ್ಮ ಉತ್ತರ !

? ಈ ದೇಶದಲ್ಲಿ ಮುಖ್ಯವಾಗಿ ಬ್ರಾಹ್ಮಣ ಜಾತಿಯವರು ಮೂಲತಃ ಜ್ಞಾನವಂತರಾಗಲು ಕಾರಣ ಗಳೇನು? ಅವರು ಈ ದೇಶದ ಪ್ರಜಾಸತ್ತಾತ್ಮಕ ಚಳುವಳಿಯಲ್ಲಿ ಭಾಗವಹಿಸಿರುವವರೋ ಇಲ್ಲವೋ? ವಿವರಿಸಿ.

- ಹೆಸರು ಇಲ್ಲ, ಗುಲಬರ್ಗಾ ಜಿಲ್ಲೆ

! 'ಮೂಲತಃ ಜ್ಞಾನವಂತರು' ಎಂದರೆ ವಿದ್ಯಾಭ್ಯಾಸ ಶಿಕ್ಷಣದಲ್ಲಿ ಉಳಿದ ಜಾತಿಗಳಿಗಿಂತ ಮುಂದುವರಿದವರು ಎನ್ನುವ ಅರ್ಥದಲ್ಲಿ ಹೇಳುವುದಾದರೆ ನಿಜ. ಬ್ರಾಹ್ಮಣರು ಹುಟ್ಟಿನಿಂದ 'ಜ್ಞಾನವಂತರು' ಎನ್ನುವ ಅರ್ಥದಲ್ಲಿ ಹೇಳುವುದಾದರೆ ನಿಜವಲ್ಲ. ಇದನ್ನು ಒಪ್ಪಿಕೊಳ್ಳುವುದೆಂದರೆ ಇಂಡಿಯಾದ ಸಮಾಜದ ಶಾಪವಾದ ವರ್ಣಾಶ್ರಮ ಧರ್ಮದ ಹಿಂದಿರುವ ಕ್ರೂರ ಸಿದ್ಧಾಂತಕ್ಕೆ ಶರಣಾದಂತೆ. ಬ್ರಾಹ್ಮಣರು ವಿದ್ಯಾಭ್ಯಾಸ ಶಿಕ್ಷಣದಲ್ಲಿ ಮುಂದಿರುವುದಕ್ಕೆ ಬಹಳ ಚಾರಿತ್ರಿಕ ಕಾರಣಗಳಿವೆ. ವರ್ಣಾಶ್ರಮ ಧರ್ಮದ ಪ್ರಕಾರ ಬ್ರಾಹ್ಮಣರ ಕೆಲಸ ಅಧ್ಯಯನ ಅಧ್ಯಾಪನ ಅಂದರೆ ಶಿಕ್ಷಣ ಆದ್ದರಿಂದ ಪಾರಂಪರಿಕವಾಗಿ ಅವರ ಕುಟುಂಬ ಶಿಕ್ಷಣ ಅಥವಾ ಧಾರ್ಮಿಕ ಕಾರ್ಯಗಳು. ಆದ್ದರಿಂದ ಸ್ವಾಭಾವಿಕವಾಗಿಯೇ ಆಧುನಿಕ ಶಿಕ್ಷಣ ಆರಂಭವಾದಾಗ ಬ್ರಾಹ್ಮಣರು ಅದರ ಹೆಚ್ಚಿನ ಪ್ರಯೋಜನ ಪಡೆಯಲು ಸಾಧ್ಯವಾಯಿತು. ಬ್ರಾಹ್ಮಣ ಕುಟುಂಬಗಳಲ್ಲಿ ಶಿಕ್ಷಿತರ ಸಂಖ್ಯೆ ಹೆಚ್ಚಿರುವುದರಿಂದ (ಬೇರೆ ಜಾತಿಗಳಿಗಿಂತ) ಈಗಲೂ ಶಿಕ್ಷಣದಲ್ಲಿ ಮುಂದುವರಿಯಲು ಹೆಚ್ಚಿನ ಅನುಕೂಲ ಇರುತ್ತದೆ. ಅವರಿಗೆ ಇದು ಉದ್ಯೋಗದಲ್ಲೂ ಅದರಲ್ಲೂ ಹೆಚ್ಚಾಗಿ ಸರ್ಕಾರಿ, ಸಂಘಟಿತ ಕ್ಷೇತ್ರದಲ್ಲಿ ಹೆಚ್ಚಿನ ಅವಕಾಶ ಮಾಡಿಕೊಟ್ಟಿದೆ.ಆದರೆ ಪ್ರಜಾಸತ್ತಾತ್ಮಕ ಚಳುವಳಿಯಲ್ಲಿ ಬ್ರಾಹ್ಮಣರ ಭಾಗವಹಿಸುವ ಬಗ್ಗೆ ಅನುಮಾನಕ್ಕೆ ಯಾವ ಆಧಾರವೂ ಇಲ್ಲ. ಶೈಕ್ಷಣಿಕವಾಗಿ ಮುಂದುವರಿದ ಜಾತಿಯವರಾಗಿ ಬ್ರಾಹ್ಮಣರು ಪ್ರಜಾಸತ್ತಾತ್ಮಕ ಚಳುವಳಿಯತ್ತ ಸುಲಭವಾಗಿ ಒಲಿಯುತ್ತಾರೆ. 20 ನೇ ಶತಮಾನದ ಹೆಚ್ಚಿನ ಸಾಮಾಜಿಕ ಸುಧಾರಣಾ ಚಳುವಳಿಯಲ್ಲಿ, ಬ್ರಾಹ್ಮಣರು ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ಭಾಗವಹಿಸಿದ್ದಾರೆ. ಬಹುಶಃ ಈ ಅನುಮಾನಕ್ಕೆ, ಇತ್ತೀಚೆಗೆ ಕೆಲವು ಪ್ರದೇಶಗಳಲ್ಲಿ, ಬ್ರಾಹ್ಮಣ ಯುವಕರ ಒಂದು ವಿಭಾಗ ಆರೆಸ್ಸೆಸ್ ನತ್ತ ಹೆಚ್ಚಾಗಿ ಒಲಿಯುತ್ತಿರುವುದೇ ಕಾರಣವಿರಬಹುದು.

ಆರೆಸ್ಸೆಸ್ ಎರಡು ಮುಖ್ಯ ಕಾರಣಗಳಿಂದ ಬ್ರಾಹ್ಮಣ ಯುವಜನರನ್ನು ಆಕರ್ಷಿಸುತ್ತಿದೆ. ಒಂದನೆಯದಾಗಿ ಬೇರೆ ಜಾತಿಗಳಿಂದ ಸ್ಪರ್ಧೆ, ಹಿಂದುಳಿದ ಜಾತಿಗಳಿಗೆ ಮೀಸಲಾತಿ ಮತ್ತು ಆರ್ಥಿಕ ಸ್ಥಗಿತತೆಯಿಂದ ಒಟ್ಟಾರೆ ಉದ್ಯೋಗಾವಕಾಶಗಳಲ್ಲಿ ಇಳಿತ - ಒಟ್ಟಾಗಿ ಬ್ರಾಹ್ಮಣರಿಗೆ ತಮ್ಮ ಉದ್ಯೋಗವಕಾಶ ಎಂದಿಗಿಂತಲೂ ತೀರಾ ಕಡಿಮೆಯಾಗಿದೆ, ಅಭದ್ರ ಎಂಬ ಭಾವನೆ ಬಂದಿದೆ. ಇದನ್ನು ದುರುಪಯೋಗಪಡಿಸಿಕೊಂಡು ಆರೆಸ್ಸೆಸ್ ಬ್ರಾಹ್ಮಣ ಆಧಿಪತ್ಯದ ಹಿಂದೂ ಪುನರುತ್ಥಾನವಾದದತ್ತ ಅವರನ್ನು ಆಕರ್ಷಿಸುತ್ತಿದೆ. ಎರಡನೆಯದಾಗಿ ವರ್ಣಾಶ್ರಮ ಧರ್ಮ, ಜಾತಿಪದ್ಧತಿಯ ವಿರುದ್ಧ ಪ್ರಜಾಸತ್ತಾತ್ಮಕ ಚಳುವಳಿ ಸ್ವಾಭಾವಿಕವಾಗಿಯೇ ಹೋರಾಡುತ್ತದೆ. ಇದು ಬ್ರಾಹ್ಮಣ ಅಥವಾ ಯಾವುದೇ ಒಂದು ಜಾತಿಯ ಜನರ ವಿರುದ್ಧ ಅಲ್ಲ, ಜಾತಿಪದ್ಧತಿಯ ವಿರುದ್ಧ. ಆದರೆ ಈಗಾಗಲೇ ಮೇಲೆ ಹೇಳಿದ ಕಾರಣದಿಂದ ಬ್ರಾಹ್ಮಣ ಯುವಜನರ ಅಭದ್ರತೆ, ಆತಂಕವನ್ನು ದುರುಪಯೋಗಪಡಿಸಿಕೊಂಡು ನಮ್ಮ ಹಿಂದಿನ ಸಾಮಾಜಿಕ ಗೌರವ, ಸೌಲಭ್ಯಗಳು ಹೋಗುತ್ತವೆ ಎಂಬ ಆಧಾರದ ಮೇಲೆ ಆರೆಸ್ಸೆಸ್ ಅವರನ್ನು ಪ್ರಜಾಸತ್ತಾತ್ಮಕ ಚಳುವಳಿಯಿಂದ ಪ್ರತ್ಯೇಕಿಸಲು ಪ್ರಯತ್ನಿಸುತ್ತಿದೆ. ಜಾತಿ-ವಿರೋಧಿ ಹೋರಾಟ, ಬ್ರಾಹ್ಮಣ - ವಿರೋಧಿ ಹೋರಾಟ ಎಂದು ಅವರನ್ನು ನಂಬಿಸಲು ಪ್ರಯತ್ನಿಸುತ್ತಿದೆ. ಕೆಲವು ಕಡೆ ಸಫಲವೂ ಆಗಿದೆ. ಪುರೋಹಿತಶಾಹಿ ಮತ್ತು ಭೂಮಾಲಕತ್ವ ಸೇರಿರುವ ಭಾರಿ ಬ್ರಾಹ್ಮಣ ಭೂಮಾಲಕರನ್ನು ಬಿಟ್ಟರೆ, ಉಳಿದ ವರ್ಗಗಳ ಬ್ರಾಹ್ಮಣರು ಪ್ರಜಾಸತ್ತಾತ್ಮಕ ಚಳುವಳಿಯ ಅವಿಭಾಜ್ಯ ಅಂಗ. ಅವರು ಚಳುವಳಿಯಿಂದ ದೂರಸರಿದಿದ್ದರೆ ಅವರನ್ನು ಗೆದ್ದುಕೊಳ್ಳುವುದು ಅವಶ್ಯ.

? ಪಂಜಾಬ ಕಾಶ್ಮೀರ ಸಮಸ್ಯೆ ಹುಟ್ಟಲು ಸೈದ್ಧಾಂತಿಕ ಕಾರಣ ವೇನು?

-ಎನ್.ಎಸ್.ನಿಂಬರಗ್ಗಿ ಹುಬ್ಬಳ್ಳಿ

! ಪಂಜಾಬ್ ಮತ್ತು ಕಾಶ್ಮೀರ ಎರಡೂ ಭಾರತದ ಒಕ್ಕೂಟದಲ್ಲಿ ವಿಶಿಷ್ಟ ರಾಜ್ಯಗಳು. ಈ ಎರಡೂ ರಾಜ್ಯಗಳ ವಿಶೇಷವೆಂದರೆ, ದೇಶದಲ್ಲಿ ಅಲ್ಪ ಸಂಖ್ಯಾತರಾದ ಸಿಕ್ಖರು ಮತ್ತು ಮುಸ್ಲಿಮರು ಈ ರಾಜ್ಯಗಳಲ್ಲಿ ಅನುಕ್ರಮವಾಗಿ ಬಹುಸಂಖ್ಯಾತರು. ಭಾರತದ ರಾಜ್ಯಗಳು ಭಾಷಾ ದೇಶೀ ಜನಾಂಗದ ಆಧಾರದ ಮೇಲೆ ರಚಿತವಾಗಿದೆ. ಭಾರತ ಭಾರೀ ವೈವಿಧ್ಯವುಳ್ಳ ದೇಶ. ಆದ್ದರಿಂದ ಇಲ್ಲಿ ನಿಜವಾದ ಫೆಡರಲ್ ರಾಜಕೀಯ ತತ್ವದ ಮೇಲೆ ಮಾತ್ರ ಐಕ್ಯತೆ ಸಾಧ್ಯ. ಆದರೆ ಗುತ್ತೇದಾರಿ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆ ಸ್ವಭಾವತಃ ಪ್ರಾದೇಶಿಕ ಅಸಮಾನ ಬೆಳವಣಿಗೆ, ಅತಿ ಕೇಂದ್ರೀಕರಣಕ್ಕೆ ಹಾದಿ ಮಾಡಿಕೊಡುತ್ತದೆ. ಅದರ ವಿರುದ್ಧ ಎದ್ದುಬರುವ ಪ್ರಜಾಸತ್ತಾತ್ಮಕ ಚಳುವಳಿಯನ್ನು ಮುರಿಯಲು ಭಾಷೆ, ಜನಾಂಗ, ಧರ್ಮ, ಕೋಮು ಭಿನ್ನತೆಯನ್ನು ಪರಸ್ಪರ ವಿರುದ್ಧ ಎತ್ತಿ ಕಟ್ಟಲು ಪ್ರಯತ್ನಿಸುತ್ತದೆ. ಇದರಿಂದ ಎಲ್ಲಾ ಭಾಷಾ - ದೇಶೀ ಜನಾಂಗಗಳಲ್ಲಿ ಅತೃಪ್ತಿ ಬೆಳೆದಿದೆ ಕೇಂದ್ರದ ಬಗ್ಗೆ. (ನಿಜವಾಗಲೂ ಆಳುವವರ್ಗಗಳ ಬಗ್ಗೆ ಇದು ಇರಬೇಕಾದ್ದು). ಇದು ಪ್ರತ್ಯೇಕತಾವಾದಕ್ಕೆ ಜಾಗ ಹಸನು ಮಾಡಿಕೊಟ್ಟಂತೆ. ಆದರೆ ಈ ಎರಡೂ ರಾಜ್ಯಗಳಲ್ಲಿ ಧಾರ್ಮಿಕ ಕಾರಣವೂ ಸೇರಿಕೊಂಡು ಅಸ್ಥಿರತೆ ಪರಿಸ್ಥಿತಿ ಉಂಟುಮಾಡಿದೆ. ಈ ಭಾಷಾ ದೇಶೀ ಜನಾಂಗಗಳ ಮೂಲಭೂತವಾಗಿ ಪ್ರಜಾಸತ್ತಾತ್ಮಕ ಆಕಾಂಕ್ಷೆಯನ್ನು ಧಾರ್ಮಿಕ ಮೂಲಭೂತವಾದಿಗಳು ಪ್ರತ್ಯೇಕತಾವಾದದತ್ತ ಒಯ್ಯುವುದರಲ್ಲಿ ಸಫಲರಾಗಿದ್ದಾರೆ. ಇದಕ್ಕೆ ಬೂರ್ಜ್ವಾ ಪಕ್ಷಗಳ ಅಲಕ್ಷ್ಯ, ಪ್ರಜಾಸತ್ತಾತ್ಮಕ ಚಳುವಳಿಯ ದುರ್ಬಲತೆ ಪ್ರಮುಖ ಕಾರಣವಾಗಿದೆ. ಈ ಎರಡೂ ರಾಜ್ಯಗಳು ಸಾಮ್ರಾಜ್ಯಶಾಹಿ ಪ್ರತ್ಯೇಕತಾವಾದಿ ಮೂಲಭೂತವಾದಿಗಳಿಗೆ ಕೊಡುತ್ತಿರುವ ಕುಮ್ಮಕ್ಕು ಈ ಸಮಸ್ಯೆಯನ್ನು ಉಲ್ಬಣಗೊಳಿಸಿದೆ.



ಸ್ಟಾಲಿನ್ ಪ್ರಶ್ನೆ

'ಗ್ಲಾಸ್‌ನೋಸ್ತ್' 'ಪೆರೆಸ್ಟ್ರೋಯಿಕಾ' ದ ಪ್ರಸ್ತುತ ಘಟ್ಟದಲ್ಲಿ ಮತ್ತೆ ಸೋವಿಯತ್ ನಾಡಿನ ಸ್ಟಾಲಿನ್ನರ ಮೇಲೆ, ಸಮಾಜವಾದದ ಸಾಧನೆಗಳ ಮೇಲೆ ಲಂಗುಲಗಾಮಿಲ್ಲದ ದುಷ್ಟ ಆಕ್ರಮಣ ನಡೆಯುತ್ತಿದೆ. ಇದು ಅಚಾರಿತ್ರಿಕ ನಿಲುವಿನ ಪರಿಣಾಮ ಎಂದು ಸಿ.ಪಿ.ಐ(ಎಂ) ನಿಲುವು. ಏಕೆ ಮತ್ತು ಹೇಗೆ ಇದು ಅಚಾರಿತ್ರಿಕ ಎಂದು ಐದು ದಶಕಗಳೂ ಹೆಚ್ಚು ಕಾಲದಿಂದ ಕಮ್ಯುನಿಸ್ಟ್ ಆಂದೋಲನವನ್ನು ಒಳಗಿನಿಂದ ಆಮೂಲಾಗ್ರವಾಗಿ ನೋಡಿರುವ ಸ್ಟಾಲಿನ್ನರೊಂದಿಗೆ ಚರ್ಚಿಸಿದ ವೈಯಕ್ತಿಕ ಅನುಭವೂ ಇರುವ ಸಿ.ಪಿ.ಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಕಾಂ. ಎಂ. ಬಸವಪುನ್ನಯ್ಯ "ಪೀಪಲ್ಸ್ ಡೆಮಾಕ್ರಸಿ"ಯಲ್ಲಿ ಪ್ರಕಟವಾದ "ಆತ್ಮಾವಲೋಕನ ಮತ್ತು ಸಿಂಹಾವಲೋಕನ"ದಲ್ಲಿ ವಿಶ್ಲೇಷಿಸಿದ್ದಾರೆ. ಫೆಬ್ರುವರಿ 1956 ರಿಂದ ಆರಂಭವಾದ ಈ ಚರ್ಚೆಯ ಇತಿಹಾಸದ ಸಿಂಹಾವಲೋಕನ ಮಾಡಿರುವ ಈ ಲೇಖನದ ಸಂಗ್ರಹಾನುವಾದವನ್ನು ನಮ್ಮ ಓದುಗರಿಗಾಗಿ ಪ್ರಸ್ತುತ ಪಡಿಸುತ್ತಿದ್ದೇವೆ.

ಚಾರಿತ್ರಿಕ ಮೌಲ್ಯ ಮಾಪನವಲ್ಲ

- ದೂಷಣೆಯ ಪ್ರಚಾರ

ಫೆಬ್ರುವರಿ 1956 ರಲ್ಲಿ ನಡೆದ ಸೋವಿಯತ್ ಒಕ್ಕೂಟ ಕಮ್ಯುನಿಸ್ಟ್ ಪಕ್ಷ (ಸಿ.ಪಿ.ಎಸ್.ಯು.)ದ 20ನೇ ಮಹಾಧಿವೇಶನ 1924 ರಿಂದ ಲೆನಿನ್ ನಂತರದ ದಶಕಗಳಲ್ಲಿ 1953 ರವರೆಗೆ ಸ್ಟಾಲಿನ್ನರ ಪಾತ್ರದ ಪ್ರಶ್ನೆ ಎತ್ತಿತ್ತು. ಅಂದಿನಿಂದ ಇದು ವಿಶ್ವವ್ಯಾಪಿ ಚರ್ಚೆಯ ಒಂದು ವಿಷಯವಾಗಿ ಬಿಟ್ಟಿದೆ.

ಸಿ.ಪಿ.ಎಸ್.ಯು. ಕೇಂದ್ರ ಸಮಿತಿಯ ಪ್ರಥಮ ಕಾರ್ಯದರ್ಶಿ ಎನ್.ಎಸ್. ಕ್ರುಶ್ಚೊವ್ ಅಂದು ಮಂಡಿಸಿದ ವರದಿಯ ಒಂದು ಅಪ್ರಕಟಿತ "ಗುಪ್ತ ವರದಿ"ಯೂ ಇತ್ತು. ಆದರೆ ಮಹಾಧಿವೇಶನದ ಮಟ್ಟದ ಸಭೆಯಲ್ಲಿ ಮಂಡಿಸಿದ ಈ ವರದಿ 'ಗುಪ್ತ'ವಾಗಿ ಉಳಿಯಲೇ ಇಲ್ಲ. ಮೂರು ನಾಲ್ಕು ತಿಂಗಳಲ್ಲೇ ಅದು ವಿಶ್ವ ಬಂಡವಾಳಶಾಹೀ ಪತ್ರಿಕೆಗಳಲ್ಲಿ ಅಕ್ಷರಶಃ ಪ್ರಕಟಗೊಂಡಿತು. ಅದು ಹೇಗೆ ಆಯಿತು, 1989 ಅಂತ್ಯದವರೆಗೆ ಸಿ.ಪಿ.ಎಸ್.ಯು. ಮುಖಂಡತ್ವ ಏಕೆ ಅದನ್ನು ಪ್ರಕಟಿಸಲಿಲ್ಲ ಎಂಬುದು ಈಗಲೂ ಚರ್ಚಾಸ್ಪದ ವಿಷಯ.

20 ನೇ ಮಹಾಧಿವೇಶನದ ನಂತರ ವಿಶ್ವ ಕಮ್ಯುನಿಸ್ಟ್ ಆಂದೋಲನ ಸ್ಟಾಲಿನ್ ವ್ಯಕ್ತಿ ಪೂಜೆಯ ಪರಾಮರ್ಶೆಯನ್ನು ಆಗಾಗ ನಡೆಸಿದೆ.

ಇದರಲ್ಲಿ ಚೀಣಾದ ಕಮ್ಯುನಿಸ್ಟ್ ಮುಂದಾಳುಗಳು ಅತ್ಯುತ್ತಮ ಕಾಣಿಕೆ ನೀಡಿದರು. "ಕಾರ್ಮಿಕ ವರ್ಗದ ಸರ್ವಾಧಿಕಾರದ ಕುರಿತು" ಮತ್ತು "ಮತ್ತೊಮ್ಮೆ ಶ್ರಮಿಕ ವರ್ಗದಸರ್ವಾಧಿಕಾರದ ಕುರಿತು" ಎಂಬೆರಡು ವಿಖ್ಯಾತ ದಸ್ತಾವೇಜುಗಳು ಇಂದೂ ಕೂಡಾ ಪ್ರೌಢ, ರಚನಾತ್ಮಕ ಕಾಣಿಕೆಯಾಗಿ ನಿಂತಿದೆ. ಸೋವಿಯತ್ ಮುಖಂಡರು ಇದನ್ನು ಸ್ವಾಗತಿಸಿ ತಮ್ಮ ಓದುಗರಿಗಾಗಿ ಅದನ್ನು ತಮ್ಮ ಪತ್ರಿಕೆಗಳಲ್ಲಿ ಪ್ರಕಟಿಸಿದರು ಕೂಡಾ.

ನಂತರ 30, ಜೂನ್ 1956 ರಲ್ಲಿ ಸಿ.ಪಿ.ಎಸ್.ಯು.ಕೇಂದ್ರ ಸಮಿತಿ ಒಂದು ವಿಶೇಷ ನಿರ್ಣಯ ಅಂಗೀಕರಿಸಿತು. "ವ್ಯಕ್ತಿ ಪೂಜೆ ಮತ್ತು ಅದರ ಪರಿಣಾಮಗಳ ನಿವಾರಣೆ" ಈ ನಿರ್ಣಯದ ಶಿರೋನಾಮೆ.

> ಸ್ಟಾಲಿನ್ ಪ್ರಶ್ನೆ ಕೇವಲ ಸೋವಿಯತ್ ಒಕ್ಕೂಟಕ್ಕೆ ಸಿ.ಪಿ.ಎಸ್.ಯು. ಗಷ್ಟೇ ಸಂಬಂಧಿಸಿದ 'ಖಾಸಗಿ ವ್ಯವಹಾರ' ಎಂದು ಅದು ಭಾವಿಸಿದಂತಿದೆ ಎಂದು ಬರ್ದ್ವಾನ್ ನಿರ್ಣಯ ಟೀಕಿಸಿತ್ತು.

"ಲೆನಿನ್‌ರ ಆದೇಶಗಳನ್ನು ಅನುಷ್ಠಾನಕ್ಕೆ ತರುವಲ್ಲಿ ದೀರ್ಘಕಾಲ ಸ್ಟಾಲಿನ್ನರು ಸಕ್ರಿಯವಾಗಿ ದುಡಿದರು. ಮಾರ್ಕ್ಸ್‌ವಾದ-ಲೆನಿನ್ ವಾದಕ್ಕೆ ವಿಧೇಯರಾಗಿದ್ದು ಒಬ್ಬ ದೊಡ್ಡ ಮಟ್ಟದ ಸಿದ್ಧಾಂತಿ ಹಾಗೂ ಸಂಘಟಕರಾಗಿ ಪಕ್ಷಕ್ಕೆ ನೇತೃತ್ವ ನೀಡಿದರು. ಟ್ರಾಟ್ಸ್ಕಿವಾದಿ ಗಳು, ಬಲ ಪಂಥೀಯ ಸಮಯಸಾಧಕರು, ಬೂರ್ಜ್ವಾ ರಾಷ್ಟ್ರೀಯವಾದಿಗಳ ವಿರುದ್ಧ, ಹೊರಗಿನ ಬಂಡವಾಳ ಶಾಹಿ ಪಿತೂರಿಗಳ ವಿರುದ್ಧ ಪಕ್ಷದ ಹೋರಾಟಕ್ಕೆ ನೇತೃತ್ವ ನೀಡಿದರು. ಈ ರಾಜಕೀಯ, ಸೈದ್ಧಾಂತಿಕ ಹೋರಾಟದಲ್ಲಿ ಅವರು ದೊಡ್ಡ ಅಧಿಕಾರವಾಣಿ ಜನಪ್ರಿಯತೆ ಗಳಿಸಿದರು. ಆದರೆ ನಮ್ಮೆಲ್ಲಾ ಮಹಾನ್ ವಿಜಯಗಳನ್ನು ಅವರ ಹೆಸರಿನೊಂದಿಗೆ ಜೋಡಿಸುವ ಒಂದು ತಪ್ಪು ಆಚರಣೆ ಕಂಡು ಬಂತು" ಎಂದು ಆ ನಿರ್ಣಯ ಹೇಳಿತ್ತು.

ಜನವರಿ 1959ರಲ್ಲಿ ಸಿ.ಪಿ.ಎಸ್.ಯು. ಮುಖಂಡತ್ವ ಇನ್ನೊಂದು ಅಥವಾ ಮೂರನೇ ಆವೃತ್ತಿ ಪ್ರಕಟಿಸಿತು. ಇದು ಸೋವಿಯತ್ ವಿಶ್ವಕೋಶದಲ್ಲಿ ಸೇರಿಸಬೇಕಾಗಿದ್ದ ಆವೃತ್ತಿಯಾಗಿತ್ತು. 20 ನೇ ಮಹಾಧಿವೇಶನದ ನಂತರ ಸ್ಟಾಲಿನ್ನರ ಕುರಿತಾದ ಮೊದಲ ಅಧಿಕಾರಯುತ ಮರುಪರಾಮರ್ಶೆಯಿದು ಎಂದು ವಿಶ್ವಕೋಶದ ಪ್ರಕಾಶಕರು ಟಿಪ್ಪಣಿಮಾಡಿದ್ದರು. ಮರುಪರಾಮರ್ಶೆಯ ಕೊನೆಯ ಎರಡು ಪರಿಚ್ಛೇದಗಳ ಶಿರೋನಾಮೆ ಸ್ಟಾಲಿನ್ನರ ಹೆಸರು ಮಾರ್ಕ್ಸ್‌ವಾದ-ಲೆನಿನ್‌ವಾದದಿಂದ ಅಭಿನ್ನ". ಸ್ಟಾಲಿನ್ನರ ಚಟುವಟಿಕೆಗಳೆಲ್ಲಾ ಸೋವಿಯತ್ ದೇಶದಲ್ಲಿ ಮಹಾನ್ ಸಮಾಜವಾದಿ ಸಾಧನೆಗಳೊಂದಿಗೆ ಬೆಳೆದಿದ್ದವು ಎಂದಿರುವ ಈ ಮರುಪರಾಮರ್ಶೆ ಅವರ ಕೊನೆಯ ವರ್ಷಗಳಲ್ಲಿ ಸ್ಟಾಲಿನ್ ಮಾಡಿದ ತಪ್ಪುಗಳನ್ನು ಪಕ್ಷದ ಹಾಗೂ ದೇಶದ ಮುಖಂಡರಾಗಿ ಅವರ ದೀರ್ಘ ಜೀವನಕ್ಕೆಲ್ಲಾ ವಿಸ್ತರಿಸುವುದು ಚರಿತ್ರೆಯ ಒಂದು ದೊಡ್ಡ ವಿಕೃತಿಯಾಗುತ್ತದೆ ಎಂದಿತು. ಸಾಮ್ರಾಜ್ಯಶಾಹಿ ವಲಯಗಳು ತಾವೇ ಸೃಷ್ಟಿಸಿದ "ಸ್ಟಾಲಿನ್‌ವಾದ"ದ ವಿರುದ್ಧ ಆರಂಭಿಸಿರುವ ಪ್ರಚಾರ ವಾಸ್ತವವಾಗಿ ಕ್ರಾಂತಿಕಾರಿ ಆಂದೋಲನದ ವಿರುದ್ಧ ಒಂದು ಪ್ರಚಾರ, ಅದೇ ರೀತಿ ಪರಿಷ್ಕರಣವಾದಿಗಳ ಒದರಾಟ ಮಾರ್ಕ್ಸ್‌ವಾದ - ಲೆನಿನ್‌ವಾದದ ಮೂಲಭೂತ ತತ್ವಗಳ ವಿರುದ್ಧ ಹೋರಾಟದ ಒಂದು ರೂಪ ಎಂದು ಅದು ಟೀಕಿಸಿತ್ತು.

ನಮ್ಮ ಪರಾಮರ್ಶೆ

ಭಾರತ ಕಮ್ಯುನಿಸ್ಟ್ ಪಕ್ಷ ಪಾಲ್ಘಾಟ್‌ನಲ್ಲಿ 1956 ರಲ್ಲಿ ನಡೆದ ನಾಲ್ಕನೇ ಮಹಾಧಿವೇಶನದಲ್ಲಿ ಈ ಗುಪ್ತ ವರದಿ ಅಂಶಗಳೊಂದಿಗೆ ಅಸಮ್ಮತಿ ವ್ಯಕ್ತಪಡಿಸಿತು. ನಂತರ 1963-64 ರಲ್ಲಿ ಪಕ್ಷದ ವಿಭಜನೆಯಾಗುವವರೆಗೆ ಇನ್ನೂ ಕೆಲವು ನಿರ್ಣಯಗಳು ಕ್ರುಶ್ಚೊವ್‌ರ 'ಗುಪ್ತ ವರದಿ' ಗಿಂತ ಭಿನ್ನ ನಿಲುವು ವ್ಯಕ್ತ ಪಡಿಸಿದವು.

ಸಿ.ಪಿ.ಐ(ಎಂ) ಸ್ಥಾಪನೆಯಾದ ನಂತರ ಏಪ್ರಿಲ್ 5 ರಿಂದ 12, 1968 ರಲ್ಲಿ ಪಶ್ಚಿಮ ಬಂಗಾಳದ ಬರ್ದ್ವಾನ್‌ನಲ್ಲಿ ನಡೆದ ಕೇಂದ್ರ ಪ್ಲೀನಂ ಒಂದು "ಸೈದ್ಧಾಂತಿಕ ನಿರ್ಣಯ"ಅಂಗೀಕರಿಸಿತು. ಇದು ನಮ್ಮ ಪಕ್ಷದ ನಿಲುವನ್ನು ಇನ್ನಷ್ಟು ವಿವರವಾಗಿ, ತೀಕ್ಷ್ಣವಾಗಿ ಪುನರುಚ್ಚರಿಸಿತು. "ಅಮೆರಿಕನ್ ಸಾಮ್ರಾಜ್ಯಶಾಹಿ ಮತ್ತು ವಿವಿಧ ಕಮ್ಯುನಿಸ್ಟ್ ವಿರೋಧಿ ಪ್ರತಿಗಾಮಿ ವಲಯಗಳು ಈ ಗುಪ್ತ ವರದಿಯನ್ನು ಉತ್ಸಾಹದಿಂದ ವ್ಯಾಪಕವಾಗಿ ಹಂಚಿದ್ದು, ಸಿ.ಪಿ.ಎಸ್.ಯು. ಮುಖಂಡತ್ವ ಒಂದೆಡೆ ಅಧಿಕೃತವಾಗಿ ವರದಿಯ ಪ್ರಾಮಾಣಿಕತೆಯನ್ನು ನಿರಾಕರಿಸಿದರೂ, ಇನ್ನೊಂದು ಕಡೆ ಸ್ವಲ್ಪ ಸ್ವಲ್ಪವೇ ಅದರ ವಿವಿಧ ಅಂಶಗಳನ್ನು ಪುಷ್ಟೀಕರಿಸುವಂತೆ ಸೋವಿಯತ್ ಪತ್ರಿಕೆಗಳಲ್ಲಿ ಲೇಖನಗಳಲ್ಲಿ ಪ್ರಕಟಣೆ, ಒಂದು ದಶಕದ ನಂತರವೂ ಈ ವರದಿಯ ಅಧಿಕಾರಯುತ ಆವೃತ್ತಿಯ ಪ್ರಕಟಣೆ ಮಾಡದಿರುವುದು, ಇವೆಲ್ಲದಕ್ಕೂ ಮಿಗಿಲಾಗಿ ಇದು ಕಮ್ಯುನಿಸ್ಟರಿಗೆ ತಮ್ಮ ತಪ್ಪುಗಳಿಂದ ಪಾಠ ಕಲಿತು ಆತ್ಮ ವಿಶ್ವಾಸದಿಂದ ಮುಂದು ವರಿಯಲು ಅನುಕೂಲ ಮಾಡಿಕೊಡುವ ಸಾಧನವಾಗುವ ಬದಲು ಕಮ್ಯುನಿಸಂನ ಪಕ್ಕಾ ಶತ್ರುಗಳ ಕೈಯಲ್ಲಿ ಕಮ್ಯುನಿಸಂನ ಪ್ರತಿಷ್ಠೆಗೆ ಕುಂದು ತರಲು, ಜನರಲ್ಲಿ ಅದರ ನಂಬಿಕೆ ಕೆಡಿಸಲು ನೆರವಾದ ಸಾಧನವಾಯಿತೆಂಬ ಸಂಗತಿಯೇ ಕ್ರುಶ್ಚೊವ್‌ರ ಈ ಕುಖ್ಯಾತ ಕೃತಿಯ ಬಗ್ಗೆ ಬಹಳಷ್ಟು ಹೇಳುತ್ತದೆ" ಎಂದು ಈ ನಿರ್ಣಯ ಹೇಳಿತ್ತು.

ಸ್ಟಾಲಿನ್ ಪ್ರಶ್ನೆ ಕೇವಲ ಸೋವಿಯತ್ ಒಕ್ಕೂಟಕ್ಕೆ ಸಿ.ಪಿ.ಎಸ್.ಯು. ಗಷ್ಟೇ ಸಂಬಂಧಿಸಿದ 'ಖಾಸಗಿ ವ್ಯವಹಾರ' ಎಂದು ಅದು ಭಾವಿಸಿದಂತಿದೆ ಎಂದು ಬರ್ದ್ವಾನ್ ನಿರ್ಣಯ ಟೀಕಿಸಿತ್ತು. ಈ ಗುಪ್ತ ವರದಿ ವಿಶ್ವ ಕಮ್ಯುನಿಸ್ಟ್ ಆಂದೋಲನದ ಮೂರು ದಶಕಗಳ ಇತಿಹಾಸದ ಪುಟಗಳನ್ನು ಬೇಕೆಂದೇ ಹರಿದು ಹಾಕುವ ಪ್ರಯತ್ನವಲ್ಲದೆ ಬೇರೇನೂ ಅಲ್ಲ, ಎಂದ ಆ ನಿರ್ಣಯ ಈ ಪುಟಗಳ ಸ್ಥಾನವನ್ನು ಗುಪ್ತ ವರದಿಯೆಂಬ ಚಿಂದಿಯೊಂದು ಎಂದೂ ಪಡೆಯಲಾರದು ಎಂದು ತೀಕ್ಷ್ಣವಾಗಿ ಟೀಕಿಸಿತು.

"ಸೋವಿಯತ್ ಪರಿಷ್ಕರಣವಾದಿ ಮುಖಂಡರು ವಿಶ್ವ ಕಮ್ಯುನಿಸ್ಟ್ ಆಂದೋಲನದ ಬಗ್ಗೆ ಇಂತಹ ವರದಿಯೊಂದು ಉಂಟು ಮಾಡಬಹುದಾದ ಅನಿಷ್ಟಕಾರಿ ಪರಿಣಾಮಗಳ ಬಗ್ಗೆ ಯಾವುದೇ ಗಮನ ನೀಡಲಿಲ್ಲ. ಕನಿಷ್ಟ ವಿಶ್ವದ ದೊಡ್ಡ ಸೋದರ ಪಕ್ಷಗಳೊಂದಿಗಾದರೂ ಸಮಾಲೋಚಿಸಬೇಕೆಂದು ಅವರಿಗನ್ನಿಸಲಿಲ್ಲ. ಹೀಗೆ ವಿಶ್ವ ಸಾಮ್ರಾಜ್ಯಶಾಹಿ ಅಪಪ್ರಚಾರಕ್ಕೆ ಆಹಾರ ಒದಗಿಸಿತು" ಎನ್ನುತ್ತಾ ಬರ್ದ್ವಾನ್ ಪ್ಲೀನಂನ ನಿರ್ಣಯ ಆಧುನಿಕ ಪರಿಷ್ಕರಣವಾದದ ಮುಖಂಡರು ಈ ರೀತಿ ಸ್ಟಾಲಿನ್ನರನ್ನು ಸಂಪೂರ್ಣವಾಗಿ ಅಲ್ಲ ಗಳೆಯುವುದಕ್ಕೂ ಮಾರ್ಕ್ಸ್‌ವಾದ - ಲೆನಿನ್‌ವಾದದ ಮೂಲಭೂತ ಪರಿಕಲ್ಪನೆಗಳ ಮೇಲೆ ಅವರು ನಡೆಸಿದ ಹಲ್ಲೆಗಳಿಗೂ ಸಂಬಂಧವಿದೆ ಎಂದಿತು.

ಸ್ಟಾಲಿನ್ - ವಿರೋಧದ ಪ್ರಸ್ತುತ ಘಟ್ಟದಲ್ಲಿ

'ಗ್ಲಾಸ್‌ನೋಸ್ತ್' 'ಪೆರೆಸ್ಟ್ರೋಯಿಕಾ'ದ ಅವಧಿಯಲ್ಲಿ ಮತ್ತೆ ಸ್ಟಾಲಿನ್ನರ ಮೇಲೆ ಸಮಾಜವಾದದ ಸಾಧನೆಗಳ ಮೇಲೆ, ಮಾರ್ಕ್ಸ್‌ವಾದ - ಲೆನಿನ್‌ವಾದದ ಮೂಲಭೂತ ಪರಿಕಲ್ಪನೆಗಳ ಮೇಲೆ ಲಂಗುಲಗಾಮಿಲ್ಲದ ದುಷ್ಟ ವ್ಯಾಪಕ ಆಕ್ರಮಣ ನಡೆಸಲಾಗುತ್ತಿದೆ. ವ್ಯಕ್ತಿ ಪೂಜೆಯ ಅನಿಷ್ಟಗಳನ್ನು ಬಹಿರಂಗಗೊಳಿಸುವ 1985 ರಲ್ಲಿ ಆರಂಭವಾಯಿತೆನ್ನಲಾದ ಸಮಾಜವಾದಿ ಸಮಾಜದ "ಕ್ರಾಂತಿಕಾರೀ ಪುನರ್ರಚನೆ" ಯನ್ನು ಮುಂದೊಯ್ಯುವ ಹೆಸರಿನಲ್ಲಿ ಸೋವಿಯತ್ ಚಾರಿತ್ರಿಕ ದಾಖಲೆಗಳ ಪುಟ ಪುಟಗಳಲ್ಲೂ ದಾಖಲಾಗುತ್ತದೆ. ಹೀಗೆ ಮಾಡುವುದರಿಂದ ಈಗಿನ ಸೋವಿಯತ್ ಮುಖಂಡರು ಸೋವಿಯತ್ ಒಕ್ಕೂಟದ ಮಟ್ಟದಲ್ಲಿಯಾಗಲೀ, ವಿಶ್ವ ಮಟ್ಟದಲ್ಲಿಯಾಗಲೀ ಸಮಾಜವಾದದ ಕಮ್ಯುನಿಸಂನ ಗುರಿ ಸಾಧನೆಗೆ ನೆರವಾಗುತ್ತಿದ್ದಾರೆ ಎಂದು ನನಗನಿಸುತ್ತಿಲ್ಲ.

ಎಪ್ಪತ್ತನೇ ವಾರ್ಷಿಕೋತ್ಸವದ ತನ್ನ ಭಾಷಣದಲ್ಲಿ ಗೊರ್ಬಚೆವ್ "ಸಂಕ್ಷಿಪ್ತವಾಗಿ ಹೇಳುವುದಾದರೆ, ಜೋಸೆಫ್ ಸ್ಟಾಲಿನ್ನರ ನೇತೃತ್ವದ ಪಕ್ಷದ ಮುಂದಾಳು ಕೇಂದ್ರ ಒಂದು ಸೈದ್ಧಾಂತಿಕ ಹೋರಾಟದಲ್ಲಿ ಲೆನಿನ್‌ವಾದವನ್ನು ಕಾಪಾಡಿತ್ತು" ಎಂದಿದ್ದರು. ಸ್ಟಾಲಿನ್ನರದ್ದು ಒಂದು ವೈರುಧ್ಯಮಯ ವ್ಯಕ್ತಿತ್ವ. ಚಾರಿತ್ರಿಕ ಸತ್ಯಕ್ಕೆ ನಾವು ನಿಷ್ಠರಾಗಿರಬೇಕಾದರೆ ಸಮಾಜವಾದದ ಹೋರಾಟಕ್ಕೆ ಅದರ ಸಾಧನೆಗಳನ್ನು ಕಾಪಾಡಲಿಕ್ಕೆ ಸ್ಟಾಲಿನ್‌ರ ಯಾರೂ ಅಲ್ಲಗೆಳೆಯಲಾಗದ ಕಾಣಿಕೆಗಳನ್ನು ನೋಡಲೇಬೇಕು. ಜತೆಗೆ ಅವರು ಗೈದ ಗಂಭೀರ ರಾಜಕೀಯ ತಪ್ಪುಗಳನ್ನು ಅವರು ಮತ್ತು ಅವರ ಸುತ್ತಲಿದ್ದವರು ಗೈದ ಅಧಿಕಾರದ ದುರುಪಯೋಗವನ್ನು (ಇದಕ್ಕೆ ಜನತೆ ಭಾರೀ ಬೆಲೆ ತೆರಬೇಕಾಯಿತು. ಸೋವಿಯತ್ ಸಮಾಜದ ಜೀವನದ ಮೇಲೆ ಇದು ಗಂಭೀರ ದುಷ್ಪರಿಣಾಮ ಬೀರಿತು) ನೋಡಬೇಕು ಎಂದಿದ್ದರು. ವಿಶ್ವ ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ ಸೋವಿಯತ್ ವಿಜಯದ ಮಹತ್ಸಾಧನೆ ಬಗ್ಗೆ ಹೇಳುತ್ತಾ "ಈ ವಿಜಯದ ಸಾಧನೆಯಲ್ಲಿ ಒಂದು ಅಂಶವೆಂದರೆ ಯುದ್ಧದ ವರ್ಷಗಳಲ್ಲಿ ಜೋಸೆಫ್ ಸ್ಟಾಲಿನ್ ತೋರ್ಪಡಿಸಿದ ರಾಜಕೀಯ ದೃಢ ನಿರ್ಧಾರ, ಉದ್ದೇಶ ಪೂರ್ಣತೆ ಮತ್ತು ಸತತ ಪ್ರಯತ್ನ ಹಾಗೂ ಜನರನ್ನು ಸಂಘಟಿಸುವಲ್ಲಿ, ಶಿಸ್ತು ಬದ್ಧ ಗೊಳಿಸುವಲ್ಲಿ ಅವರು ತೋರಿದ ಸಾಮರ್ಥ್ಯ" ಎಂದೂ ಗೊರ್ಬಚೆವ್ ವರ್ಣಿಸಿದ್ದರು.

ನಾನು ಅವರ ಈ ಉದ್ಗಾರಗಳನ್ನು ಇಲ್ಲಿ ನೆನಪಿಸುತ್ತಿರುವುದು ಈ ಬಗ್ಗೆ ಅವರ ಇತ್ತೀಚಿನ ಹೇಳಿಕೆಗಳು ಹೇಗೆ ಇವಕ್ಕಿಂತ ಭಿನ್ನವಾಗಿದೆ ಎಂದು ತೋರಿಸಲು. ಇತ್ತೀಚೆಗೆ ಸೋವಿಯತ್ ಮತ್ತು ವಿಶೇಷವಾಗಿ ಗೊರ್ಬಚೆವ್‌ರ ಹೇಳಿಕೆಗಳು ಹೆಚ್ಚೆಚ್ಚು ವಿಷಮಯ ಗೊಳ್ಳುತ್ತಿವೆ. ಅವುಗಳಲ್ಲಿ ವಸ್ತುನಿಷ್ಠತೆಯ ನೆರಳೂ ಕಾಣುತ್ತಿಲ್ಲ.

ಟೀಕೆ, ಸ್ವಯಂ ಟೀಕೆಯ, ಸೋವಿಯತ್ ಒಕ್ಕೂಟದ ಇತಿಹಾಸದ ಆಳ ಅಧ್ಯಯನದ ಹಕ್ಕಿನ ಹುಸಿ ನೆವದ ಮರೆಯಲ್ಲಿ ಸ್ಟಾಲಿನ್ ಮತ್ತವರ ಪಾತ್ರದ ಪ್ರಶ್ನೆ ಒಂದು ದುಷ್ಟ ವಿನೋದ ವಸ್ತುವಾಗಿ ಬಿಟ್ಟಿದೆ. ಸಿ.ಪಿ.ಎಸ್.ಯು. ಗೆ ತನ್ನ ಇತಿಹಾಸದ ಆಳಕ್ಕೆ ಹೋಗುವ ಹಕ್ಕು ಇದ್ದರೆ ಸಿ.ಪಿ.ಐ.(ಎಂ) ಗೂ ಸ್ಟಾಲಿನ್ನರ ವ್ಯಕ್ತಿ ಪೂಜೆ ಕುರಿತಂತೆ ಈಗಲೂ ಸೋವಿಯತ್ ಪತ್ರಿಕೆಗಳಲ್ಲಿ ಬರುವ ದುಷ್ಟಲೇಖನಗಳನ್ನು ಏಕದಂನಿರಾಕರಿಸುವ ಹಕ್ಕಿದೆ.

ಇಲ್ಲಿ ಒಂದು ವೈಯಕ್ತಿಕ ಅನುಭವ ತಿಳಿಸಿದರೆ ತಪ್ಪಾಗಲಿಕ್ಕಿಲ್ಲ.

1950 ರ ದಶಕದ ಉತ್ತರಾರ್ಧದಲ್ಲಿ ಸ್ಟಾಲಿನ್‌ರನ್ನು ಭೇಟಿ ಮಾಡುವ, ಅವರ ಮಾತು ಕೇಳುವ, ಅವರೊಡನೆ ಚರ್ಚಿಸುವ ಉತ್ತಮ ಅವಕಾಶ ನಮಗೆ ದೊರೆತಿತ್ತು. ಸಿ.ಪಿ.ಎಸ್.ಯು. ನೊಡನೆ ರಾಜಕೀಯ ಸೈದ್ಧಾಂತಿಕ ಚರ್ಚೆ ನಡೆಸಲು ಹೋದ ಅವಿಭಜಿತ ಸಿ.ಪಿ.ಐ.ನ ನಾಲ್ಕು ಸದಸ್ಯರ ಆಯೋಗದ ಸದಸ್ಯನಾಗಿದ್ದೆ. ಆಯೋಗದ ಇತರ ಸದಸ್ಯರೆಂದರೆ ಸಿ. ರಾಜೇಶ್ವರ ರಾವ್, ದಿವಂಗತ ಅಜೊಯ್ ಘೋಷ್ ಮತ್ತು ಶ್ರೀಪಾದ್ ಅಮೃತ್ ಡಾಂಗೆ. ರಾಜೇಶ್ವರ ರಾವ್ ನಿಯೋಗದ ಮುಖಂಡರಾಗಿದ್ದರು. ಸಿ.ಪಿ.ಎಸ್.ಯು. ನಿಯೋಗದ ಮುಖ್ಯಸ್ಥರು ಸ್ಟಾಲಿನ್ನರು. ಇತರ ಸದಸ್ಯರೆಂದರೆ ಮೊಲೊಟೊವ್, ಸುಸ್ಲೊವ್ ಮತ್ತು ಮಾಲೆನ್‌ಕೊವ್.

ಸ್ಟಾಲಿನ್‌ರ ಕೆಲವು ಆರಂಭಿಕ ಮಾತುಗಳು ನನ್ನ ನೆನಪಲ್ಲಿ ಹಸಿರಾಗಿವೆ. "ಇಂದಿನ ಭಾರತದ ಬಗ್ಗೆ ನಮ್ಮ ಜ್ಞಾನ ಸಾಕಷ್ಟಿಲ್ಲ. ನಾವು ಈಗ ಏನಾದರೂ ಹೇಳುವುದಾದರೆ ಅದು ಭಾರತ ಕುರಿತ ನಮ್ಮ ಹಳೆಯ ಅಧ್ಯಯನದ ಆಧಾರದ ಮೇಲೆ, ಚಾರಿತ್ರಿಕ ಮತ್ತು ದ್ವಂದ್ವಾತ್ಮಕ ಭೌತವಾದದ ಸಾಮಾನ್ಯ ತಿಳುವಳಿಕೆಯ ಆಧಾರದ ಮೇಲೆ" ಎಂದರು ಅವರು.

ಕಮ್ಯೂನಿಸ್ಟ್ ಆಂದೋಲನ ಬೆಳೆದ ಬಗೆ

ಇದೆಯೇ ಎಂದು ಸ್ಟಾಲಿನ್ ಕೇಳಿದರು. ನಮ್ಮ ಪಕ್ಷಕ್ಕೆ ಕಾರ್ಯಕ್ರಮವೆಂಬುದಿರಲಿಲ್ಲ. ಕೇವಲ ರಾಜಕೀಯ ನಿರ್ಣಯಗಳ ಆಧಾರದ ಮೇಲೆಯೇ ಪಕ್ಷವನ್ನು ನಡೆಸಲಾಗುತ್ತಿತ್ತು ಎಂಬ ಅಂಶ ಗಮನಕ್ಕೆ ಬಂದು ನಾವು ಪೆಚ್ಚಾದೆವು. ಆಗ ಸ್ಟಾಲಿನ್ 1928 ರಲ್ಲಿ ನಮ್ಮ ಪಕ್ಷ ಕಮ್ಯುನಿಸ್ಟ್ ಅಂತರ್ರಾಷ್ಟ್ರೀಯದ ಕೇಂದ್ರಕ್ಕೆ ಒಂದು ಕರಡು ಕಾರ್ಯಕ್ರಮ ಕಳಿಸಿತ್ತು ಎಂದು ನೆನಪಿಸಿದರು. ಅದು 1943 ರಲ್ಲಿ ಕಮ್ಯುನಿಸ್ಟ್ ಅಂತರ್ರಾಷ್ಟ್ರೀಯದ ವಿಸರ್ಜನೆಯ ನಂತರ ಬೀಗ ಹಾಕಲ್ಪಟ್ಟ ಕಮ್ಯುನಿಸ್ಟ್ ಅಂತರ್ರಾಷ್ಟ್ರೀಯದ ಪತ್ರಾಗಾರದಲ್ಲಿ ಇರಬೇಕು ಎಂದ ಅವರು ತಮ್ಮ ಸಹಾಯಕರ ಮೂಲಕ ಪತ್ರಾಗಾರದ ಬೀಗ ತೆಗೆಸಿ ಅದನ್ನು ಹುಡುಕಿಸಿ ನಮಗೆ ಕೊಟ್ಟು, ಅದನ್ನು ಓದಿ ಪತ್ರಾಗಾರಕ್ಕೆ ಹಿಂದಿರುಗಿಸಿ ಎಂದು ಹೇಳಿದರು. ನಮ್ಮ ನಿಯೋಗದ ಸದಸ್ಯರೆಲ್ಲಾ ಹೇಗೆ ಈ ದಸ್ತಾವೇಜನ್ನು ಮರೆತಿದ್ದೆವು. ಆದರೆ ಎರಡು ದಶಕಗಳ ನಂತರವೂ ಸ್ಟಾಲಿನ್ ಅದನ್ನು ನೆನಪಿಟ್ಟುಕೊಂಡಿದ್ದರು ಎಂಬುದು ನಮ್ಮ ಮೇಲೆ ಭಾರೀ ಪ್ರಭಾವ ಬೀರಿತು.

ಸಿ.ಪಿ.ಐ(ಎಂ) ಈಗಾಗಲೇ ಹೇಳಿರುವಂತೆ ವಿಶ್ವ ಕಮ್ಯುನಿಸ್ಟ್ ಆಂದೋಲನದಲ್ಲಿ ಸ್ಟಾಲಿನ್‌ರ ಪಾತ್ರದ ಬಗ್ಗೆ ಒಂದು ವೈಜ್ಞಾನಿಕ ನಿಲುವಿಗೆ ಬದ್ಧವಾಗಿದೆ. ಇತಿಹಾಸದಲ್ಲಿ ವ್ಯಕ್ತಿಗಳ ಪಾತ್ರ, ವ್ಯಕ್ತಿ ಪೂಜೆಯ, ಯಾವ ಮಾರ್ಕ್ಸ್‌ವಾದಿಯೂ ಒಪ್ಪಲಾರದ ವ್ಯಕ್ತಿ ಪೂಜೆಯ ದುಷ್ಪರಿಣಾಮಗಳ ಬಗ್ಗೆ ನಮಗೆ ಸ್ವತಂತ್ರ ಅಭಿಪ್ರಾಯಗಳಿವೆ. ಆದರೆ ಪ್ರಸಿದ್ಧ ವ್ಯಕ್ತಿಗಳ ವಿಮರ್ಶೆಯನ್ನು ದೂಷಣೆಯ ಪ್ರಚಾರವಾಗಿ ಪರಿವರ್ತಿಸುವುದು ಚಾರಿತ್ರಿಕ ಮೌಲ್ಯ ಮಾಪನದಲ್ಲಿ ಅವರ ಸ್ಥಾನವನ್ನು ನಿರಾಕರಿಸುವುದು ಬೇರೆಯೇ ಆದ ಸಂಗತಿ.

1924 ರವರೆಗೆ ಸೋವಿಯತ್ ಪ್ರಭುತ್ವದ ಮುಖ್ಯಸ್ಥರಾಗಿದ್ದ ಲೆನಿನ್‌ರವರು ಸ್ಟಾಲಿನ್‌ರ ಶ್ರೇಷ್ಠತೆ ಹಾಗೂ ದೌರ್ಬಲ್ಯದ ಬಗ್ಗೆ ಕೆಲವು ಗಂಭೀರ ಹಾಗೂ ವಿಮರ್ಶಾತ್ಮಕ ಟಿಪ್ಪಣಿ ಮಾಡಿದ್ದರು. ಡಿಸೆಂಬರ್ 24,1922 ರಂದು ಪಕ್ಷಕ್ಕೆ ಬರೆದ ಪತ್ರದಲ್ಲಿ ಅಕ್ಟೋಬರ್ ಕ್ರಾಂತಿಯ ಫಲಗಳನ್ನು ಕ್ರೋಢೀಕರಿಸಬಹುದಾದ ಅಥವಾ ಹಾಳು ಮಾಡಬಹುದಾದ ಇಬ್ಬರು ಮುಖಂಡರಿದ್ದಾರೆ ಎಂದಿದ್ದರು. ಅವರೆಂದರೆ ಸ್ಟಾಲಿನ್ ಮತ್ತು ಟ್ರಾಟ್ಸ್ಕಿ. ನಂತರ ಡಿಸೆಂಬರ್ 30 ರಂದು ಬರೆದ ಟಿಪ್ಪಣಿಯಲ್ಲಿ ಲೆನಿನ್ ಹೀಗೆಂದಿದ್ದರು" ಶುದ್ಧ ಆಡಳಿತದ ಬಗ್ಗೆ ಸ್ಟಾಲಿನ್‌ರ ಅವಸರ ಹಾಗೂ ಉತ್ಸಾಹ ಕುಪ್ರಸಿದ್ಧ ಸಾಮಾಜಿಕ ರಾಷ್ಟ್ರೀಯವಾದದ ವಿರುದ್ಧ ಅವರ ತೀವ್ರ ಸೇಡು ಇಲ್ಲಿ ವಿನಾಶಕಾರಿ ಪಾತ್ರ ವಹಿಸಿದೆ. ರಾಜಕೀಯದಲ್ಲಿ ಸೇಡನ್ನು ಒಂದು ನಿಯಮವಾಗಿ ಬಳಸುವುದು ತುಂಬಾ ಕೆಟ್ಟದು".

ನಾವು ಇದನ್ನೆಲ್ಲಾ ಬರೆಯುತ್ತಿರುವುದು ಸತ್ತು ಹೋಗಿರುವ ಸ್ಟಾಲಿನ್ನರ "ಪ್ರೀತ್ಯರ್ಥ" ಅಲ್ಲ. ವಿಶ್ವದ ಯಾವುದೇ ಕಮ್ಯುನಿಸ್ಟ್ ಮುಖಂಡನ ಗಂಭೀರ ತಪ್ಪುಗಳನ್ನು ಮುಚ್ಚಿಡುವುದು ಕೂಡಾ ನಮ್ಮ ಉದ್ದೇಶವಲ್ಲ. ಲಂಗುಲಗಾಮಿಲ್ಲದ ತಮ್ಮ ವಿನೋದ ಕ್ರೀಡೆಗೆ ಅವರದೇ ಕಾರಣಗಳಿರಬಹುದಾದ, ಸಿ.ಪಿ.ಎಸ್.ಯು. ಮುಖಂಡರಿಗೆ ಬೇಸರ ಉಂಟು ಮಾಡುವುದೂ ನಮ್ಮ ಉದ್ದೇಶವಲ್ಲ. ಅಥವಾ ನಮ್ಮ ಮೌಲ್ಯ ಮಾಪನದಲ್ಲಿ ಏನೂ ತಪ್ಪಿಲ್ಲ ಎಂದೂ ಹೇಳಿ ಕೊಳ್ಳುತ್ತಿಲ್ಲ. ಆದರೆ ಯಾವುದೇ ವಿಮರ್ಶಾತ್ಮಕ ಪರಾಮರ್ಶೆಯಲ್ಲಿ ವೈಜ್ಞಾನಿಕ ಮತ್ತು ವಸ್ತುನಿಷ್ಠ ಮೌಲ್ಯ ಮಾಪನದ ಅಳತೆಗೋಲನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದೇ ನಾವು ಹೇಳುತ್ತಿರುವುದು.

1952 ರ ಅಕ್ಟೋಬರ್ 14 ರಂದು ಸಿ.ಪಿ.ಎಸ್.ಯು.ನ 19ನೇ ಮಹಾಧಿವೇಶನದಲ್ಲಿ ಸ್ಟಾಲಿನ್ನರ ಭಾಷಣದ ಒಂದೆರಡು ಅಂಶವನ್ನು ಪ್ರಸ್ತಾಪಿಸಿ ಈ ಲೇಖನ ಕೊನೆಗೊಳಿಸುತ್ತೇನೆ. ಇದು ಸ್ಟಾಲಿನ್ ಪಾಲಿಸುತ್ತಿದ್ದ, ಪ್ರತಿಪಾದಿಸುತ್ತಿದ್ದ ಶ್ರಮಿಕ ವರ್ಗದ ಅಂತರ್ರಾಷ್ಟ್ರೀಯತೆಯ ಅಂಶಕ್ಕೆ ಉದಾಹರಣೆಯಂತಿದೆ.

"ಒಂದು ದೊಡ್ಡ ಶಕ್ತಿಶಾಲಿ ಪಕ್ಷವಾಗಿಬಿಟ್ಟುದರಿಂದ ನಮಗಿನ್ನು ಬೇರೆ ಸೋದರ ಪಕ್ಷಗಳ ಬೆಂಬಲಬೇಕಿಲ್ಲ ಎಂದು ಯೋಚಿಸುವುದು ತಪ್ಪು ನಮ್ಮ ಪಕ್ಷಕ್ಕೆ ದೇಶಕ್ಕೆ ಬೇರೆ ದೇಶಗಳ ಸೋದರ ಜನತೆಗಳ ವಿಶ್ವಾಸ, ಸಹಾನುಭೂತಿ, ಬೆಂಬಲ ಯಾವಾಗಲೂ ಬೇಕಾಗಿತ್ತು ಮುಂದೆಯು ಸಹಾ ಬೇಕು.

"ಇಂತಹ ಬೆಂಬಲದ ಒಂದು ವಿಶೇಷ ಲಕ್ಷಣವೆಂದರೆ ಯಾವುದೇ ಸೋದರ ಪಕ್ಷ ನಮ್ಮ ಪಕ್ಷದ ಶಾಂತಿಯುತ ಆಕಾಂಕ್ಷೆಗಳನ್ನು ಬೆಂಬಲಿಸುವಾಗ, ಅದರ ಜತೆಗೇ ಶಾಂತಿಯ ರಕ್ಷಣೆಗಾಗಿ ತಮ್ಮ ಸ್ವಂತ ಜನಗಳ ಹೋರಾಟವನ್ನು ಬೆಂಬಲಿಸಿದಂತಾಗುತ್ತಿತ್ತು..ಏಕೆಂದರೆ ನಮ್ಮ ಪಕ್ಷದ ಹಿತಾಸಕ್ತಿಗಳು ಶಾಂತಿಪ್ರಿಯ ಜನಗಳ ಹಿತಾಸಕ್ತಿಗಳ ವಿರುದ್ಧವಾಗಿಲ್ಲ, ಬದಲಾಗಿ ಅವುಗಳೊಂದಿಗೆ ಬೆಸೆದು ಕೊಂಡಿದೆ. ಸೋವಿಯತ್ ಒಕ್ಕೂಟದ ಮಟ್ಟಿಗಂತೂ ತನ್ನ ಹಿತಾಸಕ್ತಿಗಳು ಮತ್ತು ವಿಶ್ವವ್ಯಾಪಿ ಶಾಂತಿಯ ಗುರಿ ಪರಸ್ಪರ ಪ್ರತ್ಯೇಕಿಸಲಾಗದಂತಹ ಸಂಗತಿ..

"ಸಹಜವಾಗಿಯೇ, ನಮ್ಮ ಪಕ್ಷ ಸೋದರ ಪಕ್ಷಗಳಿಗೆ ಋಣಿಯಾಗದಿರಲು ಸಾಧ್ಯವೇ ಇಲ್ಲ. ಅದು ಅವರಿಗೆ ನೆರವಾಗಲೇ ಬೇಕು. ಸೋದರ ಜನಗಳ ಉದ್ಧಾರದ ಹೋರಾಟಗಳಿಗೆ, ಶಾಂತಿ ರಕ್ಷಣೆಯ ಹೋರಾಟಗಳಿಗೆ ನೆರವಾಗಲೇ ಬೇಕು. ನಮ್ಮ ಪಕ್ಷ ಅದನ್ನೇ ಮಾಡುತ್ತಿದೆ...

ಈ ಉದ್ಧರಣೆ ನೀಡಿದ ಉದ್ದೇಶ ನಾವು ಕಮ್ಯುನಿಸ್ಟರು ಒಂದು ನಿರ್ದಿಷ್ಟ ಸಮಾಜವಾದಿ ದೇಶದ ಹಿತಾಸಕ್ತಿಗಳ ಬಗ್ಗೆ ನಮ್ಮನ್ನು ಸಮರ್ಪಿಸಿಕೊಳ್ಳುವಾಗ ಅಂತಹ ಸಮರ್ಪಣೆ ವಿಶ್ವದ ಸಮಸ್ತ ಕಮ್ಯುನಿಸ್ಟ್ ಆಂದೋಲನದ ಹಿತಾಸಕ್ತಿ ಗಳನ್ನು ಗಮನಕ್ಕೆ ತೆಗೆದುಕೊಳ್ಳದಿದ್ದರೆ ನಾವು ನೈಜ ಮಾರ್ಕ್ಸ್‌ವಾದಿಗಳಾಗಲು ಸಾಧ್ಯವಿಲ್ಲ ಎಂದು ನಮಗೇ ನೆನಪಿಸಿ ಕೊಳ್ಳುವುದು.

> ಇತಿಹಾಸದಲ್ಲಿ ವ್ಯಕ್ತಿಗಳ ಪಾತ್ರ, ವ್ಯಕ್ತಿ ಪೂಜೆಯ, ಯಾವ ಮಾರ್ಕ್ಸ್‌ವಾದಿಯೂ ಒಪ್ಪಲಾರದ ವ್ಯಕ್ತಿ ಪೂಜೆಯ ದುಷ್ಪರಿಣಾಮಗಳ ಬಗ್ಗೆ ನಮಗೆ ಸ್ವತಂತ್ರ ಅಭಿಪ್ರಾಯಗಳಿವೆ. ಆದರೆ ಪ್ರಸಿದ್ಧ ವ್ಯಕ್ತಿಗಳ ವಿಮರ್ಶೆಯನ್ನು ದೂಷಣೆಯ ಪ್ರಚಾರವಾಗಿ ಪರಿವರ್ತಿಸುವುದು ಚಾರಿತ್ರಿಕ ಮೌಲ್ಯ ಮಾಪನದಲ್ಲಿ ಅವರ ಸ್ಥಾನವನ್ನು ನಿರಾಕರಿಸುವುದು ಬೇರೆಯೇ ಆದ ಸಂಗತಿ.

ಎ.ಐ.ಎಸ್.ಎಫ್. ಮಡಲಿಗೆ

ಕಾಂ. ಸೂರಿಯವರ 'ಹೋರಾಟದ ಬದುಕು'

ಸಂದರ್ಶಕ: ಜಿ.ಎನ್. ನಾಗರಾಜ್

> **ಹಿಂದಿನ ಸಂಚಿಕೆಯಲ್ಲಿ**
>
> ವಿದ್ಯಾರ್ಥಿ ದೆಶೆಯನ್ನು ಎಸ್.ಎಸ್.ಎಲ್.ಸಿ.ಗೆ ಮುಗಿಸಿದ್ದ ಕಾಂ.ಸೂರಿಯವರು ತಾವು ಎಂ.ಟಿ.ಸಿ. ಕಂಪೆನಿಯಲ್ಲಿ ಹಾಗೂ ಖಾಸಗಿ ಆಡಿಟರ್‌ರವರ ಬಳಿ ಕೆಲಸ ಮಾಡುತ್ತಿದ್ದಾಗ ಮದ್ರಾಸಿನ ಪ್ರಸಿದ್ಧ ವಕೀಲ ಕೆ.ಭಾಷ್ಯಂರವರ ಸಂಪರ್ಕಕ್ಕೆ ಬಂದರು. ಸ್ವಾತಂತ್ರ್ಯ ಚಳುವಳಿಯ ತ್ಯಾಗಮಯ ಹೋರಾಟಗಳ ಕಥೆಗಳಿಂದ ಪ್ರಭಾವಿತರಾದರು. ಕೆಲಸವನ್ನು ತ್ಯಜಿಸಿ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದರು. ಮೈಸೂರಿನ ಸೆರೆಮನೆಯಲ್ಲಿ ಕೈದಿಯ ಜೀವನ ಸಾಗಿಸುತ್ತಾ ಇದ್ದರು.
>
> ಮುಂದೆ ಓದಿ

ಹಿಂದಿನ ಸಂಚಿಕೆಯಿಂದ

ಕೆಲಸಕ್ಕೆ ಸೇರಿದ ನಂತರವೇ ಮನೆಗೆ ಬರುತ್ತೇನೆ..

ಒಂದೂವರೆ ವರ್ಷಗಳ ಜೈಲುವಾಸದ ನಂತರ ನನಗೆ ಬಿಡುಗಡೆಯಾಯಿತು. ಈ ವೇಳೆಗೆ ಮೈಸೂರ್ ಟೊಬ್ಯಾಕೊ ಕಂಪೆನಿಯಲ್ಲಿನ ಕೆಲಸದಿಂದ ತೆಗೆಯಲಾಗಿತ್ತು. ನೆರೆಹೊರೆಯವರು, ಮನೆಯವರೆಲ್ಲರದೂ ಒಂದೇ ಮಾತು: ಇವನು ಚಳುವಳಿ ಹೂಡಿ ಜೈಲಿಗೆ ಸೇರಿದ್ದರಿಂದ ಎಲ್ಲೂ ಕೆಲಸ ಸಿಗುವುದಿಲ್ಲ. ಇಡೀ ಜೀವನ ನಿರುದ್ಯೋಗಿಯಾಗಿ ಪರಾವಲಂಬಿಯಾಗಿಯೇ ಕಳೆಯ ಬೇಕು. ಇದನ್ನು ಕೇಳಿ ತಾಯಿಗೆ ಗಾಬರಿ, ಆತಂಕ. ತಮ್ಮ ಆತಂಕವನ್ನು ಮಗನ ಬಳಿ ತೋಡಿಕೊಂಡರು ತಾಯಿ. ಈ ಮಾತುಗಳನ್ನು ತಾವೂ ಕೇಳಿದ್ದ ಕಾಂ. ಸೂರಿಯವರು ತಾಯಿಗೆ ಆಶ್ವಾಸನೆಯಿತ್ತರು "ನೀನೇನೂ ಹೆದರ ಬೇಡಮ್ಮ ನಾನು ಈ ದಿನ ಮನೆಗೆ ಮರಳಿ ಬರುವ ಮುನ್ನ ಕೆಲಸಕ್ಕೆ ಸೇರಿಯೇ ಮನೆಗೆ ಬರುತ್ತೇನೆ" ಎಂದು.

ಜೇಬಿನಲ್ಲಿ ಹಣವಿಲ್ಲ. ನಡೆದೇ ಕೆಲಸದ ಹುಡುಕಾಟ ಆರಂಭ. ಮನೆಯಿಂದ ಎಚ್.ಎ.ಎಲ್. ವರೆಗೂ ನಡೆದು ಹೋದರು.(ಆಗ ಎರಡನೆ ಮಹಾಯುದ್ಧದ ಕಾಲ. ಎಲ್ಲ ಕಡೆ ಯುದ್ಧಾವಶ್ಯಕ ವಸ್ತುಗಳ ತಯಾರಿಕೆ ಸರಬರಾಜಿಗೆ ತರಾತುರಿ) ಕೆಲಸಕ್ಕಾಗಿ ನೆರೆದವರ ಜೊತೆ ಕ್ಯೂನಲ್ಲಿ ನಿಂತರು. ಉದ್ಯೋಗ ನೀಡುವ ಅಧಿಕಾರಿ ಇವರಿಗೆ ಆಡಿಟ್ ನಲ್ಲಿ ಲೆಕ್ಕಪತ್ರ ವಿಭಾಗದಲ್ಲಿ ಅನುಭವವಿದ್ದುದನ್ನು ಕೇಳಿಕೊಂಡು "ಒಂದು ತಿಂಗಳ ನಂತರ ಬನ್ನಿ ಆಡಿಟ್ ವಿಭಾಗದಲ್ಲಿ ಕೆಲಸ ಖಾಲಿ ಬೀಳುತ್ತದೆ. ನಿಮ್ಮ ಅನುಭವಕ್ಕೆ ತಕ್ಕ ಕೆಲಸ ಕೊಡುತ್ತೇವೆ. ಆದರೆ ಸೂರಿಯವರದು ಒಂದೇ ಹಟ ಈ ದಿನವೇ ಎಂತಹದಾದರೂ ಒಂದು ಕೆಲಸ ಕೊಡಿ ಮುಂದೆ ಬೇಕಾದರೆ ಆಡಿಟ್ ವಿಭಾಗದಲ್ಲಿ ಹೆಚ್ಚಿನ ಕೆಲಸ ಕೊಡುವಿರಂತೆ ಎಂದು. ದಿನಗೂಲಿಯ ಮೇಲೆ ಚೆಕರ್ ಎಂಬೊಂದು ಕೆಲಸ ಸಿಕ್ಕ ಮೇಲೆ ಮರಳಿ ನಡೆದು ಮನೆಗೆ ಬರುವಾಗ ರಾತ್ರಿ 9.30 ಮನೆಯವರೆಲ್ಲಾ ಆತಂಕದಿಂದ ಕಾದು ಕುಳಿತಿದ್ದರು. ಕೆಲಸ ಸಿಗದೆ ಹೋದರೆ ಈ ಹುಡುಗ ಏನು ಮಾಡಿ ಬಿಡುವನೋ ಎಂಬ ಆತಂಕ ಅವರ ಮುಖದ ಮೇಲೆ ಎದ್ದು ಕಾಣುತ್ತಿತ್ತು. ಸೂರಿ ಮನೆಗೆ ಕಾಲಿಟ್ಟ ಮೇಲೆ ಅವರು ನಿಟ್ಟುಸಿರು ಬಿಟ್ಟು ನಿರಾಳವಾದರು.

ಎಚ್.ಎ.ಎಲ್.ನಲ್ಲಿ ಕೆಲವು ದಿನಗಳ ನಂತರ ಲೆಕ್ಕ ಪತ್ರ ವಿಭಾಗದ ಕೆಲಸ, ಹಾಗೂ ತಿಂಗಳಿಗೆ ರೂ 75 ಸಂಬಳ ಸಿಕ್ಕಿತು. ಮುಂದೆ ಬಜೆಟ್ ವಿಭಾಗದ ಮುಖ್ಯಸ್ಥರೂ ಆದರು.

ವಿದ್ಯಾರ್ಥಿ ಚಳುವಳಿಯ ಸೆಳೆತ

ಈಗಾಗಲೇ ನೀವು ಕಂಡಂತೆ ಸೂರಿಯವರ ಜೀವನದಲ್ಲಿ ಅನೇಕ ತಿರುವುಗಳು. ಬರಿಯ ತಿರುವುಗಳಲ್ಲ ಪೂರ್ಣ ತಿರುವುಗಳು. ಇಂಗ್ಲೀಷಿನಲ್ಲಿ, U Turn ಎನ್ನುತ್ತಾರಲ್ಲಾ ಹಾಗೆ. ಅಂತಹುದೊಂದು ತಿರುವು. ವಿದ್ಯಾರ್ಥಿ ಜೀವನವನ್ನುಬಿಟ್ಟು ಉದ್ಯೋಗಿ ಜೀವನ ವನ್ನಾರಂಭಿಸಿದ ಮೇಲೆ ವಿದ್ಯಾರ್ಥಿ ಚಳುವಳಿಗೆ ಧುಮುಕಿದ್ದು.

ಇಂದು ಸಿ.ಪಿ.ಐ.ನ ರಾಜ್ಯ ಕಾರ್ಯದರ್ಶಿಯಾಗಿರುವ ಕಾಂ. ಎಂ.ಎಸ್. ಕೃಷ್ಣನ್ ಸೂರಿಯವರ ಬಾಲ್ಯದ ಗೆಳೆಯರು. ಅರ್ಥಾತ್ ಚಡ್ಡಿಗೆಳೆಯರು. ಮಾಧ್ಯಮಿಕ ಶಾಲೆಯಿಂದ ಸೂರಿಯವರ ಸಹಪಾಠಿಯಾಗಿಯೇ ಇದ್ದ ಎಂ.ಎಸ್. ಕೃಷ್ಣನ್ ರವರು ಬಿ.ಎಸ್ಸಿ. ಓದಲು ಮದ್ರಾಸಿನ ಲಯೋಲ ಕಾಲೇಜಿಗೆ ಹೋದರು. ಅಲ್ಲಿ, ಭಾರತ ಕಮ್ಯುನಿಸ್ಟರ ಸಂಪರ್ಕದಿಂದಯ ನಂತರ ಬೆಂಗಳೂರಿನಲ್ಲಿ ಬಿ.ಇ. ಪಡೆಯಲು ಇಲ್ಲಿನ ಕಾಲೇಜು ಸೇರಿದರು.

ಆ ಸಮಯದಲ್ಲಿ ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್‌ನಲ್ಲಿ ಅವರು ಕ್ರಿಯಾ ಶೀಲ ಸಂಘಟಕ. ಪರಿಸ್ಥಿತಿಯ ಪಿತೂರಿಯಿಂದ ವಿದ್ಯಾಭ್ಯಾಸಕ್ಕೆ ಕಡಿತವಾಗಿದ್ದರೂ ಹೃದಯದಲ್ಲಿ ವಿದ್ಯಾರ್ಥಿಯಾಗಿಯೇ ಇದ್ದ ಸೂರಿಯವರೂ ಈ ವಿದ್ಯಾರ್ಥಿ ಚಳುವಳಿಯತ್ತ ಆಕರ್ಷಿತರಾಗಲು ಬಹಳಸಮಯವೇನೂ ಹಿಡಿಯಲಿಲ್ಲ. ಸರಿ, ಇವರೂ ವಿದ್ಯಾರ್ಥಿ ಚಳುವಳಿಯಲ್ಲಿ ಕೆಲಸ ಮಾಡಲಾರಂಭಿಸಿದರು.

ವಿದ್ಯಾರ್ಥಿ ಸಮ್ಮೇಳನ

ಕೃಷ್ಣನ್‌ರವರ ಮನೆಯಲ್ಲಿಯೇ ಊಟ, ವಸತಿ ಅವರ ಜೊತೆಯಲ್ಲಿಯೇ ಎ.ಐ.ಎಸ್.ಎಫ್‌ನ ಕೆಲಸ ಆಗ ಬೆಂಗಳೂರು ಸ್ಟೂಡೆಂಟ್ಸ್ ಯೂನಿಯನ್ ಎಂಬ ಹೆಸರಿನಲ್ಲಿ ಎ.ಐ.ಎಸ್.ಎಫ್. ಕೆಲಸ ಮಾಡುತ್ತಿತ್ತು. ಅದರ ಸಮ್ಮೇಳನ (ಪ್ರಾಯಶಃ ಪ್ರಥಮ ಸಮ್ಮೇಳನ) ವನ್ನು ಮಾಡಲು ನಿರ್ಧಾರ. ಈ ಸಮ್ಮೇಳನದ ಸ್ವಾಗತ ಸಮಿತಿಯ ಕಾರ್ಯದರ್ಶಿಯಾಗಿ ಸೂರಿಯವರ ಆಯ್ಕೆ. ಅಧ್ಯಕ್ಷರಾಗಿ ಮುಂದೆ ಬಹಳ ವರ್ಷ ಎಂ.ಪಿ. ಆಗಿದ್ದ ಮುಲ್ಕಾ ಗೋವಿಂದ ರೆಡ್ಡಿ. ಆದರೆ ಸಮ್ಮೇಳನವನ್ನು ಸರ್ಕಾರ ಬ್ಯಾನ್‌ಮಾಡಿತು. ವಿದ್ಯಾರ್ಥಿಗಳು ಸಮ್ಮೇಳನವನ್ನು ನಡೆಸಿಯೇ ತೀರಬೇಕೆಂದು ನಿರ್ಧರಿಸಿದರು. ಊರ ಹೊರವಲಯದ ಬನಶಂಕರಿ ಪ್ರದೇಶದ ಒಂದು ದೇವಾಲಯದಲ್ಲಿ ಸಮ್ಮೇಳನ. ಈ ಸಮ್ಮೇಳನಕ್ಕೆ 'ತೆಲಂಗಾಣ ಚಳುವಳಿ'ಗೆ ನಾಂದಿ ಹಾಡಿದ ಆಂಧ್ರ ಮಹಾಸಭಾದ ಪ್ರಧಾನ ಕಾರ್ಯದರ್ಶಿ ಹರಿ ಸರ್ವೋತ್ತಮ ರಾವ್‌ರವರನ್ನು ಆಹ್ವಾನಿಸಲಾಗಿತ್ತು. ಈ ಸಮ್ಮೇಳನ ಯಶಸ್ವಿಯಾಗಿ ನೆರವೇರಿತು.

ಆಗ ಎ.ಐ.ಎಸ್.ಎಫ್‌ನಲ್ಲಿ ಎಂ.ಎಸ್. ಕೃಷ್ಣನ್, ವೈ.ಆರ್.ಸತ್ಯ, ಶಿಷು ಎಂದೇ ಹೆಸರಾಗಿದ್ದ ಕೃಷ್ಣಮೂರ್ತಿ ಮುಂತಾದವರು ಪ್ರಮುಖ ಕಾರ್ಯಕರ್ತರು. ಅದೇ ಸಮಯದಲ್ಲಿ ವಿದ್ಯಾರ್ಥಿ ಚಳುವಳಿಯ ಒಗ್ಗಟ್ಟನ್ನೊಡೆಯಲು, ವಿದ್ಯಾರ್ಥಿಗಳು ಎಡ ಪಂಥದತ್ತ ಆಕರ್ಷಿತರಾಗುವುದನ್ನು ತಡೆಯಲು ವಿದ್ಯಾರ್ಥಿ ಕಾಂಗ್ರೆಸ್ ಎಂಬ ಸಂಘಟನೆಯನ್ನು ಕಾಂಗ್ರೆಸ್ ಪಕ್ಷದ ಮುಖಂಡರು ಹುಟ್ಟು ಹಾಕಿದ್ದರು. ವಿ.ಎಸ್. ಕೃಷ್ಣ ಅಯ್ಯರ್ ಕೆಲ್ಲೂರು ಸುಬ್ಬರಾವ್ ಮೊದಲಾದವರು ಅದರ ನಾಯಕರು. ದಿನನಿತ್ಯವೂ ಎ.ಐ.ಎಸ್.ಎಫ್. ಮೇಲೆ ದೊಡ್ಡ ಅಪಪ್ರಚಾರ. ಸ್ವಾತಂತ್ರ್ಯ ದ್ರೋಹಿಗಳು ಎಂಬ ಅಭಿದಾನ. ಎಐಎಸ್‌ಎಫ್ ಬೆಳೆಯುತ್ತಿತ್ತು.

ಕೆಲಸಕ್ಕೆ ರಾಜೀನಾಮೆ

ನಾನು ವಿದ್ಯಾರ್ಥಿ ಚಳವಳಿಯಲ್ಲಿ ಅದರಲ್ಲಿಯೂ ಕಮ್ಯುನಿಸ್ಟ್ ನೇತೃತ್ವದ ವಿದ್ಯಾರ್ಥಿ ಚಳವಳಿಯಲ್ಲಿ ನಿರಂತರವಾಗಿ ಭಾಗವಹಿಸುತ್ತಿದ್ದುದು ಬೆಂಗಳೂರು ಜಿಲ್ಲೆಯ ಜಿಲ್ಲಾಧಿಕಾರಿಗಳ ಗಮನಕ್ಕೆ ಬಂದಿತು. ಅವರು ಈ ವಿಷಯವನ್ನು ಎಚ್.ಎ.ಎಲ್.ಆಡಳಿತ ವರ್ಗದ ಗಮನಕ್ಕೆ ತಂದರು. ಫ್ಯಾಕ್ಟರಿಯಲ್ಲಿ ಪ್ರಕ್ರಿಯೆ ಆರಂಭವಾಯಿತು. ವಿಚಾರಣೆನಡೆಯಿತು. ಆಗ ನನ್ನ ಮೇಲಧಿಕಾರಿಯಾಗಿದ್ದವರು ಅಮೇರಿಕನ್ನರು (ವಾಲ್‌ಚಂದ್ ಎಂಬುವರೊಬ್ಬರುಅಮೇರಿಕನ್ ಸಹಭಾಗಿತ್ವದೊಂದಿಗೆ ಸ್ಥಾಪಿಸಿದ್ದ ಎಚ್‌ಎಎಲ್ ಕಾರ್ಖಾನೆಯ ತುಂಬಾ ಅಮೆರಿಕನ್ ತಜ್ಞರು. 500 ಕ್ಕೂ ಹೆಚ್ಚು ಅಮೆರಿಕನ್ನರು).

ಈ ಅಮೆರಿಕನ್ನರು 'ನಾವು ಈ ವ್ಯಕ್ತಿ ಫ್ಯಾಕ್ಟರಿಯ ಹೊರಗಡೆ ಏನು ಮಾಡುತ್ತಾನೆಂಬುದನ್ನು ಗಣನೆಗೆ ತೆಗೆದು ಕೊಳ್ಳುವುದಿಲ್ಲ. ಏಕೆಂದರೆ ಕೆಲಸದಲ್ಲಿ ಆತ ಚೆನ್ನಾಗಿದ್ದಾನೆ ಎಂಬ ನಿಲುವು ತೆಗೆದುಕೊಂಡರು. ನನ್ನ ನೌಕರಿ ಮುಂದುವರೆಯಿತು.

ಆದರೆ ಪರಿಸ್ಥಿತಿ ಹೀಗೆಯೇ ಬಹಳ ದಿನ ಉಳಿಯಲಿಲ್ಲ. ಎಂ.ಎಸ್. ಕೃಷ್ಣನ್‌ರವರ ಕಾಲೇಜು ವಿದ್ಯಾಭ್ಯಾಸ ಮುಗಿಯಿತು. ನಾನು ವಿದ್ಯಾರ್ಥಿ ಚಟುವಟಿಕೆಯಲ್ಲಿ ಹೆಚ್ಚು ಹೆಚ್ಚು ತೊಡಗಬೇಕಾಯಿತು. ಈ ಮಧ್ಯೆ ಕಾಂ.ಎನ್.ಎಲ್. ಉಪಾಧ್ಯಾಯರು–ಅಂದಿನ ಕಮ್ಯುನಿಸ್ಟ್ ಪಕ್ಷದ ಪ್ರಮುಖ ಸಂಘಟಕರು-ಅವರು ನನ್ನ ಕೆಲಸಕ್ಕೆ ರಾಜೀನಾಮೆ ನೀಡಿ, ವಿದ್ಯಾರ್ಥಿಯಾಗಿ ಪೂರ್ಣಕಾಲ ವಿದ್ಯಾರ್ಥಿ ಚಳುವಳಿಯಲ್ಲಿ ತೊಡಗಲು ಸಲಹೆ ಮಾಡಿದರು. ಎಂ.ಎಸ್. ಕೃಷ್ಣನ್ ರವರೂ ಒತ್ತಾಯಿಸಿದರು. ಇವರ ಒತ್ತಾಯಗಳಿಗೆ ಮಣಿದು ಕೆಲಸಕ್ಕೆ ರಾಜೀನಾಮೆ ನೀಡಿದೆ. ಸೆಂಟ್ರಲ್ ಕಾಲೇಜಿನಲ್ಲಿ ಕಾಮರ್ಸ್‌ನ ಇಂಟರ್ ಮೀಡಿಯಟ್ ವಿದ್ಯಾರ್ಥಿಯಾಗಿ ಸೇರಿದೆ. ನನ್ನನ್ನು ಬೆಂಗಳೂರು ವಿದ್ಯಾರ್ಥಿ ಫೆಡರೇಷನ್‌ನ ಕಾರ್ಯದರ್ಶಿಯಾಗಿ ಆಯ್ಕೆ ಮಾಡಿದರು. ನನ್ನ ಬಾಳಿನಲ್ಲಿ ಎ.ಐ.ಎಸ್.ಎಫ್. ಸದಸ್ಯತ್ವ, ಹೋರಾಟಗಳು ನಿರಂತರ ವಿದ್ಯಾರ್ಥಿ ಚಟುವಟಿಕೆಗಳ ಪರ್ವ ಕಾಲ ಆರಂಭವಾಯಿತು.

ಮುಂದಿನ ಸಂಚಿಕೆಯಲ್ಲಿ
ವಿದ್ಯಾರ್ಥಿಗಳಿಗಾಗಿ ಸಂಗೀತ
ಕ್ರೀಡೆಗಳು ಬ್ಯಾಡ್ಮಿಂಟನ್
ಚಟುವಟಿಕೆಗಳು

ಮಧ್ಯಪ್ರದೇಶ ಸರಕಾರದ ವರ್ಗಾವಣೆ - ರಾಜಕೀಯಕ್ಕೆ ಪ್ರತಿಭಟನೆ

ಸರಕಾರಿ ನೌಕರರನ್ನು ಬೇಕಾಬಿಟ್ಟಿಯಾಗಿ, ಜಾತಿ ಇತ್ಯಾದಿಗಳ ಆಧಾರದಲ್ಲಿ ವರ್ಗಾವಣೆ ಮಾಡಲು ಆರಂಭಿಸಿ ಕರ್ನಾಟಕದ ವೀರೇಂದ್ರ ಪಾಟೀಲ್ ಸರಕಾರ ಗೊಂದಲ ಹುಟ್ಟಿಸಿದ ವಿಷಯ ಇನ್ನೂ ಹಸಿ ಬಿಸಿಯಾಗಿರುವಾಗ ಮಧ್ಯಪ್ರದೇಶದಲ್ಲಿ ಕೂಡ ಅಂಥದ್ದೇ ಪ್ರಕರಣ ನಡೆದ ವರದಿಯಾಗಿದೆ. ವ್ಯತ್ಯಾಸ ಇಲ್ಲಿ ಕಾಂಗ್ರೆ. ಅಲ್ಲಿ ಬಿ.ಜೆ.ಪಿ. ಸರಕಾರ ಅಷ್ಟೆ.

ಸಾವಿರಾರು ನೌಕರರನ್ನು ವರ್ಗಾಯಿಸಿರುವುದರಿಂದ ಮಧ್ಯಪ್ರದೇಶದ ಸುಂದರ್ ಲಾಲ್ ಪಟ್ವಾ ಸರಕಾರ ವಿಧಾನಸಭೆಯ ಒಳಗೂ ಹೊರಗೂ ತೀವ್ರಟೀಕೆಗೆ ಗುರಿಯಾಗಿದೆ.ಕಾರ್ಯದರ್ಶಿಯಿಂದ ಗ್ರಾಮ ಸೇವಕರ ತನಕ ಸುಮಾರು 80ಸಾವಿರ ನೌಕರರು ಅನವಶ್ಯಕವರ್ಗಾವಣೆಯ ಕಿರಿಕಿರಿಯಿಂದ ತೊಂದರೆಗೊಳಗಾಗಿದ್ದಾರೆ. ಇದರ ವಿರುದ್ಧ ಹೋರಾಟ ಆರಂಭಿಸುವುದಾಗಿ ಹಲವಾರು ನೌಕರರ ಸಂಘಟನೆಯು ಎಚ್ಚರಿಸಿವೆ.

39 ಸಾವಿರ ನೌಕರರನ್ನಷ್ಟೆ ವರ್ಗಾವಣೆ ಮಾಡಲಾಗಿದೆಯೆಂದು ಮುಖ್ಯಮಂತ್ರಿ ಪಟ್ವಾ ಜುಲೈ 4 ರಂದು ವಿಧಾನ ಸಭೆಯಲ್ಲಿ ಹೇಳಿದ್ದರು. ಆದರೆ ಅದು ಇನ್ನೂ ಜಾಸ್ತಿ ಎಂದು ನೌಕರರ ಸಂಘಟನೆಗಳು ಮತ್ತು ಪ್ರತಿಪಕ್ಷಗಳು ಹೇಳಿವೆ.

ಈ ವರ್ಗಾವಣೆಗಳು ರಾಜಕೀಯ ವಿರೋಧಿಗಳ ಮೇಲೆ ಸೇಡಿನ ಕ್ರಮವಾಗಿದೆ ಮತ್ತು ಬಿ.ಜೆ.ಪಿ.ಕಾರ್ಯಕರ್ತರ ಒತ್ತಡಕ್ಕೆ ಮಣಿದ ಫಲ ಎಂದು ಮಾಜಿ ಮುಖ್ಯಮಂತ್ರಿ ಮೋತಿಲಾಲ್‌ವೋರಾ ಹೇಳಿದ್ದಾರೆ.

ಸರಕಾರಿ ಅಧಿಕಾರಿಗಳು ಮತ್ತು ಬಿ.ಜೆ.ಪಿ. ಕಾರ್ಯಕರ್ತರ ನಡುವಣ ಬಿಗುವನ್ನು ಕಡಿಮೆ ಮಾಡಲು ವರ್ಗಾವಣೆಗಳನ್ನು ಮಾಡಲಾಗಿದೆ ಎಂದು ಮುಖ್ಯಮಂತ್ರಿ ಪಟ್ವಾ ಇತ್ತೀಚೆಗೆ ಸುದ್ದಿಗಾರರಿಗೆ ತಿಳಿಸಿದ್ದರು.!

ಎಸ್‌ಎಫ್‌ಐ ನಿಂದ 'ನಿದ್ದೆಗೆಡಿಸಿ ಆಂದೋಲನ'

ಜಬಲ್ಪುರ ರಾಣಿ ದುರ್ಗಾವತಿ ವಿಶ್ವವಿದ್ಯಾನಿಲಯ ಜಾರಿಗೆ ತಂದ ಹಲವಾರು ವಿದ್ಯಾರ್ಥಿ ವಿರೋಧಿ ನೀತಿಗಳಿಗೆ ಎದುರಾಗಿ ಅಲ್ಲಿನ ವಿದ್ಯಾರ್ಥಿಗಳು ಎಸ್.ಎಫ್.ಐ. ನೇತೃತ್ವದಲ್ಲಿ ಹೋರಾಟ ನಡೆಸಿ ಜಯಗಳಿಸಿದ್ದಾರೆ.

ಶಿಕ್ಷಣ ಶುಲ್ಕ ಹೆಚ್ಚಳ, ಪ್ರವೇಶಾವಕಾಶದಲ್ಲಿ ಕಡಿತ ಮತ್ತು ಪ್ರವೇಶಕ್ಕೆ ಅನವಶ್ಯಕ ಕಿರಿಕಿರಿ ಮೊದಲಾದವುಗಳ ನಿವಾರಣೆ, ಕ್ಯಾಂಟೀನ್, ಬಸ್ ನಿಲ್ದಾಣ ಸ್ಥಾಪನೆ ಮತ್ತು ನಗರ ಬಸ್ ಸಾರಿಗೆ ಸೇವೆ ಆರಂಭ ಮೊದಲಾದ ಕೇಳಿಕೆಗಳಿಗಾಗಿ ಚಳುವಳಿ ನಡೆಯಿತು. ವಿದ್ಯಾರ್ಥಿ ಸಂಘಕ್ಕೆ ನೇರ ಚುನಾವಣೆ ನಡೆಸಬೇಕು. ಹಾಸ್ಟೆಲ್ ವ್ಯವಸ್ಥೆ ಸುಧಾರಿಸಬೇಕು ಎಂಬುದು 22 ಬೇಡಿಕೆಗಳ ಪಟ್ಟಿಯಲ್ಲಿ ಅಡಕವಾಗಿದ್ದ ಅಂಶಗಳಾಗಿದ್ದವು.

ಬೇಡಿಕೆ ಪಟ್ಟಿಗೆ ಸಹಿ ಸಂಗ್ರಹಿಸಲು ಎಸ್.ಎಫ್.ಐ. ಹೊರಟಾಗ ಸಾವಿರಾರು ವಿದ್ಯಾರ್ಥಿಗಳು ಬೇಡಿಕೆಗಳಿಗೆ ತಮ್ಮ ದನಿ ಕೂಡಿಸಿದರು. ಜೂನ್ 2 ರಂದು ಆರಂಭವಾದ ಮೊದಲ ಹಂತದ ಈ ಚಳುವಳಿ ನಡೆದ ಮೇಲೆ 12 ರಂದು ಕುಲಪತಿಯವರ ಕಚೇರಿ ಮುಂದೆ ಧರಣಿ ನಡೆಸಲಾಯಿತು.

"ನಿದ್ದೆಗೆಡಿಸಿ ಆಂದೋಲನ"

ವಿದ್ಯಾರ್ಥಿಗಳ ಬೇಡಿಕೆಗಳಿಗೆ ಕಿವಿಗೊಡದ ಅಧಿಕಾರಿಗಳನ್ನು ಗಾಢನಿದ್ರೆಯಿಂದ ಎಚ್ಚರಿಸಲು ಎಸ್.ಎಫ್.ಐ. ವಿಶಿಷ್ಟವಾದ ಚಳವಳಿಯೊಂದನ್ನು ಆಯೋಜಿಸಿತು. ವಿಶ್ವವಿದ್ಯಾನಿಲಯದ ಪರಿಸರ, ಕುಲಪತಿಯವರ ಕಚೇರಿ ಮತ್ತು ಮನೆಯ ಮುಂದೆ ಚಪ್ಪಾಳೆ ತಟ್ಟಿ ಮತ ಪ್ರದರ್ಶನ ನಡೆಸುವ 'ನಿದ್ದೆ ಗೆಡಿಸಿ ಆಂದೋಲನ' ವೇ ಈ ವಿಶಿಷ್ಟ ಕಾರ್ಯ ಕ್ರಮವಾಗಿತ್ತು. ಅನಂತರ ಜೂ 19ರಿಂದ 72 ಗಂಟೆಗಳ ಧರಣಿ ಸತ್ಯಾಗ್ರಹವನ್ನು ಕುಲಪತಿ ಕಚೇರಿ ಬಳಿ ಆರಂಭಿಸಲಾಯಿತು. ಮಧ್ಯ ಪ್ರದೇಶ ರಾಜ್ಯಪಾಲರು ಜಬಲ್ಪುರಕ್ಕೆ ಬಂದಾಗ ಎಸ್.ಎಫ್.ಐ. ಮನವಿ ಅರ್ಪಿಸಿತು.

72 ಗಂಟೆಗಳ ಧರಣಿಯ ಅಂತ್ಯದಲ್ಲಿ ಕುಲಪತಿಯರನ್ನು ಕಚೇರಿಯಲ್ಲಿ

ದೇಶದೊಳಗೆ

ಘೇರಾವೋ ಮಾಡಲಾಯಿತು. ಅಂತೂ ಕೊನೆಗೆ ವಿದ್ಯಾರ್ಥಿ ಚಳವಳಿಯ ಬಿಸಿ ತಟ್ಟಿದ ವಿ.ವಿ.ಆಡಳಿತ ವರ್ಗ ಎಸ್.ಎಫ್.ಐ. ನಿಯೋಗದ ಜತೆ ಮಾತುಕತೆ ನಡೆಸಬೇಕಾಯಿತು.

ಶುಲ್ಕ ಹೆಚ್ಚಳ ಹಿಂತೆಗೆತ -ಈಗಾಗಲೇ ಸಂಗ್ರಹಿಸಿದ ಹೆಚ್ಚುವರಿಯನ್ನು ಹಿಂದಿರುಗಿಸುವುದು, ವಯೋಮಿತಿ ನಿರ್ಬಂಧ ಸಡಿಲಿಕೆ, ಕ್ಯಾಂಟೀನ್, ಬಸ್ ನಿಲ್ದಾಣ, ನಗರ ಬಸ್ ಸೇವೆ ಆರಂಭ, ಕಟನಿಯಲ್ಲಿ ವಿ.ವಿ. ಉಪ ಕಾರ್ಯಾಲಯ ತೆರೆಯುವುದು ಮೊದಲಾದವುಗಳಿಗೆ ವಿ.ವಿ. ಒಪ್ಪಿತು. ಪ್ರವೇಶ ದಿನಾಂಕವನ್ನು ಕೂಡ ವಿಸ್ತರಿಸಲಾಗಿದೆ.

ಆದರೆ ಚುನಾವಣೆಗೆ ಸಂಬಂಧಿಸಿದ ಕೇಳಿಕೆಯನ್ನು ವಿ.ವಿ. ಈಡೇರಿಸದಿರುವುದರಿಂದ ಆ ಬಗ್ಗೆ ಹೋರಾಟ ಇನ್ನೂ ಮುಂದುವರಿದಿದೆ.

ಉತ್ತರ ಪ್ರದೇಶ ಕಿಸಾನ್ ಸಭಾದ 30 ನೇ ಸಮ್ಮೇಳನ

ದೇಶದ ಅತ್ಯಂತ ದೊಡ್ಡ ರಾಜ್ಯವಾದ ಉತ್ತರ ಪ್ರದೇಶದ ಕಿಸಾನ್ ಸಭೆಯ 30 ನೇ ಸಮ್ಮೇಳನ ಜೂನ್ 23, 24, 25 ರಂದು ಬಲಿಯೂ ಜಿಲ್ಲೆಯಲ್ಲಿ ನಡೆಯಿತು.

ವಿಧಾನಸಭಾ ಸದಸ್ಯರೂ ಆಗಿರುವ ರಾಜ್ಯ ಕಿಸಾನ್‌ಸಭಾ ಅಧ್ಯಕ್ಷ, ರಾಜಕಿಶೋರ್ ಸಿಂಹ ಅವರು ಆರಂಭದಲ್ಲಿ ಧ್ವಜಾರೋಹಣ ಮಾಡಿದರು. ಎಲ್ಲ ಪ್ರತಿನಿಧಿಗಳು ಹುತಾತ್ಮರ ಸ್ಮಾರಕಕ್ಕೆ ಗೌರವ ಅರ್ಪಿಸಿದರು.

ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಅಖಿಲ ಭಾರತ ಕಿಸಾನ್ ಸಭಾ ವಹಿಸಿದ ಪಾತ್ರವನ್ನು ಸಮ್ಮೇಳನವನ್ನು ಉದ್ಘಾಟಿಸಿದ ಎ.ಐ.ಕೆ.ಎಸ್. ಕೇಂದ್ರ ಸಮಿತಿಯ ಸಹ ಕಾರ್ಯದರ್ಶಿ ಪಿ.ಕೆ. ಟಂಡನ್ ನೆನಪಿಸಿಕೊಟ್ಟರು. ಸಂಘಟನೆಯನ್ನು ಬಲಪಡಿಸಲು ಅವರು ಕರೆ ನೀಡಿದರು.

ಸಿ.ಪಿ.ಐ.(ಎಂ) ರಾಜ್ಯಸಮಿತಿ ಕಾರ್ಯದರ್ಶಿ ರಾಮ್ ಸುಮೇರ್ ಯಾದವ್ ಅವರು ಪ್ರತಿನಿಧಿಗಳನ್ನುದ್ದೇಶಿಸಿ ಮಾತನಾಡಿದರು. ಪ್ರಸಕ್ತ ರಾಜಕೀಯ ಪರಿಸ್ಥಿತಿಯಲ್ಲಿ ಕಿಸಾನ್ ಸಭಾದ ಜವಾಬ್ದಾರಿಯನ್ನು ಅವರು ವಿವರಿಸಿದರು. ರಾಷ್ಟ್ರೀಯ ಏಕತೆ ಮತ್ತು ಸಮಗ್ರತೆಯ ರಕ್ಷಣೆಗಾಗಿ, ಕೋಮುವಾದಿ ಶಕ್ತಿಗಳನ್ನು ಜನರಿಂದ ಪ್ರತ್ಯೇಕಿಸಲು ಹೋರಾಟವನ್ನು ತೀವ್ರಗೊಳಿಸ ಬೇಕಾಗಿದೆ ಎಂದವರು ಪ್ರತಿಪಾದಿಸಿದರು.

ರೈತರು ಮತ್ತು ಕೃಷಿ ಕಾರ್ಮಿಕರ ಏಕತೆಯನ್ನು ಬೆಸೆಯಬೇಕಾಗಿದೆ ಎಂದು ಉತ್ತರ ಪ್ರದೇಶ ಕೃಷಿ ಕೂಲಿಗಾರರ ಸಂಘದ ಕಾರ್ಯದರ್ಶಿ ಅಂಬಿಕಾ ಪ್ರಸಾದ್ ಮಿಶ್ರಾ ಹೇಳಿ ಸಮ್ಮೇಳನಕ್ಕೆ ಕ್ರಾಂತಿಕಾರಿ ಶುಭಾಶಯ ಸಲ್ಲಿಸಿದರು. ಡಿ.ವೈ.ಎಫ್.ಐ. ರಾಜ್ಯ ಕಾರ್ಯದರ್ಶಿ ವಿಜಯ ಕುಮಾರ್ ಮತ್ತು ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಪ್ರೇಮನಾಥ ರಾಯ್ ಅವರೂ ಶುಭ ಸಂದೇಶ ಕಳಿಸಿದ್ದರು.

ರಾಜ್ಯ ಸಮಿತಿ ಕಾರ್ಯದರ್ಶಿ ದೀನಾನಾಥ ಸಿಂಹ ಅವರು ವರದಿಯನ್ನು ಮಂಡಿಸಿದರು.

26 ಜಿಲ್ಲೆಗಳಿಂದ 159 ಪ್ರತಿನಿಧಿಗಳು ಮತ್ತು 43 ವೀಕ್ಷಕರು ಭಾಗವಹಿಸಿದ್ದರು. 31 ಪ್ರತಿನಿಧಿಗಳು ಚರ್ಚೆಯಲ್ಲಿ ಪಾಲ್ಗೊಂಡರು.

ಪಶ್ಚಿಮ ಬಂಗಾಳದ ಕಂದಾಯ ಸಚಿವ ಬಿನಯ್ ಕೃಷ್ಣ ಚೌಧರಿ ಅವರೂ ಸಮ್ಮೇಳನದಲ್ಲಿ ಮಾತನಾಡಿ ಆರಾಜ್ಯದ ರೈತ ಹೋರಾಟದ ಅನುಭವಗಳನ್ನು ವಿವರಿಸಿದರು.

ಸಮ್ಮೇಳನದ ಕೊನೆಯ ದಿನ ಸುಮಾರು ಎರಡು ಸಾವಿರ ರೈತ ಕೃಷಿ ಕೂಲಿಗಾರರ ಮೆರವಣಿಗೆ ನಡೆಯಿತು. ಬಹಿರಂಗ ಸಭೆಯಲ್ಲಿ ಬಿನಯ್ ಕೃಷ್ಣಚೌಧರಿ, ರಾಮ್ ಸುಮೇರ್ ಯಾದವ್, ಅಂಬಿಕಾ ಪ್ರಸಾದ್ ಮಿಶ್ರಾ, ಬಾಬುನಂದನ ರಾಯ್ ಮತ್ತು ಜನತಾ ದಳದ ಜಿಲ್ಲಾ ಅಧ್ಯಕ್ಷ ಅಂಬಿಕಾ ಚೌಧರಿ ಅವರು ಮಾತನಾಡಿದರು.

ಪ್ಲಾಂಟೇಷನ್ ಕಾರ್ಮಿಕರ ಉತ್ತರ ವಲಯ ಸಮಾವೇಶ

ದೇಶದ ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಸಿ.ಐ.ಟಿ.ಯು. ಕಾರ್ಯಕರ್ತರಿಗೆ ಹೊಸ ಜವಾಬ್ದಾರಿಗಳು ಮುಂದಾಗಿವೆ ಎಂದು ಸಿ.ಐ.ಟಿ.ಯು. ಪ್ರಧಾನ ಕಾರ್ಯದರ್ಶಿ ಸಮರ ಮುಖರ್ಜಿ ವಿಶ್ಲೇಷಿಸಿದ್ದಾರೆ.

ಅಖಿಲ ಭಾರತ ಪ್ಲಾಂಟೇಷನ್ ಕಾರ್ಮಿಕರ ವಲಯ ಫೆಡರೇಶನ್‌ನ (A.I.P.W.F) ಉತ್ತರ ವಲಯ ಸಮಾವೇಶದಲ್ಲಿ ಅವರು ಉದ್ಘಾಟನಾ ಭಾಷಣ ಮಾಡುತ್ತಿದ್ದರು.

ಅಸ್ಸಾಂನ ಸಿಲ್ಚಾರ್‌ನಲ್ಲಿ ಜೂನ್‌ನಲ್ಲಿ ನಡೆದ ಸಮಾವೇಶದಲ್ಲಿ ಪಶ್ಚಿಮಬಂಗಾಳ, ಅಸ್ಸಾಂ ಮತ್ತು ತ್ರಿಪುರದ ಸುಮಾರು ಎರಡು ಲಕ್ಷ ಪ್ಲಾಂಟೇಶನ್ ಕಾರ್ಮಿಕರನ್ನು ಪ್ರತಿನಿಧಿಸಿ 124 ಪ್ರತಿನಿಧಿಗಳು ಭಾಗವಹಿಸಿದ್ದರು.

ಎ.ಐ.ಪಿ.ಡಬ್ಲ್ಯು.ಎಫ್.ನ ಅಧ್ಯಕ್ಷ ಅನಂದ ಪಾಠಕ್ ಮತ್ತು ತ್ರಿಪುರದ ಪ್ಲಾಂಟೇಷನ್ ಕಾರ್ಮಿಕರ ಧುರೀಣರಾದ ಬಿಮಲ್‌ಸಿನ್ಹಾ ಅವರು ಮಾತನಾಡಿದರು.

ಸಂಘಟನೆಯ ಪ್ರಧಾನಕಾರ್ಯದರ್ಶಿ ವಿಮಲಾ ರಣದಿವೆ ಅವರು ಸಮಾರೋಪ ಭಾಷಣ ಮಾಡಿ ಚಳುವಳಿಯನ್ನು ಬಲಪಡಿಸಬೇಕಾದ ಅಗತ್ಯವನ್ನುಒತ್ತಿಹೇಳಿದರು.

ಎರಡು ದಿನದ ಸಮಾವೇಶದ ಮೊದಲ ದಿನ ನಡೆದ ಬಹಿರಂಗ ರ್‍ಯಾಲಿಯನ್ನು ಧಾರಾಕಾರ ಮಳೆ ಮತ್ತು ಪ್ರವಾಹ ಪರಿಸ್ಥಿತಿಯನ್ನು ಲೆಕ್ಕಿಸದೆ ಸಾವಿರಾರು ಜನರು ಪಾಲ್ಗೊಂಡಿದ್ದರು. ವರ್ಣರಂಜಿತ ಮೆರವಣಿಗೆಯೂ ನಡೆಯಿತು.

ಅಧ್ಯಾಪಕರ ಕೊರತೆ ನೀಗಿಸಲು ಒತ್ತಾಯ

ದ.ಕ. ಜಿಲ್ಲೆಯ ಕುಪ್ಪೆ ಪದವಿನ, ಕೊಳವೂರಿನಲ್ಲಿರುವ ದ.ಕ.ಜಿಲ್ಲಾ ಪರಿಷತ್ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಈಗ ಏಕೋಪಾಧ್ಯಾಯ ಶಾಲೆಯಾಗಿ ಮಾರ್ಪಟ್ಟಿದೆ. ಕಳೆದ 5-6 ವರ್ಷಗಳಿಂದ 5-6 ಅಧ್ಯಾಪಕರು ಇದ್ದು, ಇತ್ತೀಚೆಗೆ ಅವರೆಲ್ಲರಿಗೆ ಭಡ್ತಿ, ನಿವೃತ್ತಿ, ವರ್ಗಾವಣೆ ಇತ್ಯಾದಿಗಳ ನಡೆದು ಈಗ ಕೇವಲ ಓರ್ವ ಅಧ್ಯಾಪಕಿಯು ಇಲ್ಲಿ ಸುಮಾರು 350 ಕ್ಕೂ ಹೆಚ್ಚಿನ ವಿದ್ಯಾರ್ಥಿಗಳಿಗೆ ಪಾಠಗಳನ್ನು ಮಾಡುತ್ತಿದ್ದಾರೆ. ಈ ಶಾಲೆಯು ಗ್ರಾಮಾಂತರ ಪ್ರದೇಶದಲ್ಲಿದ್ದು ಬಡ ರೈತ, ಕಾರ್ಮಿಕ ಹರಿಜನ ಗಿರಿಜನ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದು ಈಗ ಅಧ್ಯಾಪಕ ಕೊರತೆಯಿಂದಾಗಿ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಕುಂಠಿತ ಮಾಡುತ್ತಿದ್ದಾರೆ.

ಈ ಬಗ್ಗೆ ತಾ। 6-7-90 ರಂದು ಡಿವೈಎಫ್‌ಐ ಕುಪ್ಪೆ ಪದವು ಘಟಕದ ಕಾರ್ಯದರ್ಶಿ ಎಸ್.ಎ.ಹಸನಬ್ಬ, ಹಾಗೂ ಸಹ ಕಾರ್ಯದರ್ಶಿ ಸುಧಾಕರ್‌ರವರನ್ನೊಳಗೊಂಡ ನಿಯೋಗವು ದ.ಕ. ಜಿಲ್ಲಾ ಉಪ ನಿರ್ದೇಶಕರನ್ನು ಭೇಟಿಯಾಗಿ ಕೂಡಲೆ ಅಧ್ಯಾಪಕರನ್ನು ನೇಮಿಸಲು ಒತ್ತಾಯಿಸಿತು. ಒಂದು ತಿಂಗಳೊಳಗೆ ಅಧ್ಯಾಪಕರನ್ನು ನೇಮಿಸಲಾಗುವುದೆಂದು ಅವರು ನಿಯೋಗಕ್ಕೆ ಭರವಸೆ ನೀಡಿದ್ದಾರೆ.

ರಸ್ತೆಗೆ ಡಾಮರು ಹಾಕುಲು ಒತ್ತಾಯ

ಸಿ.ಪಿ.ಐ(ಎಂ) ಕುಪ್ಪೆ ಪದವು ಶಾಖೆಯು, ಎಡ ಪದವುನಿಂದ ಕುಪ್ಪೆ ಪದವು ತನಕ 5 ಕಿ. ಮಿ. ದೂರದ ರಸ್ತೆಗೆ ಡಾಮರು ಹಾಕಿ ರಿಪೇರಿ ಮಾಡಲು ದ.ಕ. ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಯವರಿಗೆ ತಾ॥ 14.7.90 ರಂದು ಮನವಿ ಅರ್ಪಿಸಿ ಒತ್ತಾಯಿಸಲಾಗಿದೆ.

ಒಂದು ನಿಯೋಗವು ಮುಖ್ಯ ಕಾರ್ಯದರ್ಶಿಯವರನ್ನು ಭೇಟಿಯಾಗಿ ಈ ರಸ್ತೆಯ ವಾಹನ ಸಂಚಾರವನ್ನು ವಿವರಿಸಿ, ಈ ಹಿಂದೆ ಸಿಪಿಐ(ಎಂ) ಕಾರ್ಯಕರ್ತರು ಪ್ರತಿಭಟನಾ ಶ್ರಮದಾನ ಮಾಡಿ ರಸ್ತೆಯ ಹೊಂಡಗಳನ್ನು ಮುಚ್ಚಿ ದುರಸ್ತಿ ಮಾಡಿರುವ ಬಗ್ಗೆ ಅವರ ಗಮನ ಸೆಳೆದು, ಕೂಡಲೇ ಈ ರಸ್ತೆಗೆ ಡಾಮರು ಹಾಕಿಸಲು ಒತ್ತಾಯಿಸಿರುತ್ತದೆ. ಈ ನಿಯೋಗದಲ್ಲಿ ಸಿಪಿಐ(ಎಂ) ಕುಪ್ಪೆ ಪದವು ಶಾಖೆಯ ಕಾರ್ಯದರ್ಶಿ ಸದಾಶಿವ ದಾಸ್ ಹಾಗೂ ಸಿಪಿಐ(ಎಂ) ಗುರುಪುರ ಪ್ರದೇಶ ಸಮಿತಿ ಸದಸ್ಯ ವಾಸುದೇವರವರನ್ನೊಳಗೊಂಡಿತ್ತು.

ವಿದ್ಯಾರ್ಥಿಗಳ ಜ್ವಲಂತ ಶೈಕ್ಷಣಿಕ ಸಮಸ್ಯೆ ಪರಿಹರಿಸಲುಒತ್ತಾಯ

ಗುಲಬರ್ಗಾ ವಿಶ್ವವಿದ್ಯಾನಿಲಯದ ವ್ಯಾಪ್ತಿಯ ವಿದ್ಯಾರ್ಥಿಗಳ ಜ್ವಲಂತ ಶೈಕ್ಷಣಿಕ ಸಮಸ್ಯೆಗಳನ್ನು ಪರಿಹರಿಸಲು ಆಗ್ರಹಿಸಿ ಎಸ್‌ಎಫ್‌ಐ ಗುಲಬರ್ಗಾ ವಿಶ್ವವಿದ್ಯಾನಿಲಯ ಸಮನ್ವಯ ಸಮಿತಿಯ ನಿಯೋಗವು ಜುಲೈ 11 ರಂದು ಕುಲಪತಿಗಳಾದ ಡಾ. ಎಸ್. ಸುಬ್ರಹ್ಮಣ್ಯಪನವರನ್ನು ಭೇಟಿಯಾಗಿ ಮನವಿ ಸಲ್ಲಿಸಿ ವಿವರವಾಗಿ ಚರ್ಚಿಸಿತು. ವಿಶ್ವವಿದ್ಯಾನಿಲಯದಲ್ಲಿ, ಸ್ನಾತಕೋತ್ತರ ತರಗತಿಗಳಿಗೆ ಪ್ರವೇಶ ಬಯಸಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಆಯ್ಕೆಯಾದ ಬಗ್ಗೆ ಅಂಚೆ ಮೂಲಕ ಮಾಹಿತಿ ನೀಡಲಾಗುತ್ತಿತ್ತು. ಆದರೆ ಈಗ ಅದನ್ನು ರದ್ದುಪಡಿಸಿ, ವಿಶ್ವವಿದ್ಯಾನಿಲಯದ ಕ್ಯಾಂಪಸ್ಸಿನಲ್ಲಿ ಫಲಿತಾಂಶ ಹಾಕಲಾಗುತ್ತಿದ್ದು, ಇದನ್ನು ನೋಡಲು ದೂರ ದೂರಿನಿಂದ ಬರುವ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ದೋಷ ಪೂರ್ಣ ಅಂಕ ಪಟ್ಟಿಯನ್ನು ನೀಡಲಾಗುತ್ತಿದ್ದು, ಅದನ್ನು ಸರಿಪಡಿಸಲು ಶುಲ್ಕವನ್ನು ವಿಧಿಸಲಾಗಿದೆ. ಕ್ರೂಢೀಕೃತ ಅಂಕ ಪಟ್ಟಿಯನ್ನು ನೀಡಲಾಗುತ್ತಿಲ್ಲ ಎಂಬ ಇನ್ನು ಅನೇಕಸಮಸ್ಯೆಗಳ ಬಗ್ಗೆ ಚರ್ಚಿಸಿದರು. ವಿದ್ಯಾರ್ಥಿಗಳ ಹಾಸ್ಟೆಲ್ ಸೌಲಭ್ಯಗಳ ಹೆಚ್ಚಳ, ಗ್ರಂಥಾಲಯ ಅಭಿವೃದ್ಧಿ, ಅಂಕ ಪಟ್ಟಿಗಳಿಗಾಗಿ ಉತ್ತಮ ಗುಣ ಮಟ್ಟದ ಕಾಗದ ಬಳಕೆ, ಸಿಂಡಿಕೇಟ್, ಇಂಡಿಕೇಟ್‌ಗಳಲ್ಲಿ ವಿದ್ಯಾರ್ಥಿಗಳ ಪ್ರಾತಿನಿಧ್ಯಗಳ, ವಿಷಯಗಳನ್ನು ತೀವ್ರವಾಗಿ ಕೈಗೆತ್ತಿಕೊಂಡು ಜಾರಿಗೊಳಿಸುವುದಾಗ ಕುಲಪತಿಗಳು ಭರವಸೆ ನೀಡಿದರು. ಕಾನೂನು ಪದವಿಯ ಲೇಬರ್ ಲಾ ಉತ್ತರ ಪತ್ರಿಕೆಯ ಮರು ಮೌಲ್ಯ ಮಾಪನಕ್ಕಾಗಿ ನಿಯೋಗವು ಕುಲಪತಿಗಳನ್ನು ಒತ್ತಾಯಿಸಿತು.

ಈ ನಿಯೋಗವು ಎಸ್.ಎಫ್.ಐ. ರಾಜ್ಯ ಸಮಿತಿ ಕಾರ್ಯದರ್ಶಿ ಎಸ್.ವೈ. ಗುರುಶಾಂತ್, ಗುಲಬರ್ಗಾ ಜಿಲ್ಲಾ ಸಮಿತಿ ಅಧ್ಯಕ್ಷ ಆರ್.ಚೆನ್ನ ಬಸ್ಸು, ಕಾರ್ಯದರ್ಶಿ ಈಶ್ವರ ಚಂದ್ರ, ಭಾನು ಕುಮಾರ, ಚನ್ನ ಬಸ್ಸಯ್ಯ ಹಿರೇಮಠ, ಮುಂತಾದವರನ್ನು ಒಳಗೊಂಡಿತ್ತು.

ಚಿಕ್ಕಮಗಳೂರಿನಲ್ಲಿ ಮಹಿಳಾ ಸಂಘಟನೆ

22.7.1990 ರಂದು ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಚಿಕ್ಕಮಗಳೂರು ಘಟಕ ರಚಿಸಲಾಯಿತು. ಈ ಬಗ್ಗೆ ಸೇರಿದ್ದ ಸಭೆಯಲ್ಲಿ ಶಾಂತಕುಮಾರಿ ಸಭೆಯಲ್ಲಿ ಹಾಜರಿದ್ದು ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಧ್ಯೇಯ ಧೋರಣೆ ಬಗ್ಗೆ ವಿವರಿಸಿದರು. ಸಭೆಯಲ್ಲಿ ಮಹಿಳೆಯರನೇಕರು ತಮ್ಮ ತಮ್ಮ ಪ್ರದೇಶಗಳಲ್ಲಿರುವ ವಿವಿಧ ಸಮಸ್ಯೆಗಳ ಬಗ್ಗೆ ಮಾತನಾಡಿದರು. ಈ ಸಭೆಯಲ್ಲಿ ಕಾಂ. ಛಾಯಾ. ಸಂಚಾಲಕರಾಗಿಯೂ, ಕಾಂ. ವಿ.ಎಸ್.ಜಾನಕಿ, ಕಾಂ.ಎ.ರಾಧಾ ಸಹ ಸಂಚಾಲಕರಾಗಿಯೂ, ಸಿ.ರತ್ನ, ಟಿ.ಸೀತಾ, ರುಕ್ಕ, ಎಸ್.ರಾಧಾ, ಕೆ.ಜಾನಕಿ, ವಿ.ಬಿ.ಶಾಂತ, ಮತ್ತು ಟಿ. ಜಾನಕಮ್ಮ ಸದಸ್ಯರುಗಳಾಗಿಯೂ ಇರುವ ಜಿಲ್ಲಾ ಸಂಘಟನಾ ಸಮಿತಿಯೊಂದನ್ನು ರಚಿಸಲಾಯ್ತು.

ಕೂಡಲೇ ಸದಸ್ಯತ್ವವನ್ನು ನೊಂದಾಯಿಸಲು, ಸೆಪ್ಟೆಂಬರ್ 8 ಮತ್ತು 9 ರಂದು ನಡೆಯುವ ರಾಜ್ಯ ಸಮ್ಮೇಳನಕ್ಕೆ ಪ್ರತಿನಿಧಿಗಳನ್ನು ಕಳುಹಿಸಲು ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಯಿತು.

ಹಾಸನದಲ್ಲಿ

ಹಾಸನದ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಜಿಲ್ಲಾ ಸಂಘಟನಾ ಸಮಿತಿ ಸಭೆ ದಿನಾಂಕ 22.7.1990 ರಂದು ಸೇರಿತು. ಕಾಂ. ಶಾಂತಕುಮಾರಿ ಸಭೆಯಲ್ಲಿ ಉಪಸ್ಥಿತರಿದ್ದರು. ಸೆಪ್ಟೆಂಬರ್ 8,9 ರ ರಾಜ್ಯ ಸಮ್ಮೇಳನಕ್ಕೆ ಹತ್ತು ಪ್ರತಿನಿಧಿಗಳನ್ನು ಕಳುಹಿಸಲು ಸಭೆ ತೀರ್ಮಾನಕ್ಕೆಗೊಳ್ಳಲಾಯಿತು.

ಎ.ಐ.ಡಿ.ಡಬ್ಲ್ಯು.ಎ.ನ 2 ನೇ ರಾಜ್ಯ ಸಮ್ಮೇಳನ

ಅಖಿಲಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯು ತನ್ನ 2 ನೇ ಕರ್ನಾಟಕ ರಾಜ್ಯ ಮಟ್ಟದ ಸಮ್ಮೇಳನವನ್ನು 1990 ರ ಸೆಪ್ಟೆಂಬರ್ 8,9 ರಂದು ಬೆಂಗಳೂರಿನಲ್ಲಿ ನಡೆಸಲಿದೆ. ಈ ಸಮ್ಮೇಳನಕ್ಕೆ ರಾಷ್ಟ್ರ ಮಟ್ಟದ ಮಹಿಳಾ ನಾಯಕಿಯರಾದ ಶ್ರೀಮತಿ ಸುಶಿಲಾ ಗೋಪಾಲನ್, ಶ್ರೀಮತಿ ಅಹಲ್ಯಾ ರಂಗ್ನೇಕರ್, ಬೃಂದಾ ಕಾರಟ್ ಇನ್ನು ಮುಂತಾದವರು ಭಾಗವಹಿಸುತ್ತಿದ್ದಾರೆ. ಕಲ್ಕತ್ತೆಯಲ್ಲಿ ಅಕ್ಟೋಬರ್‌ನಲ್ಲಿ ನಡೆಯುವ ಅಖಿಲ ಭಾರತ ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ನಡೆಯಲಿರುವ ಈ ಸಮ್ಮೇಳನದಲ್ಲಿ ಮಹಿಳೆಯರ ವಿಶಿಷ್ಟ ಸಮಸ್ಯೆಗಳ ಬಗ್ಗೆ ವಿಚಾರ ವಿನಿಮಯ, ಪರಿಹಾರಕ್ಕಾಗಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತದೆ.

ಈ ಸಂಘಟನೆ ಮತ್ತು ಕಾರ್ಯಕ್ರಮಗಳ ಬಗ್ಗೆ ಸಹಾನುಭೂತಿ ಇರುವ ಎಲ್ಲ ನಾಗರೀಕರೂ ಉದಾರವಾಗಿ ಸಹಾಯಮಾಡಬೇಕೆಂದು ಈ ಮೂಲಕ ಕೋರಲಾಗಿದೆ.

ಅಧ್ಯಕ್ಷೆ ಚಮೊರೋ ವಿರುದ್ಧ ಆಂದೋಲನ

ನಿಕಾರಾಗುವ ಅಧ್ಯಕ್ಷೆ ಚಮೊರೋ ಸರಕಾರದ ಪ್ರತಿಗಾಮಿ ನೀತಿಗಳೂ ಫಲ ಕೊಡಲಾರಂಭಿಸಿವೆ. ಮೇ ತಿಂಗಳಿಂದ ಎರಡು ಸುತ್ತಿನಲ್ಲಿ ಮುಷ್ಕರದ ಅಲೆಗಳು ಎದ್ದಿವೆ. ಅಧ್ಯಕ್ಷೆಯ ಭವನದ ಎದುರು ಕೆಲಸ ಕಳೆದುಕೊಂಡವರು ಟೆಂಟ್‌ಗಳನ್ನು ಹಾಕಿ ಪ್ರತಿಭಟಿಸುತ್ತಿದ್ದಾರೆ. ಇಂತಹ ಟೆಂಟ್‌ಗಳು ಯಾವಾಗಲೂ ಕಾಣಬರುತ್ತವೆ. ಸುಮಾರು 20 ಸಾವಿರ ಕಾಂಟ್ರಾಗಳು (ಮನಸ್ಸಿಲ್ಲದ ಮನಸ್ಸಿನಲ್ಲಿ, ಸದ್ಯಕ್ಕಂತೂ) ಶಸ್ತ್ರಾಸ್ತ್ರ ತ್ಯಾಗ ಮಾಡಿದ್ದಾರೆ ಎಂಬುದೇ ತನ್ನ ಸರಕಾರದ ಸಾಧನೆ ಎಂಬುದು ಬಿಟ್ಟರೇ ಇನ್ನೇನೂ ಉಳಿದಿಲ್ಲ ಚಮೊರೋರ ಆರ್ಥಿಕ ನೀತಿಗಳು ಜನರನ್ನು ರೊಚ್ಚಿಗೊಬ್ಬಿಸಿದೆ. ಆಹಾರ, ಸಾರಿಗೆ, ವಿದ್ಯುತ್ ಮತ್ತು ನೀರು ಸೇವೆಗಳಲ್ಲಿ ಇದ್ದ ಸಬ್ಸಿಡಿಗಳನ್ನು ಸರ್ಕಾರ ಕಿತ್ತುಹಾಕಿದೆ. ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳನ್ನು ಖಾಸಗೀಕರಿಸಲಾಗುತ್ತಿದೆ. ಇದರಿಂದ ಕೆಲಸ ಕಳೆದುಕೊಳ್ಳುವವರ ಸಂಖ್ಯೆ ಏರಿದೆ. ಸರ್ಕಾರದ ಸಿಬ್ಬಂದಿ ಸಂಖ್ಯೆಯನ್ನು ಕಡಿಮೆ ಮಾಡಲಾಗುತ್ತಿದೆ. ಸ್ಯಾಂಡಿನಿಸ್ಟಾ ಕ್ರಾಂತಿಯ ನಂತರ ನಡೆದ ಭೂಸುಧಾರಣೆಯಲ್ಲಿ ಹಂಚಲಾದ ಜಮೀನನ್ನು ಕಿತ್ತುಕೊಂಡು ಹಿಂದಿನ ಭಾರಿ ಭೂಮಾಲಕರಿಗೆ ಕೊಡುವ ಕೆಲಸ ಆರಂಭವಾಗಿದೆ. ಹಣದುಬ್ಬರ ಶೇಕಡಾ 200 ಕ್ಕೂ ಹೆಚ್ಚಿದೆ. ಆಹಾರಕ್ಕಾಗಿ ಹಾಹಾಕಾರ ಎದ್ದಿದೆ. ಹಿಂದೆ ಬಡಜನತೆ ಎಂದು ಅನ್ನಿಸಿಕೊಂಡವರು ಮಾತ್ರವಲ್ಲ ಕೆಲಸ ಕಳೆದು ಕೊಂಡ ಅಧಿಕಾರಿಗಳೂ ಆಹಾರಕ್ಕಾಗಿ ಹಾಹಾಕಾರ ಎಬ್ಬಿಸಿದ್ದಾರೆ.

ಸ್ವಾಭಾವಿಕವಾಗಿಯೇ ಸರಕಾರದ ವಿರುದ್ಧ ಜನತೆಯ ಹೋರಾಟದ ನೇತೃತ್ವವನ್ನು ಸ್ಯಾಂಡಿನಿಸ್ಟಾಗಳು ವಹಿಸಿದ್ದಾರೆ. ರಾಜಕೀಯ ಮುಷ್ಕರ ಹೂಡಿರುವ ಕಾರ್ಮಿಕ ವರ್ಗದ ಕಾರ್ಯಾಚರಣೆಯಿಂದ ಸರಕಾರ ತತ್ತರಿಸಿದೆ. ಹಿಂದಿನ ಸರ್ವಾಧಿಕಾರಿ ಸಮೋಜೊ ಆಡಳಿತದಲ್ಲಿದ್ದಂತೆ ಕೆಲವು ಶ್ರೀಮಂತ ಕುಟುಂಬಗಳ ಐಷಾರಾಮ, ಬಡ ಜನತೆಯ ಹಾಹಾಕಾರದ ದಿನಗಳು ಮರಳಲು ಬಿಡುವುದಿಲ್ಲ ಎಂದು ಸ್ಯಾಂಡಿನಿಸ್ಟಾ ರಂಗ ಪ್ರತಿಜ್ಞೆ ಮಾಡಿದೆ. ಆಳುವ 14 ಪಕ್ಷಗಳ ಕಲಸು ಮೇಲೋಗರದ ರಂಗ ಈ ರಾಜಕೀಯ ಹೋರಾಟದ ಎದುರು ತತ್ತರಿಸುತ್ತಿದೆ.

ಲೋಕ ಸಂಚಾರ

ನೇಪಾಳ ಎತ್ತ ಸಾಗಿದೆ?

ನೇಪಾಳ ಪ್ರಜಾಸತ್ತಾತ್ಮಕ ಕ್ರಾಂತಿಯ ನಂತರ, ಅದನ್ನು ಬಲಪಡಿಸುವ, ಅದರ ವಿರುದ್ಧ ಪಿತೂರಿ ತಿರುಗಿ ತಲೆ ಎತ್ತದಂತೆ ಸದೆಬಡಿಯುವ ಸಂಕ್ರಮಣ ಸ್ಥಿತಿಯಲ್ಲಿದೆ. ನೇಪಾಳಿ ಕ್ರಾಂತಿ ಬುದ್ಧಿಜೀವಿಗಳು, ವಿದ್ಯಾರ್ಥಿಗಳು, ಮತ್ತು ರೈತರ ಬೆಂಬಲದ ಭದ್ರ ತಳಹದಿಯ ಬಗ್ಗೆ ತೀವ್ರ ಚರ್ಚೆ ನಡೆಯುತ್ತಿದೆ. ಹೊಸ ಸಂವಿಧಾನವನ್ನು ರಚಿಸುವ ವಿಧಾನದ ಬಗ್ಗೆ ಸದ್ಯಕ್ಕೆ 9 ಜನರ ಸಂವಿಧಾನದ ಬಗ್ಗೆ ಶಿಫಾರಸು ಮಾಡುವ ಸಮಿತಿ ನೇಮಿಸಲಾಗಿದೆ. ಇದರಲ್ಲಿ ಮೂವರು ಕಾಂಗ್ರೆಸ್ಸಿಗರು, ಮೂವರು ಸಂಯುಕ್ತ ಎಡರಂಗದವರು, ಮತ್ತು ಇಬ್ಬರು ರಾಜನ ಪ್ರತಿನಿಧಿಗಳು. ಮೂರು ತಿಂಗಳೊಳಗೆ ಸಂವಿಧಾನ ತಯಾರಿಸಬೇಕು ಮತ್ತು ಹೆಚ್ಚೆಂದರೆ ಒಂದು ವರ್ಷದೊಳಗೆ ಚುನಾವಣೆ ಮುಗಿದು ಹೋಗಬೇಕು ಎಂದು ಎಡರಂಗ ಒತ್ತಾಯಿಸುತ್ತಿದೆ. ಇಲ್ಲದಿದ್ದರೆ ರಾಜನ ಸಮರ್ಥಕ 'ಪಂಚ'ರು ಈಗ ಇರುವ ಸರಕಾರದ ಕಾನೂನು ಬದ್ಧತೆಯ ಸಂದಿಗ್ಧ ಪರಿಸ್ಥಿತಿ ದುರುಪಯೋಗ ಪಡಿಸಿ ಕ್ರಾಂತಿಯನ್ನು ವಿಫಲಗೊಳಿಸುವ ಸಾಧ್ಯತೆ ಇದೆ ಎನ್ನುತ್ತಾರೆ. ಏಕೆಂದರೆ ಹಳೆಯ ಸಂವಿಧಾನದ ಇನ್ನೂ ಜಾರಿಯಲ್ಲಿದೆ. ಆದರೆ ಈಗಿನ ಸರಕಾರ ಅದನ್ನು ಒಪ್ಪುವುದೂ ಇಲ್ಲ. ಅದರ ಪ್ರಕಾರ ನಡೆದುಕೊಳ್ಳುವುದೂ ಇಲ್ಲ. ಅಲ್ಲದೆ ರಾಜನ ಅಧಿಕಾರ, ಜನತೆಯ ಒತ್ತಡದಿಂದ ಮೊಟಕಾಗಿದೆ. ಸಂಧಾನಿಕವಾಗಿ ಅಲ್ಲ.

ನೇಪಾಳವನ್ನು 'ಹಿಂದೂ ರಾಜ್ಯ' ದಿಂದ ಬದಲಿಸಿ ಜಾತ್ಯತೀತ ದೇಶವನ್ನಾಗಿ ಮಾಡುವುದಕ್ಕೂ ರಾಜನ ಸಮರ್ಥಕರು ಮತ್ತು ಕೆಲವರು ಕಾಂಗ್ರೆಸ್ಸಿಗರು ವಿರೋಧವಾಗಿದ್ದಾರೆ. ಇದಲ್ಲದೆ ಭವಿಷ್ಯದ ಸಂವಿಧಾನದಲ್ಲಿ ನಾಮ ಮಾತ್ರ ಸಂವೈಧಾನಿಕ ಮುಖ್ಯಸ್ಥನಾಗಿ ರಾಜ, ಕೆಲವು ಅಧಿಕಾರಗಳಿರುವ ರಾಜ- ಹೀಗೆ ಹಲವು ಸಲಹೆಗಳು ಬಂದಿವೆ.

ಈವರೆಗೆ ಕೆಲವು ಭಿನ್ನಾಭಿಪ್ರಾಯಗಳಿದ್ದಾಗ್ಯೂ ಕಾಂಗ್ರೆಸ್ - ಎಡರಂಗದ ಸಮ್ಮಿಶ್ರ ಸರಕಾರ ಕ್ರಾಂತಿಯನ್ನು ರಕ್ಷಿಸುವುದರ ಬಗ್ಗೆ ದಿಟ್ಟ ಕ್ರಮ ಕೈಗೊಂಡಿದೆ. ಬಲ ಮತ್ತು ಎಡ ದುಸ್ಸಾಹಸವಾದಿಗಳ ಹಿಂಸಾಚಾರವನ್ನು ನಿಯಂತ್ರಿಸಿದೆ. ಈ ಐಕ್ಯತೆಯನ್ನು ಮುರಿಯಲು ರಾಜನ ಸಮರ್ಥಕರೂ ಮಾಜಿ ಪಂಚರು ಸತತ ಪ್ರಯತ್ನ ಮಾಡುತ್ತಿದ್ದಾರೆ. ಎಡರಂಗ ಕಾಂಗ್ರೆಸ್ ಜತೆ 'ಚುನಾವಣೆ ಮೈತ್ರಿ' ಮಾಡಿಕೊಳ್ಳ ಬಯಸುತ್ತದೆ. ಮಾಜಿ 'ಪಂಚರು' ಒಂದೆಡೆ ಹೊಸ ಬಲಪಂಥೀಯ ಪಕ್ಷಗಳನ್ನು ಕಟ್ಟಲು ಆರಂಭಿಸಿದ್ದಾರೆ. ಕೆಲವರು ಸಂದರ್ಭಸಾಧಕರು (ಪಂಚವ್ಯವಸ್ಥೆ ಬರುವ ಮೊದಲು ಕಾಂಗ್ರೆಸ್‌ನಲ್ಲಿ ಇದ್ದು ಸಂದರ್ಭ ಸಾಧಕತನದಿಂದ ಪಂಚಾಯತ ವ್ಯವಸ್ಥೆಯಲ್ಲಿ ಅಧಿಕಾರ ಪಡೆದವರು) ಪುನಃ ಕಾಂಗ್ರೆಸ್ ಪ್ರವೇಶಿಸಲು ತೀವ್ರ ಪ್ರಯತ್ನ ನಡೆಸುತ್ತಿದ್ದಾರೆ. ಇವರಿಗೆ ಎಡರಂಗದ ಕಾರ್ಯಕರ್ತರು ಮತ್ತು ಜನ ಬೆಂಬಲದ ಬಗ್ಗೆ ಭಾರೀ ಆತಂಕವಿದೆಯಂತೆ. 'ಇಡೀ ಜಗತ್ತೇ ಬಲಪಂಥೀಯರತ್ತ ಸಾಗುತ್ತಿರುವಾಗ, ನೇಪಾಳ ಕಂಬಾವುಟದತ್ತ ನೋಡುತ್ತಿರುವುದರ ಬಗ್ಗೆ ಅವರು ಕೈ ಹಿಸುಕಿಕೊಳ್ಳುತ್ತಿದ್ದಾರಂತೆ. ಆದರೆ ಜನತೆ ಒಮ್ಮೆ ಪ್ರಜಾಪ್ರಭುತ್ವದ ಕೊಲೆಯನ್ನು ನೋಡಿ, ಅದನ್ನು ಮರಳಿ ಪಡೆದವರು ಜಾಗರೂಕತೆಯಿಂದ ಇದ್ದಾರೆ.

ಲಿಬ್ಯಾದಲ್ಲಿ ಸ್ವಾತಂತ್ರ ಹಬ್ಬ

ಲಿಬ್ಯಾ ಎರಡು ದಶಕಗಳ ಸ್ವಾತಂತ್ರ ಹಬ್ಬವನ್ನು ಆಚರಿಸುತ್ತಿದೆ. ಇದರಲ್ಲಿ ಭಾಗವಹಿಸಲು ಕಾ॥ ಸರೋಜ್ ಚೌಧರಿಯವರ ನಾಯಕತ್ವದಲ್ಲಿ 5 ಜನರ ಸಿ.ಪಿ.ಐ (ಎಂ) ನಿಯೋಗವೊಂದು ಜೂನ್ 11-16 ರ ಅವಧಿಯಲ್ಲಿ ಲಿಬ್ಯಾಕ್ಕೆ ಭೇಟಿ ನೀಡಿತು - ಈ ಹಬ್ಬದಲ್ಲಿ ಭಾಗವಹಿಸಲು ಇಂಡೋ ಅರಬ್ ಸ್ನೇಹ ಸಂಘಟನೆಯ ಆಹ್ವಾನದ ಮೇರೆಗೆ. ಲಿಬ್ಯಾ ಶತಮಾನಗಳಿಂದ ಆಕ್ರಮಣ, ದಮನದ ಅಡಿಯಲ್ಲಿ ತತ್ತರಿಸಿತ್ತು. ಮೊದಲ ಮಹಾಯುದ್ಧದವರೆಗೆ ಅದು ಓಟೋಮನ್ (ಟರ್ಕಿ) ಸಾಮ್ರಾಜ್ಯದ ಭಾಗವಾಗಿತ್ತು. ಆಮೇಲೆ ಇಟಲಿ ಅದನ್ನು ಕಬಳಿಸಿತು. ಎರಡನೇ ಮಹಾಯುದ್ಧದಲ್ಲಿ ಇಟಲಿಯ ಸೋಲಿನ ನಂತರ ಲಿಬ್ಯಾ ಆಂಗ್ಲೋ - ಫ್ರೆಂಚ್ 'ಆಡಳಿತಕ್ಕೆ ಬಂತು. ಆಮೇಲೆ ಅಮೆರಿಕದ ಮಧ್ಯ ಪ್ರವೇಶಿಸಿ, ಲಿಬ್ಯಾಕ್ಕೆ ಅದರ ಕರಪುತ್ತಗಳಂತ ರಾಜತ್ವದಡಿಯಲ್ಲಿ 'ಸ್ವಾತಂತ್ರ' ಕೊಡಲಾಯಿತು. ಲಿಬ್ಯಾದ ರಾಜನ ಛತ್ರದಡಿಯಲ್ಲಿ ಲಿಬ್ಯಾದಲ್ಲಿ ಅಮೆರಿಕನ್ ಸೇನಾನೆಲೆಗಳನ್ನು ಸ್ಥಾಪಿಸಿತು. ಆಗ ಲಿಬ್ಯಾ ನೆಲೆಗಳು ಅಮೆರಿಕಾದ ಹೊರಗೆ ಅತಿ ದೊಡ್ಡ ಸೇನಾನೆಲೆಯಾಗಿತ್ತು.

ಅಮೆರಿಕನ್ ಅಧಿಪತ್ಯದ ಸಿಲೆಗಳ ವಿರುದ್ಧ ಜನತೆಯ ಆಕ್ರೋಶ ದಂಗೆಯಾಗಿ ಭುಗಿಲೆದ್ದು 1969 ರ ಸೆಪ್ಟೆಂಬರ್ 1 ರಂದು ಪ್ರಜಾಸತ್ತಾತ್ಮಕ ಕ್ರಾಂತಿ ಆಯಿತು - ಕರ್ನಲ್ ಗಢಾಫಿ ಅವರ ನಾಯಕತ್ವದಲ್ಲಿ ಲಿಬ್ಯಾ ಸಮಾಜವಾದಿ ಜನತಾ ಗಣರಾಜ್ಯವಾಗಿ ಘೋಷಿಸಿಕೊಂಡಿತು. ಅಂದಿನಿಂದ ಲಿಬ್ಯಾ ಅಮೆರಿಕನ್ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟವನ್ನು ಬೆಂಬಲಿಸುತ್ತಾ ಬಂದಿದೆ. ಅಮೆರಿಕ ಕರ್ನಲ್ ಗಢಾಫಿ [illegible] 'ಭಯೋತ್ಪಾದಕ' ಎಂದು ಪ್ರಚಾರ ಮಾಡುತ್ತಾ ಬಂದಿದೆ. ಇದು 1986 ರಲ್ಲಿ ಮಿಲಿಟರಿ ಆಕ್ರಮಣ ಮಾಡುವ ಮಟ್ಟಕ್ಕೆ ಹೋಯಿತು.

ಆದ್ದರಿಂದ ಇಡೀ ಸ್ವಾತಂತ್ರ ಹಬ್ಬದ ಆಚರಣೆಯಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿಯನ್ನು ಬಯಲುಗೊಳಿಸುವುದಕ್ಕೆ, ಅದರ ವಿರುದ್ಧ ಹೋರಾಟಕ್ಕೆ ಒತ್ತು ಕೊಡಲಾಗಿತ್ತು. ಅಲ್ಲದೆ ಈ ವರ್ಷದ 'ಗಢಾಫಿ ಮಾನವ ಹಕ್ಕುಗಳ ಅಂತರಾಷ್ಟ್ರೀಯ ಬಹುಮಾನ'ವನ್ನು ಪ್ಯಾಲೆಸ್ಟೀನ್ 'ಇಂತಿಫದಾ' ನಡೆಸುತ್ತಿರುವ ಮಕ್ಕಳಿಗೆ ಕೊಡಲಾಯಿತು. ಈ ಬಹುಮಾನದ ಬೆಲೆ 10 ಲಕ್ಷ ಡಾಲರುಗಳು. ಕಳೆದ ವರ್ಷ ಈ ಬಹುಮಾನವನ್ನು ನೆಲ್ಸನ್ ಮಂಡೇಲಾರಿಗೆ ಕೊಡಲಾಗಿತ್ತು.

ಈ ರೀತಿಯ ಸಹಾಯ ಬೇಡ!

ಅಮೆರಿಕನ್ ವಿದೇಶ ಮಂತ್ರಿ ಬೇಕರ್, ಸೋವಿಯತ್ ಒಕ್ಕೂಟದಲ್ಲಿ ಆಳುವ ಕಮ್ಯುನಿಸ್ಟ್ - ಪಕ್ಷದಿಂದ ಹೊರಬಂದ ಮತ್ತು ಇತರ ಗುಂಪುಗಳು ವಿರೋಧ ಪಕ್ಷವೊಂದನ್ನು ರಚಿಸಲು ಸಾಧ್ಯವಾದರೆ ಅದಕ್ಕೆ ಸರಕಾರ ಖಂಡಿತವಾಗಿಯೂ 'ಸಹಾಯ' ಕೊಡುವುದು ಎಂದು ಹೇಳಿದ್ದಾರೆ. ಪೂರ್ವ ಯುರೋಪಿನಲ್ಲಿ ಮಾಡಿದ್ದನ್ನು ನಾವು ಅಲ್ಲಿಯೂ ನಾವು ಮಾಡಲು ತಯಾರಿದ್ದೇವೆ. ಸೋವಿಯತ್ ಒಕ್ಕೂಟದ್ದು ಏನು ವಿಶೇಷ ಎಂದು ಕೇಳಿದರಂತೆ. ಇದಕ್ಕೆ ಅಧ್ಯಕ್ಷ ಗೋರ್ಬಚೇವ್ ವಕ್ತಾರರು ತೀವ್ರವಾಗಿ ಪ್ರತಿಕ್ರಿಯಿಸಿದ್ದಾರಂತೆ. ಇದು ಪೋಲೆಂಡ್‌ನಲ್ಲಿನಂತೆ ವಿರೋಧ ಪಕ್ಷಗಳಿಗೆ ಬೆಂಬಲ ಮತ್ತು ಆರ್ಥಿಕ ಸಹಾಯ'ವಾದರೆ ಇದನ್ನು ನಾವು ಸಹಿಸುವುದಿಲ್ಲ. ಇದು ಸಾರ್ವಭೌಮ ದೇಶವೊಂದರ ಆಂತರಿಕ ವಿಷಯಗಳಲ್ಲಿ ಮೂಗುತೂರಿಸುವುದು ಮಾತ್ರವಲ್ಲ, ನೈತಿಕ ಮತ್ತು ಅಂತರಾಷ್ಟ್ರೀಯ ಕಾನೂನುಗಳಿಗೆ ವಿರುದ್ಧ ಎಂದಿದ್ದಾರೆ.

ಪೋಲೆಂಡ್ ಟ್ರೇಡ್‌ಯೂನಿಯನ್ ಎಚ್ಚರಿಕೆ

65 ಲಕ್ಷ ಕಾರ್ಮಿಕ ಸದಸ್ಯತ್ವವಿರುವ ಅಖಿಲ ಪೋಲೆಂಡ್ ಟ್ರೇಡ್ ಯೂನಿಯನ್ ಒಕ್ಕೂಟವು ಪೋಲೆಂಡ್ ಸರ್ಕಾರ ತನ್ನ ಆರ್ಥಿಕ ನೀತಿಗಳನ್ನು ಬದಲಾಯಿಸದಿದ್ದರೆ ತೀವ್ರ ಚಳುವಳಿ ಎದುರಿಸಬೇಕಾದೀತು ಎಂದು ಎಚ್ಚರಿಕೆ ನೀಡಿದೆ. 680 ಪ್ರತಿನಿಧಿಗಳು ಭಾಗವಹಿಸಿದ್ದ ಒಂದು ಅಧಿವೇಶನ ನಡೆದಿದ್ದು ಅದು ಸಾಲಿಡಾರಿಟಿ ಟ್ರೇಡ್ ಯೂನಿಯನ್ ಕಾರ್ಮಿಕ ವರ್ಗಕ್ಕೆ ಬೆನ್ನಿನಲ್ಲಿ ಇರಿಯುತ್ತಿದೆ ಎಂದು ಟೀಕಿಸಿದೆ. ಆದರೆ ಸರ್ಕಾರದ ನೀತಿಗಳ ವಿರುದ್ಧ ಹೋರಾಟದಲ್ಲಿ ಭಾಗವಹಿಸಲು, ಸಾಲಿಡಾರಿಟಿ, ಯೂನಿಯನ್‌ಗಳಿಗೂ ಆಹ್ವಾನ ನೀಡಿದೆ.

ಪೂರ್ವ ಜರ್ಮನ್ ಸರಕಾರದಲ್ಲಿ ಬಿಕ್ಕಟ್ಟು

ಲಿಬರಲ್, ಸೋಶಿಯಲ್ ಡೆಮಾಕ್ರಾಟಿಕ್ ಮತ್ತು ಕ್ರಿಶ್ಚಿಯನ್ ಡೆಮಾಕ್ರಾಟ್ ಪಕ್ಷಗಳ ಒಕ್ಕೂಟದ ಸರಕಾರದಲ್ಲಿ ಬಿಕ್ಕಟ್ಟು ಉಂಟಾಗಿದೆ. ಡಿಸೆಂಬರ್ 1 ರಂದು ಅಂದರೆ ಪಶ್ಚಿಮ ಜರ್ಮನಿಯ ಚುನಾವಣೆಗಳು ನಡೆಯುವ ಒಂದು ದಿನದ ಮೊದಲು ಎರಡು ಜರ್ಮನಿಗಳನ್ನು ಒಗ್ಗೂಡಿಸಬೇಕೆಂಬ ನಿರ್ಣಯ ಪೂ.ಜರ್ಮನಿಯ ಪಾರ್ಲಿಮೆಂಟ್‌ನಲ್ಲಿ ಬಿದ್ದು ಹೋಯಿತು. ಇದನ್ನು ಲಿಬರಲ್ ಪಕ್ಷ ಮಂಡಿಸಿದ್ದು, ಉಳಿದ ಆಳುವರಂಗದ ಪಕ್ಷಗಳೂ ಸಮರ್ಥಿಸಿದರೂ ಕ್ರಿಶ್ಚಿಯನ್ ಡೆಮೋಕ್ರಾಟ್ ಪಕ್ಷ ವಿರೋಧಿಸಿತು. ಈ ರೀತಿ ಗಡಿಬಿಡಿಯಲ್ಲಿ ಐಕ್ಯತೆ ಸಾಧಿಸುವುದು ಪೂಜರ್ಮನಿಯ ಹಿತಾಸಕ್ತಿಗೆ ಸಲ್ಲ. ಈ ರೀತಿ ನಿರ್ಣಯ ತೆಗೆದುಕೊಂಡರೆ ಐಕ್ಯತೆಯನ್ನು ಕಾರ್ಯಗತ ಮಾಡುವ ವಿವರಗಳು, ಸಮಸ್ಯೆಗಳು ಬಗ್ಗೆ ಎರಡೂ ಸರಕಾರ ನಡೆಸುತ್ತಿರುವ ಮಾತುಕತೆಗಳಿಗೆ ಏನೂ ಅರ್ಥವಿರುವುದಿಲ್ಲ. ಎಂದು ಅವರ ವಾದ. ಈ ನಡುವೆ ಜರ್ಮನ್ ಐಕ್ಯತೆ ಬಗ್ಗೆ ಸೋವಿಯತ್ ಒಕ್ಕೂಟ ಇದ್ದ ಅಡೆತಡೆಗಳನ್ನು ಬಿಟ್ಟು ಕೊಡಲು ನಿರ್ಧರಿಸಿದೆ. ಐಕ್ಯ ಜರ್ಮನಿಯ ನಾಟೋ ಸದಸ್ಯತ್ವ , ಅಲ್ಲಿಯ ಜನತೆಯ ನಿರ್ಧಾರಕ್ಕೆ ಬಿಟ್ಟಿದ್ದು ಎಂದು ಅದು ಹೇಳಿದೆ.

ಡಿ.ವೈ.ಎಫ್.ಐ.ನ ಎಲ್ಲಾ ಘಟಕಗಳಿಗೆ

ಕೇಂದ್ರ ಸಮಿತಿ ಸಭೆಯು ಈ ತಿಂಗಳ 11-12 ರಲ್ಲಿ ದೆಹಲಿಯಲ್ಲಿ ನಡೆದು ಹಲವು ತೀರ್ಮಾನಗಳನ್ನು ತೆಗೆದುಕೊಂಡಿದೆ.

ಅದರಂತೆ ಆಗಸ್ಟ್ 6ರಂದು ಹಿರೋಷಿಮಾ ದಿನಾಚರಣೆಯನ್ನು ಆಚರಿಸುವುದು. ಆಗಸ್ಟ್ 9-15 ಕೋಮು ವಿರೋಧಿ ಸಪ್ತಾಹವನ್ನು ಆಚರಿಸುವುದು. ಸೆಪ್ಟೆಂಬರ್ ನಿಂದ ನವೆಂಬರ್ ವೇಳೆಗೆ ಹೋರಾಟದ ದಶಕ ಆಚರಿಸುವುದು. ಅದರ ಜೊತೆಯಲ್ಲಿ ದುಡಿಯುವ ಹಕ್ಕಿನ ಬಗ್ಗೆ ಪ್ರಚಾರ ಪ್ರಕ್ಷೋಭೆ ನಡೆಸುವುದು ಎಂದು ತೀರ್ಮಾನಿಸಲಾಗಿದೆ. ಅದರಂತೆ ಕರ್ನಾಟಕ ರಾಜ್ಯ ಸಮಿತಿಯು ನವೆಂಬರ್ ತಿಂಗಳ ಮೊದಲವಾರದಲ್ಲಿ ಬೆಂಗಳೂರಿನಲ್ಲಿ ಬೃಹತ್ ರಾಜ್ಯ ಮಟ್ಟದ ಯುವ ಉತ್ಸವವನ್ನು ನಡೆಸಲು ತೀರ್ಮಾನಿಸುತ್ತದೆ.

— ಎಸ್. [illegible]

ಇನಾಂ ಭೂಮಿ ಸಾಗವಳಿ ಬೇರೆಯವರಿಗೆ ರೈತ ಸಂಘ ಧರಣಿ

ಕಿಂಚನ ಗುಡ್ಡಿ ಗ್ರಾಮದ ಗಂಗಾಧರೇಶ್ವರ ದೇವಸ್ಥಾನದ ಇನಾಂ ಭೂಮಿಯನ್ನು ಭೂರಹಿತ ಕೃಷಿ ಕಾರ್ಮಿಕರು ಸಾಗುವಳಿ ಮಾಡುತ್ತಿದ್ದು ಅದನ್ನು ಆಂಧ್ರದ ಭೂ ಮಾಲೀಕರಿಗೆ ಸಾಗುವಳಿ ಮಾಡಲು ನೀಡಿದ್ದನ್ನು ಪ್ರತಿಭಟಿಸಿ ಕರ್ನಾಟಕ ಪ್ರಾಂತ ರೈತ ಸಂಘ, ಸಿರುಗುಪ್ಪದ ತಾಲ್ಲೂಕು ಕಚೇರಿಯಮುಂದೆ ಧರಣಿ ಸತ್ಯಾಗ್ರಹ ಏರ್ಪಡಿಸಿತ್ತು.

ಧರಣಿಯ ನಂತರ ತಹಸೀಲ್ದಾರ್ ರವರಿಗೆ ಮನವಿಪತ್ರ ನೀಡಲಾಯಿತು. ಕಿಂಚನಗುಡ್ಡಿ ಗ್ರಾಮದ ದೇವಾಲಯಗಳ ಟ್ರಸ್ಟ್ ಸಮಿತಿಗಳನ್ನು ಕೂಡಲೇ ವಿಸರ್ಜಿಸಿ ಅದನ್ನು ಸರ್ಕಾರ ವಹಿಸಿಕೊಳ್ಳಬೇಕು. ಉಳುವವನೇ ಭೂ ಒಡೆಯ ಎಂಬ ಘೋಷಣೆಯನ್ನು ಜಾರಿಗೆ ತರಬೇಕು ಇನಾಂ ಭೂಮಿಗಳ ಸಾಗುವಳಿಯನ್ನು ಬಡ ಭೂರಹಿತರಿಗೆ ಬೇಸಾಯ ಮಾಡಲು ಕೊಡಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಈ ಮೇಲಿನ ಬೇಡಿಕೆಗಳು ಈಡೇರದಿದ್ದರೆ ಪಿಕೆಟಿಂಗ್, ರಸ್ತೆ ತಡೆ, ಜೈಲು ಭರೋ ಚಳವಳಿ ನಡೆಸಲಾಗುವುದು ಎಂದು ಬಿ.ಈರಣ್ಣ ತಿಳಿಸಿದ್ದಾರೆ.

ಈ ಧರಣಿಗೆ ಭಾರತ ವಿದ್ಯಾರ್ಥಿ ಫೆಡರೇಷನ್, ಡಿವೈಎಫ್ಐ, ಸಿಐಟಿಯು ಬೆಂಬಲ ವ್ಯಕ್ತಪಡಿಸಿತ್ತು.

DYFI ಸದಸ್ಯತ್ವಕ್ಕೆ ನೊಂದಾವಣೆ ಆರಂಭ

ಉಳ್ಳಾಲ ಕ್ಷೇತ್ರ ಸಮಿತಿ ಸದಸ್ಯತ್ವ ನೊಂದಾವಣೆಗೆ ಕಾರ್ಯಕ್ರಮ ಹಾಕಿದ್ದು ಒಂದು ವಾರದಲ್ಲಿ ಒಂದು ಸಾವಿರಕ್ಕೂ ಮಿಕ್ಕಿ ಸದಸ್ಯತ್ವ ಮಾಡಲಾಗಿದೆ. ಈ ಕ್ಷೇತ್ರದಲ್ಲಿ 5 ಸಾವಿರ ಸದಸ್ಯತ್ವದ ಗುರಿ ಹೊಂದಲಾಗಿದೆ. ಪಜೀರಿನ DFF ಸದಸ್ಯರ ಮೇಲೆ ಗೂಂಡಾಗಳು ನಡೆಸಿದ ಮಾರಕ ಹಲ್ಲೆಯನ್ನು ಖಂಡಿಸಿ, ಪೋಲೀಸರು ಗೂಂಡಾಗಳನ್ನು ಬಂಧಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಂಬಂಧ ಪಟ್ಟವರನ್ನು

ನನ್ನ ಮನಮುಟ್ಟಿದ ಘಟನೆ

ನಮ್ಮ ಕಣ್ಣ ಮುಂದೆಯೇ ಅನೇಕ ಘಟನೆಗಳು ಕ್ರಾಂತಿಕಾರಿಗಳಾದ ನಮ್ಮ ಮನಸ್ಸನ್ನು ಕಲಕುವ ಮನ ಮುಟ್ಟುವ ನಮ್ಮ ಚಳುವಳಿಯಲ್ಲಿ ನೆಟ್ಟಿಗೆ ಮೂಡಿಸುತ್ತವೆ. ಕಾರ್ಮಿಕರ, ರೈತರ, ಸಾಮಾನ್ಯ ಜನರ ವೀರಾವೇಶದ ಕೃತ್ಯಗಳು ಹೋರಾಟಗಳಲ್ಲಿ: ಹೋರಾಟಗಳ ಸೋಲಿನಲ್ಲೂ, ದಿನನಿತ್ಯದ ಬದುಕಿನಲ್ಲೂ ನಡೆಯುತ್ತಿರುತ್ತವೆ. ನಿಮ್ಮ ಮನಸ್ಸಿಗೆ ತಾಕಿದ ಘಟನೆ 'ಐಕ್ಯರಂಗ' ದ ಓದುಗರಲ್ಲಿನ ಮನಸ್ಸಿಗೆ ಮುಟ್ಟಲು ಒಂದರಿಂದ ಎರಡು ಫುಲ್‌ಸ್ಕೇಪ್ ಪುಟಗಳಲ್ಲಿ ಬರೆದು ಕಳುಹಿಸಿ.

ನಿಮ್ಮ ಪತ್ರಿಕೆ 'ಐಕ್ಯರಂಗ'ದಲ್ಲಿ ಹೊಸ ಶೀರ್ಷಿಕೆಗಳು. ಓದುಗರಿಗೆ ವಿಪುಲ ಅವಕಾಶ ನೀಡುವ ಪುಟಗಳು. ಎಲ್ಲಾ ಸಂಗಾತಿಗಳೂ ಉತ್ಸಾಹದಿಂದ ಪಾಲ್ಗೊಳ್ಳುವ ಅವಕಾಶ.


KRNW/BGS-312 MAG (2) PRB DECR 319-78/79

'ಐಕ್ಯರಂಗ' ವಿಳಾಸ ಬದಲಾವಣೆ

ಓದುಗರ, ಚಂದಾದಾರರ, ಏಜೆನ್ಸಿದಾರರ ಗಮನಕ್ಕೆ

ಸಿ.ಪಿ.ಐ.(ಎಂ) ಕರ್ನಾಟಕ ರಾಜ್ಯಸಮಿತಿ ಹಾಗೂ 'ಐಕ್ಯರಂಗ' ಈ ಕೆಳಗಿನ ಹೊಸ ವಿಳಾಸದಲ್ಲಿ ಈಗ ಕಾರ್ಯ ನಿರ್ವಹಿಸುತ್ತಿದೆ. ಓದುಗರು, ಚಂದಾದಾರರು, ಏಜನ್ಸಿದಾರರು ಇನ್ನು ಮುಂದೆ ಈ ವಿಳಾಸದೊಂದಿಗೆ ವ್ಯವಹರಿಸಬೇಕೆಂದು ಕೋರುತ್ತೇವೆ.

95- A(ಮಹಡಿ), 2ನೇ ಅಡ್ಡ ರಸ್ತೆ,
ಮುನೇಶ್ವರ ಬ್ಲಾಕ್, ರಾಜಮಹಲ್ ಗುಟ್ಟಹಳ್ಳಿ
ಬೆಂಗಳೂರು 560003.
ದೂರವಾಣಿ ನಂಬರು: 366489.



ಜನರ ಒತ್ತಾಯ ಮನ್ನಿಸಿ ಒಳಜಗಳ ನಿಲ್ಲಿಸಿ

ಪುಟ 1 ರಿಂದ

ಮಾಡಿದ್ದು ಸರಿಯೇ ಎಂಬ ಪ್ರಶ್ನೆ. ಪ್ರಜಾಪ್ರಭುತ್ವ ಪ್ರಕ್ರಿಯೆಯೇ ಬುಡ ಮೇಲಾಯಿತು. ಪ್ರಜಾಪ್ರಭುತ್ವದ್ದೇ ಭಾಗವಾದ ಈ ಮೌಲ್ಯಗಳಿಲ್ಲದಿದ್ದರೆ ಪ್ರಜಾಪ್ರಭುತ್ವ ಎಂಬುದೊಂದು ಪೊಳ್ಳು, ನಿರ್ಜೀವ ಪರಿಕಲ್ಪನೆಯಷ್ಟೆ.

ಚೌತಾಲಾರ ರಾಜೀನಾಮೆ, ಮರುಸ್ಥಾಪನೆ, ನಂತರ ಮುಖ್ಯಮಂತ್ರಿಪದವಿಯಿಂದ ಸುಮಾರಾಗಿ ಬರ್ಖಾಸ್ತು ಎಂದೇ ಹೇಳಬಹುದಾದ ಪರಿಸ್ಥಿತಿ-ಇವೆಲ್ಲದರಲ್ಲಿ ಲೋಕಸಭಾ ಚುನಾವಣೆಯ ಮೊದಲು, ಚುನಾವಣೆಯ ಸಮಯದಲ್ಲಿ ಮತ್ತು ನಂತರ ಎತ್ತಿ ಹಿಡಿದ ಮೌಲ್ಯವ್ಯವಸ್ಥೆಗೆ ಮರ್ಮ.ಭೇಧೀ ಹೊಡೆತ ಬಿದ್ದಿದೆ. ಈ ದೈತ್ಯ ತಪ್ಪಿಗೆ ಚೌತಾಲಾರಷ್ಟೇ ಅಲ್ಲ, ಜನತಾದಳ ಮತ್ತು ರಾಷ್ಟ್ರೀಯ ರಂಗದ ಸಮಸ್ತ ಮುಖಂಡತ್ವವೇ ಹೊಣೆ.

ಈ ಕೆಟ್ಟ ಘಟನೆ ಸದ್ಯಕ್ಕಂತೂ ಮುಗಿದಿದೆ. ಆದರೆ ತನ್ನ ಹಿಂದೆ ಕಹಿ ಭಾವನೆ ಬಿಟ್ಟು ಹೋಗಿದೆ. ಒಂದು ವಾರದ ಮಟ್ಟಿಗೆ ಈ ದೇಶದ ಜನರ ಮನಸ್ಸನ್ನು ಭಯ, ಆತಂಕ ಆವರಿಸುವಂತೆ ಮಾಡಿ ಜನರಲ್ಲಿ ಸಿನಿಕತನವನ್ನು ಪುನರುಜ್ಜೀವನಗೊಳಿಸಿತು. ಈ ಸಿನಿಕತನವೆಂಬುದು ಎಂತಹ ಮನಃಸ್ಥಿತಿಯೆಂದರೆ ವ್ಯಕ್ತಿ ಪ್ರತಿಯೊಬ್ಬರಲ್ಲೂ, ಪ್ರತಿಯೊಂದರಲ್ಲೂ ವಿಶ್ವಾಸ ಕಳೆದುಕೊಳ್ಳುತ್ತಾನೆ.

ಚೌತಾಲಾರ ಬೃಹತ್ ಯೋಜನೆಯ ಚೌಕಟ್ಟಿನೊಳಗೆ ಇನ್ನೊಬ್ಬ ಮುಖಂಡ ಒಂದು ಉಪಯೋಜನೆಯ ಬಲೆ ಹೆಣೆಯುತ್ತಿದ್ದಾನೆಂದರೆ, ಜನ ಈಗಾಗಲೇ ಅಸಂತುಷ್ಟರಾಗಿದ್ದಾರೆ ಎಂಬುದನ್ನು ಜನತಾದಳದ ಮುಖಂಡರು ನೆನಪಿಸಿಕೊಳ್ಳಬೇಕು. ಅರಮನೆ ಪಿತೂರಿಗಳಲ್ಲಿ ಜನಗಳಿಗೆ ನಂಬಿಕೆಯಿಲ್ಲ. ಎಲ್ಲಾ ಜೀವನಾವಶ್ಯಕ ಸಾಮಗ್ರಿಗಳ ಬೆಲೆಗಳ ನಾಗಾಲೋಟ, ದೈತ್ಯಗಾತ್ರದ ನಿರುದ್ಯೋಗ, ಸುಮಾರಾಗಿ ವಿಘಟನೆಗೊಳ್ಳುತ್ತಿರುವ ಆರ್ಥಿಕ-ಇವೆಲ್ಲದರಿಂದಾಗಿ ದೈನಂದಿನ ಬದುಕಿನ ಹೋರಾಟದಲ್ಲೇ ಅವರು ಮುಳುಗಿರಬೇಕಾದ ಪರಿಸ್ಥಿತಿ. ಸರಕಾರ ಗಮನ ಕೊಡಬೇಕಾದ ಬೇರೆ ಗಂಭೀರ ಕೆಲಸಗಳಿವೆ. ಆದ್ದರಿಂದ ಸರಕಾರದಲ್ಲಿರುವ ಜನತಾದಳದ ಮುಖಂಡರು ಸಣ್ಣತನದ ರಾಜಕೀಯ ನಡೆಸುವುದನ್ನುನಿಲ್ಲಿಸಿ ಸಮಸ್ಯೆಗಳ ಪರಿಹಾರದತ್ತ ಗಂಭೀರ ಗಮನ ನೀಡುವ ಸಮಯ ಬಂದಿದೆ.

ಜನ ಗಮನವಿಟ್ಟು ನೋಡುತ್ತಿದ್ದಾರೆ ಎಂಬುದನ್ನು ಜನತಾದಳ ಮುಖಂಡತ್ವ ಮರೆಯದಿರಲಿ. ಕೆಲವು ಪ್ರತಿಜ್ಞೆಗಳ ಆಧಾರದ ಮೇಲೆ ಸರಕಾರ ರಚಿಸಲು, ರಂಗ ಸರಕಾರವನ್ನು ಆರಿಸಿದ್ದಾರೆ.ಭಾರತದ ಜನತೆ ಸರಕಾರದ ಪ್ರಧಾನ ಲಕ್ಷ್ಯವಾಗಬೇಕು. ಜನತೆ ನಾವಿತ್ತ ತೀರ್ಪನ್ನು, ನೀವಿತ್ತ ವಚನಗಳನ್ನು ಪಾಲಿಸಿ ಎಂದು ಒತ್ತಾಯಿಸುತ್ತಾರೆ.

> ಅರಮನೆ ಪಿತೂರಿಗಳಲ್ಲಿ ಜನಗಳಿಗೆ ನಂಬಿಕೆಯಿಲ್ಲ. ದೈನಂದಿನ ಬದುಕಿನ ಹೋರಾಟದಲ್ಲಿ ಮುಳುಗಿರಬೇಕಾದ ಪರಿಸ್ಥಿತಿ ಅವರದ್ದು. ಆದ್ದರಿಂದ ಸರಕಾರದಲ್ಲಿರುವ ಜನತಾದಳದ ಮುಖಂಡರು ಸಣ್ಣತನದ ರಾಜಕೀಯ ನಡೆಸುವುದನ್ನು ನಿಲ್ಲಿಸಿ ಅವರ ಸಮಸ್ಯೆಗಳ ಪರಿಹಾರದತ್ತ ಗಮನ ನೀಡಬೇಕಾದ ಸಮಯ ಬಂದಿದೆ.

ಈ ವಾರ

★ ..ನಮ್ಮ ಸ್ಥೂಲ ರಾಷ್ಟ್ರೀಯ ಉತ್ಪನ್ನ; ಮೊದಲನೆ ಪಂಚವಾರ್ಷಿಕ ಯೋಜನೆಯಲ್ಲಿ ಶೇ. 3.7 ರ ವಾರ್ಷಿಕ ದರದಲ್ಲಿ ಏರಿಕೆ ಸಾಧಿಸಿದರೆ, ಇದೀಗ ಮುಗಿದ ಏಳನೆಯ ಯೋಜನೆಯಲ್ಲಿ ಶೇ. 5.5 ರಂತೆ ವಾರ್ಷಿಕ ಏರಿಕೆಯಾಗಿದೆ. ಆದರೂ ಶ್ರೀ ಸಾಮಾನ್ಯನ ಸ್ಥಿತಿಗತಿಯೇನೂ ಅಷ್ಟೇನೂ ಸುಧಾರಿಸಿಲ್ಲ. ನಿರುದ್ಯೋಗ, ಅನಕ್ಷರತೆ, ಅನಾರೋಗ್ಯ, ಜೀವನದ ದುಃಸ್ಥಿತಿ ಮುಂತಾದವು ಕಾಡಿಸುತ್ತಿವೆ.

ಎಚ್ಚೆಸ್ಕೆ - ಅರ್ಥಿಕ ಚಿಂತನೆ ಅಂಕಣದಲ್ಲಿ
ಪ್ರಜಾವಾಣಿ 16.7.90

★ ವಿಜಯ ತುಂಬಾ ದೂರದಲ್ಲಿದೆ. ಕೊನೆಯ ಮೈಲಿಯನ್ನು ಕ್ರಮಿಸುವುದು ಬಹಳ ಕಠಿಣವೆನಿಸಬಹುದು. ಆದರೆ ಗುರಿಸೇರುವ ನಮ್ಮನ್ನು ಯಾರೂ ತಡೆಯಲಾರರು.

ನೆಲ್ಸನ್ ಮಂಡೇಲಾ

★ ಸೆರೆಮನೆ ಅಧಿಕಾರಿಗಳನ್ನು ಇಂದು ಸ್ವಾತಂತ್ರ್ಯದ ಹಾದಿಯಲ್ಲಿ ನಡೆಸುವವನು ಒಬ್ಬ ಕೈದಿ.

.ಫ್ರಾನ್ಸ್ ಅಧ್ಯಕ್ಷ ಮಿತ್ತೆರಾ
ನೆಲ್ಸನ್ ಮಂಡೇಲರ ಕುರಿತು.

★ ಎಲ್.ಡಿ.ಎಫ್.ನ ಸಚಿವರ ಶುಭ್ರ ಪ್ರತಿಷ್ಠೆಗೆ ಯಾವುದೇ ಹಾನಿಯಾಗದೆ ಅದು ಕೇರಳದ ಎಡಪ್ರಜಾಸತ್ತಾತ್ಮಕ ರಂಗ ಸರಕಾರ ಪೂರ್ಣ ಅವಧಿಯನ್ನು ಪೂರೈಸುವುದು ಎಂಬುದರಿಂದ ಕಾಂಗ್ರೆಸ್ (ಐ) ರಾಜಕೀಯ ಹತಾಶೆಯಿಂದ ಬಳಲುತ್ತಿರುವುದು ಸ್ಪಷ್ಟವಾಗಿದೆ. ಹಿಂದೆ ಕರುಣಾಕರನ್ ಮಂತ್ರಿಮಂಡಲದ (ಕಾಂಗ್ರೆ) ವಿರುದ್ಧ ಪರಿಣಾಮಕಾರಿಯಾದ ಭ್ರಷ್ಟಾಚಾರ ಆರೋಪಗಳ ತಂತ್ರ ನಾಯನಾರ್ ಸರಕಾರದ ವಿರುದ್ಧವೂ ಯಶಸ್ವಿಯಾದೀತೆಂಬ ಕಾಂಗ್ರೆ ಆಶೆಯ ತಪ್ಪಾಗಿದೆ.

'ಇಂಡಿಯನ್ ಎಕ್ಸ್‌ಪ್ರೆಸ್' ವಾರ್ತಾ ಪತ್ರದಲ್ಲಿ
1990 ಜುಲೈ

★ ಪಾಕಿಸ್ತಾನಕ್ಕೆ ಅಫ್ಘಾನಿಸ್ತಾನದ ಕುರಿತು ತನ್ನದೇ ಆದ ನೀತಿ ಎಂಬುದಿಲ್ಲ. ಅದು ಅಮೆರಿಕಾದ ನೀತಿಯೇ ಆಗಿತ್ತು.

ಅಫ್ಘಾನಿಸ್ತಾನವನ್ನು ಅಸ್ಥಿರಗೊಳಿಸುವ ಉತ್ಸಾಹದಲ್ಲಿ ಜಿಯಾವುಲ್ ಹಕ್ ಅವರು ಪಾಕಿಸ್ತಾನವನ್ನೇ ಅಸ್ಥಿರತೆಯ ದವಡೆಗೆ ನೂಕಿದರು.

ಅಬ್ದುಲ್ ಅಲಿಖಾನ್
ಪಾಕಿಸ್ತಾನದ ಪ್ರತಿಪಕ್ಷ ಅನಾಮಿ ಲೀಗ್
ಇತ್ತೀಚೆಗೆ ಭಾರತಕ್ಕೆ ಆಗಮಿಸಿದಾಗ ಪತ್ರಿಕೆಗಳಿಗೆ ನೀಡಿದ ಸಂದರ್ಶನದಲ್ಲಿ

★ ದಕ್ಷಿಣ ಕೊರಿಯಾದಲ್ಲಿ ಕಳೆದ 10 ವರ್ಷಗಳಲ್ಲಿ ಅಪರಾಧ ಪ್ರಮಾಣ ಜನಸಂಖ್ಯೆ ಹೆಚ್ಚಳದ ಪ್ರಮಾಣಕ್ಕಿಂತ 10 ಪಟ್ಟು ಹೆಚ್ಚಿದೆ. ಕಳೆದ ವರ್ಷ ದೇಶದಲ್ಲಿ 10,43,901ಅಪರಾಧಗಳು ವರದಿಯಾಗಿದ್ದವು. 1980 ರಲ್ಲಿ ಅದು 6,20,710 ಆಗಿತ್ತು. ಅಂದರೆ ಇದು ಸುಮಾರು .68 ಶೇಕಡಾ ಹೆಚ್ಚಳವಾಗಿದೆ. ಈ ಅವಧಿಯಲ್ಲಿ ಜನಸಂಖ್ಯೆಯ ಹೆಚ್ಚಳವಾಗಿರುವುದು ಕೇವಲ 11 ಶೇ.

ದ.ಕೊರಿಯಾ
ಸುದ್ದಿ ಸಂಸ್ಥೆ
ಜುಲೈ 19

★ ಸರಕಾರ ಉನ್ನತ ಶಿಕ್ಷಣಕ್ಕೆ ಪ್ರತಿವರ್ಷ 2600ಕೋಟಿ ರೂ. ವ್ಯಯಿಸುತ್ತಿದ್ದರೂ 30 ಶೇಕಡಾ ಹಳ್ಳಿಗಳಲ್ಲಿ ಶಾಲಾಕಟ್ಟಡಗಳಿಲ್ಲ.

ಚಿಮನ್ ಭಾಯಿಪಟೇಲ್
ಮಾನವಸಂಪನ್ಮೂಲ ಅಭಿವೃದ್ಧಿ ಖಾತೆ ಸಹಾಯಕ
ಸಚಿವ,ಭೋಪಾಲ್‌ನಲ್ಲಿ ಸುದ್ದಿಯಲ್ಲಿ

ಸೆರೆಮನೆ ಅಧಿಕಾರಿಗಳನ್ನು ಇಂದು ಸ್ವಾತಂತ್ರ್ಯದ ಹಾದಿಯಲ್ಲಿ ನಡೆಸುವವನು ಒಬ್ಬ ಕೈದಿ.

ಫ್ರಾನ್ಸ್ ಅಧ್ಯಕ್ಷ ಮಿತ್ತೆರಾ
ನೆಲ್ಸನ್ ಮಂಡೇಲಾ ಕುರಿತು

ಪುಟ 10ರಿಂದ

ಸಂಗತಿ ಎಂದು ಹೇಳುತ್ತಿಲ್ಲ. ಆದರೆ ಅದರಲ್ಲೊಂದು ಗಮನಾರ್ಹ ವಿಭಾಗವಂತೂ ಈ ರೀತಿ ತತ್ವ ಝಾಧಿಸುವ ಹವ್ಯಾಸ ಇಟ್ಟುಕೊಂಡಿರುವುದೂ ಅಷ್ಟೇ ನಿಜ. ಆದ್ದರಿಂದ ಕಮ್ಯುನಿಸ್ಟರ ಜೀವ, ಮನೆ ಮಾರುಗಳ ಮೇಲೆ ಘಾತಕ ಹಲ್ಲೆಗಳು ಅವರಿಗೆ ಸುದ್ದಿಗಳೇ ಅಲ್ಲ.

ಕಾಂ. ನೃಪೇನ್ ಚಕ್ರವರ್ತಿಯವರು ಹೇಳಿದಂತೆ, ತ್ರಿಪುರಾದ ಕಾಂಗ್ರೆ ಮುಖ್ಯಮಂತ್ರಿ ವಿಧಾನ ಸಭೆಯಲ್ಲೇ ಒಪ್ಪಿಕೊಂಡಂತೆ ಫೆಬ್ರುವರಿ 1988 ರಿಂದ 25 ಸಾವಿರ ಕೇಸುಗಳನ್ನು ಹಾಕಲಾಗಿದೆಯೆಂದರೆ, ತ್ರಿಪುರಾದ ಪ್ರತಿ 37 ವ್ಯಕ್ತಿಗಳಲ್ಲಿ ಒಬ್ಬ ಒಂದಿಲ್ಲೊಂದು ಕಾರಣಕ್ಕೆ ಆಪಾದಿತನಾಗಿದ್ದರೆ, ಅದು ಈ ಪತ್ರಿಕಾ ಮಹಾಶಯರುಗಳಿಗೇನು ಮಹಾಸುದ್ದಿ? ಅವರ 'ಆತ್ಮಸಾಕ್ಷಿ'ಯ ಸನಿಹವೂ ಸುಳಿಯದ ಸುದ್ದಿಯಿದು.

ಈ ಮಹಾಶಯರುಗಳ ಇಂತಹ ಮೌಲ್ಯ ವ್ಯವಸ್ಥೆಯ 'ಸುಂದರ' ಅನುಭವ ನಮಗೆ 1972 ರಲ್ಲಿ ದೊರೆತಿತ್ತು. ಕುಪ್ರಸಿದ್ಧ ಸಿದ್ಧಾರ್ಥ ಶಂಕರ ರಾಯ್ ಬಂಗಾಲದಲ್ಲಿ, ಅರೆಫ್ಯಾಸಿಸ್ಟ್ ಭಯೋತ್ಪಾದನೆ ಹರಿಯ ಬಿಟ್ಟಾಗ ಇಬ್ಬರು ಪ್ರಸಿದ್ಧ ಪತ್ರಕರ್ತರು, ಅದಕ್ಕೆ ಪೂರ್ಣ ಬೆಂಬಲ ನೀಡಿದರು. 1975ರಲ್ಲಿ ತುರ್ತು ಪರಿಸ್ಥಿತಿ ಹೇರಿದಾಗ ತಾವು ಕೈಕಟ್ಟಿ ಗೇಲಿ ಮಾಡಿದ, ದೇಶಕ್ಕೆ ಸುಳ್ಳು ಮಾಹಿತಿ ನೀಡಿ ಗೊಂದಲ ಎಬ್ಬಿಸುತ್ತಾರೆ ಎಂದು ತಮ್ಮ ದೂಷಣೆಗೆ ಪಾತ್ರರಾದ ಕಮ್ಯುನಿಸ್ಟರೊಂದಿಗೇ ಈ ಇಬ್ಬರು ಸುಪ್ರಸಿದ್ಧ ಪತ್ರಕರ್ತರೂ ಜೈಲಿಗೆ ತಳ್ಳಲ್ಪಟ್ಟರು! ಪಾಪ! ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಅವಿಭಾಜ್ಯ ಎಂದು ಅವರಿಗೆ ತಿಳಿದಿರಲಿಲ್ಲ! ದೇಶದ ಒಂದು ಭಾಗದಲ್ಲಿ ಪ್ರಜಾಪ್ರಭುತ್ವದ ಜ್ವಾಲೆಗೆ ತಣ್ಣೀರೆರಚಿದರೆ ದೇಶದ ಇತರೆಡೆ ಕೂಡಾ ಅದು ಉರಿಯಲಾರದು ಎಂದು ಅವರಿಗೆ ಗೊತ್ತಾಗಲಿಲ್ಲ! ಏಕೆಂದರೆ ಅವರ ಮೌಲ್ಯ ವ್ಯವಸ್ಥೆಯಲ್ಲೇ ಒಂದು ಮೂಲಭೂತ ಕೊರತೆ ಇತ್ತು.

ದುರದೃಷ್ಟವಶಾತ್ ಅಂತಹುದೇ ಸ್ಥಿತಿ ಇಂದೂ ಇದ್ದಂತಿದೆ. ತ್ರಿಪುರಾದಲ್ಲಿ ಪ್ರಜಾಪ್ರಭುತ್ವದ ಕುತ್ತಿಗೆ ಹಿಸುಕಲಾಗುತ್ತದೆ. ಪತ್ರಿಕೆಗಳು ಗಂಭೀರ ಮೌನ ತಳೆದಿವೆ. ಅಮೂಲ್ಯ ದೇಶ ಪ್ರೇಮೀ ಯುವಜನರ ಪ್ರಾಣ ಜ್ಯೋತಿಗಳನ್ನು ಅಲ್ಲಿ ನಂದಿಸಲಾಗುತ್ತಿವೆ. ಪತ್ರಿಕೆಗಳದ್ದು ಅದಕ್ಕೂ ಸ್ಮಶಾನ ಮೌನ. ತ್ರಿಪುರಾದಲ್ಲಿ ಪ್ರಜಾಪ್ರಭುತ್ವದ ಕಥೆಮುಗಿಸಿದರೆ ದೇಶದ ಇತರೆಡೆ ಅದು ಉಳಿಯಲಾರದು ಎಂದು ಅವರಿಗೆ ಮತ್ತೆ ನೆನಪಿಸಬೇಕೆ?

ತಾವು ನಿಷ್ಪಕ್ಷಪಾತಿಗಳು, ವಸ್ತುನಿಷ್ಠರು ಎಂದೆಲ್ಲಾ ಹೆಮ್ಮೆ ಈ ಪತ್ರಿಕಾ ರಂಗಕ್ಕೆ. ಇದೆಲ್ಲಾ ಕೇವಲ ನಿಮ್ಮ ಭ್ರಮೆ, ಶುದ್ಧ ಸುಳ್ಳು ಎಂದು ಅವರಿಗೆ ನೆನಪಿಸಬೇಕಾಗಿದೆ. ಕಮ್ಯುನಿಸ್ಟರ ವಿಚಾರ ಬಂದಾಗಲಂತೂ ಅವರು ಸದಾ ಪಕ್ಷಪಾತಿಗಳು ಅದರಲ್ಲಿ ಆಶ್ಚರ್ಯವೂ ಇಲ್ಲ. ಏಕೆಂದರೆ ಸಾಮಾಜಿಕ ಸ್ಥಿತಿ-ಗತಿ ಹೀಗೆಯೇ ಮುಂದುವರಿಯಬೇಕೆಂಬುದು ಅವರ ಬಯಕೆ, ಹಿತಾಸಕ್ತಿ ಕೂಡಾ. ಕಮ್ಯುನಿಸ್ಟರು ಈ ಸ್ಥಿತಿ-ಗತಿ ಬದಲಿಸಬೇಕೆನ್ನುವವರು ಅವರ ಮನೋರಥವನ್ನು ಬುಡಮೇಲು ಮಾಡುವವರು ತಾನೇ? ಆದ್ದರಿಂದ ತಮ್ಮ ಹಿತಾಸಕ್ತಿ ಕಾದುಕೊಳ್ಳಲು ಅವರು ವಸ್ತುತಃ ಕಮ್ಯುನಿಸ್ಟ್ ವಿರೋಧಿಗಳು! ಆದರೆ ತಮ್ಮ ಮೌನ ತ್ರಿಪುರಾದಲ್ಲಿ ಕಮ್ಯುನಿಸ್ಟರ ಹೇಳ ಹೆಸರಿಲ್ಲದಂತೆ ಮಾಡಬಲ್ಲದು ಎಂದು ಅವರು ಭಾವಿಸಿದ್ದರೆ ಅದು ಅವರ ಮೂರ್ಖತನ. ಈ ಬಗ್ಗೆ ಸಂಶಯವಿದ್ದರೆ ಪಶ್ಚಿಮ ಬಂಗಾಳದಲ್ಲಿ ಏನು ನಡೆಯಿತು. ಈಗೇನಿದೆ ನೆನಪಿಸಿಕೊಳ್ಳಲಿ.

(ಆಧಾರ: ಪೀಪಲ್ಸ್ ಡೆಮಾಕ್ರಸಿ
22-7-90)

ಚಾಲಂಗೋಚಿ:

ಕೋಮುವಾದದ ವಿರುದ್ಧ ಹೋರಾಟ: ಬಿ.ಜೆ.ಪಿ. ಘೋಷಣೆ.

-ಸುದ್ದಿ

ಇದನ್ನು ಗಿನ್ನಿಸ್ ದಾಖಲೆಗೆ ಸೇರಿಸಬೇಕೋ, ಪ್ರಪಂಚದ 8 ನೇ ಅದ್ಭುತ ಎಂದು ಪರಿಗಣಿಸಬೇಕೋ ಅಂತ ಪರಿಶೀಲನೆ ನಡೆಯುತ್ತಿದೆ ಎಂದು ಭಾರಿ 'ಜಾತ್ಯತೀತ' ಪಕ್ಷದ (ಬಿ.ಜೆ.ಪಿ.) ಸಭೆಗೆ ಹೋಗಿದ್ದ ಡಿಟೆಕ್ಟಿವ್ [illegible] ವರದಿ ಮಾಡಿದ್ದಾನೆ

Printed and published by P. Ramachandra Rao on behalf of Communist Party of India(Marxist), Karnataka State Committee, 95A, 2nd cross, Muneshwara Block, Palace Guttahalli, Bangalore-560003, Editor P. RAMACHANDRA RAO; Phone No. [illegible]